ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಮೇ 25 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 39 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ರಾಜ್ಯದಲ್ಲಿ ಡ್ರಗ್ಸ್ ದಂಧೆಗೆ ಬ್ರೇಕ್

● ಗೃಹ ಸಚಿವ ಡಾ.ಜಿ.ಪರಮೇಶ್ವರ ಭರವಸೆ ● ಈ ದಂಧೆ ಹತ್ತಿಕ್ಕುವ ಬಗ್ಗೆ ಸಲಹೆ ನೀಡಿ; ಬೆಂಗಳೂರಿಗೆ ಅಪಕೀರ್ತಿ ತರುವ ಮಾತನಾಡಬೇಡಿ; ಟೀಕಾಕಾರರಿಗೆ ಕಿವಿಮಾತು ● ಕಾನೂನು–ಸುವ್ಯವಸ್ಥೆ ಕಾಪಾಡಲು ಎಲ್ಲಾ ಕಠಿಣ ಕ್ರಮ ಕೈಗೊಳ್ಳಲಾಗಿದೆ ● ರಾಜ್ಯದಲ್ಲಿ ಒಳ್ಳೆ ನಾಯಕತ್ವವಿದೆ; ಒಳ್ಳೆ ಆಡಳಿತವನ್ನೂ ನೀಡ್ತೇವೇ

ಬೆಂಗಳೂರು, ಮೇ 24(ಕೆಎಂಶಿ)– ರಾಜ್ಯದಲ್ಲಿ ಡ್ರಗ್ಸ್ ದಂಧೆಯನ್ನು ಸಂಪೂರ್ಣ ಮಟ್ಟಹಾಕುವಲ್ಲಿ ಕಟ್ಟುನಿಟ್ಟಿನ ಕ್ರಮ ಕೈಕೊಳ್ಳಲಾಗಿದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ಇಂದಿಲ್ಲಿ ತಿಳಿಸಿದ್ದಾರೆ.



ಜಿ.ಪರಮೇಶ್ವರ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಸಾವಿರಾರು ಕೆಜಿ ಗಾಂಜಾ, ಎಂಡಿಎಂಎ, ಸಿಂಥೆಟಿಕ್ ಡ್ರಗ್ಸ್ ಜಪ್ತಿ ಮಾಡಲಾಗಿದೆ. ಡ್ರಗ್ಸ್ ದಂಧೆಯಲ್ಲಿ ತೊಡಗಿದ್ದ ವಿದೇಶಿಗರನ್ನು ಗಡಿಪಾರು ಮಾಡಲಾಗಿದೆ, ಈ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿದೆ ಎಂದರು. ಬೆಂಗಳೂರಿಗೆ ಅಪಕೀರ್ತಿ ತರುವಂತಹ ಮಾತುಗಳನ್ನಾಡುವುದು ಸರಿಯಲ್ಲ. ಮಾದಕ ದ್ರವ್ಯ ದಂಧೆ ತಡೆಗೆ ಸಲಹೆ ನೀಡುವುದನ್ನು



ಬಿಟ್ಟು ರಾಜಧಾನಿ ಬೆಂಗಳೂರಿಗೆ ಅಪಕೀರ್ತಿ ತರುವಂತಹ ಮಾತನ್ನು ಆಡಬಾರದು ಎಂದು ಎಚ್ಚರಿಸಿದರು.

ಕಾನೂನು–ಸುವ್ಯವಸ್ಥೆ ಕಾಪಾಡಲು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಕಳೆದ ಒಂದು ವರ್ಷದಿಂದ ಕಾನೂನು–ಸುವ್ಯವಸ್ಥೆ ಸಮಸ್ಯೆಯಾಗದಂತೆ ನೋಡಿಕೊಂಡಿದ್ದೇವೆ. ಬಿಜೆಪಿ ಆಡಳಿತದಲ್ಲಿ ಮರ್ಡರ್‌ಗಳಾಗಿರಲಿಲ್ಲವೇ, ಮರ್ಡರ್ ಆಗಬೇಕು ಅಂತ ಯಾರೂ ಅಪೇಕ್ಷಿಸುವುದಿಲ್ಲ. ಅರೋಪಿಗಳನ್ನು ಹಿಡಿದು ಕಾನೂನಿನ ಚೌಕಟ್ಟಿನಡಿ ಕ್ರಮ ತೆಗೆದುಕೊಳ್ಳುವ ಕೆಲಸ ತಕ್ಷಣವೇ ಮಾಡಿದ್ದೇವೆ. ಶೇ.95ರಷ್ಟು ಕೊಲೆ ಪ್ರಕರಣಗಳಲ್ಲಿ ಆರೋಪಿಗಳನ್ನು 24 ಗಂಟೆಗಳಲ್ಲಿಯೇ ಹಿಡಿದಿದ್ದೇವೆ. ಕಾನೂನು ಸುವ್ಯವಸ್ಥೆ ಹಾಳಾಗಿದೆ ಎಂದು ಹೇಳುವುದು ಸರಿಯಲ್ಲ. ರಾಜ್ಯದಲ್ಲಿ ಗುಂಪು–ಗಲಭೆಗಳಾಗಿಲ್ಲ. ರಾಜ್ಯದಲ್ಲಿ ನಡೆದ ಎರಡು ಹಂತದ ಲೋಕಸಭಾ ಚುನಾವಣೆ ಶಾಂತಿಯುವಾಗಿ ನಡೆದಿದೆ. ಗಣೇಶ ಹಬ್ಬದ ಸಂದರ್ಭದಲ್ಲಿ ಪ್ರತಿವರ್ಷ ಗಲಾಟೆಗಳಾಗುತ್ತಿದ್ದವು, ಈ ವರ್ಷ ಗಲಾಟೆಯಾಗದಂತೆ ಶಾಂತಿಯುತವಾಗಿ ಗಣೇಶ ಉತ್ಸವ ಆಚರಣೆ ನಡೆದಿದೆ. ಎಲ್ಲಿ ಕಾನೂನು–ಸುವ್ಯವಸ್ಥೆ ಸಮಸ್ಯೆಯಾಗಿದೆ ಎಂಬುದನ್ನು ಹೇಳಲಿ. ಚುನಾವಣೆಯಲ್ಲಿ ಜನ ನಮಗೆ ಆಶೀರ್ವಾದ ಮಾಡಿದ್ದಾರೆ.

● 6ನೇ ಪುಟಕ್ಕೆ

ಕಲುಷಿತ ನೀರು ಸೇವನೆಯಿಂದ ಸಾವು ಪ್ರಕರಣ: ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ ನೀರಿನ ಪರೀಕ್ಷೆ





ಮೈಸೂರು ಮಹಾನಗರ ಪಾಲಿಕೆ ವಾಣಿವಿಲಾಸ ವಾಟರ್ ವರ್ಕ್ಸ್, ಆರೋಗ್ಯ ಇಲಾಖೆ ಸಿಬ್ಬಂದಿ ಮನೆ, ಹೋಟೆಲ್, ಗ್ರಾಮಗಳಲ್ಲಿ ನೀರಿನ ಸ್ಯಾಂಪಲ್ ಸಂಗ್ರಹಿಸುತ್ತಿರುವುದು.

ಮೈಸೂರು, ಮೇ 24(ಆರ್‌ಕೆ)– ಕೆ.ಸಾಲುಂಡಿಯಲ್ಲಿ ಕಲುಷಿತ ನೀರು ಸೇವಿಸಿ ಓರ್ವ ಸಾವನ್ನಪ್ಪಿ ಗ್ರಾಮದ 40ಕ್ಕೂ ಹೆಚ್ಚು ಮಂದಿ ಅಸ್ವಸ್ಥಗೊಂಡಿರುವ ಪ್ರಕರಣದ ಹಿನ್ನೆಲೆಯಲ್ಲಿ ಜಿಲ್ಲಾಡಳಿತವು ಪೂರೈಕೆಯಾಗುತ್ತಿರುವ ಕುಡಿಯುವ ನೀರಿನ ಪರೀಕ್ಷಾ ಕಾರ್ಯ ಆರಂಭಿಸಿದೆ.

ಎರಡು ಗ್ರಾಮಗಳಲ್ಲಿ ವಾಂತಿ–ಭೇದಿ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಕಲುಷಿತ ನೀರು ಪೂರೈಕೆಯೇ ದುರಂತಕ್ಕೆ ಕಾರಣ ಎಂದು ಮೇಲ್ನೋಟಕ್ಕೆ ತಿಳಿದು ಬಂದಿರುವುದರಿಂದ ಗಂಭೀರವಾಗಿ ಪರಿಗಣಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ನಿನ್ನೆ (ಮೇ 23) ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಪರಿಣಾಮ ಎಚ್ಚೆತ್ತ ಜಿಲ್ಲಾಡಳಿತವು ಆರೋಗ್ಯ ಇಲಾಖೆ ಹಾಗೂ ಮೈಸೂರು ಮಹಾನಗರ ಪಾಲಿಕೆಯ ವಾಣಿವಿಲಾಸ ವಾಟರ್ ವರ್ಕ್ಸ್ ಮತ್ತು ಆರೋಗ್ಯ ವಿಭಾಗದ ಅಧಿಕಾರಿಗಳು, ಸಿಬ್ಬಂದಿಯ ಮೂಲಕ ಸರಬರಾಜಾಗುತ್ತಿರುವ ಕುಡಿಯುವ ನೀರಿನ ಸ್ಯಾಂಪಲ್ ಸಂಗ್ರಹಿಸುತ್ತಿದೆ. ಮೈಸೂರು ನಗರದಾದ್ಯಂತ ವಸತಿ ಬಡಾವಣೆಗಳಿಗೆ ಸರಬರಾಜಾಗುತ್ತಿರುವ ಕಾವೇರಿ, ಕಬಿನಿ ನೀರು ಹಾಗೂ ಬೋರ್‌ವೆಲ್ ನೀರಿನ ಸ್ಯಾಂಪಲ್‌ಗಳನ್ನು ಅಲ್ಲಲ್ಲಿ ರ್‍ಯಾಂಡಮ್ ಆಗಿ ಮನೆ, ಕಲ್ಯಾಣ ಮಂಟಪ, ಸಮುದಾಯ ಭವನ, ಮಾಲ್, ಉದ್ಯಮ, ಸರ್ಕಾರಿ ಮತ್ತು ಖಾಸಗಿ ಕಚೇರಿಗಳಿಂದ ಸಂಗ್ರಹಿಸುವ ಪ್ರಕ್ರಿಯೆಯನ್ನು ವಾಣಿವಿಲಾಸ ವಾಟರ್ ವರ್ಕ್ಸ್, ಪಾಲಿಕೆ ಆರೋಗ್ಯ ಶಾಖೆ ಹೆಲ್ತ್ ಇನ್ಸ್‌ಪೆಕ್ಟರ್‌ಗಳು ಮೈಸೂರಿನ ನಜರ್‌ಬಾದ್‌ನ

● 6ನೇ ಪುಟಕ್ಕೆ

ಪ್ರಜ್ವಲ್ ಪಾಸ್‌ಪೋರ್ಟ್ ರದ್ದು ಪ್ರಕ್ರಿಯೆ ಆರಂಭ

ಪ್ರಜ್ವಲ್ ರೇವಣ್ಣ ಅವರ ಪಾಸ್‌ಪೋರ್ಟ್ ರದ್ದುಗೊಳಿಸುವ ಕುರಿತು ನಾವು ಬರೆದ ಪತ್ರಕ್ಕೆ ಕೇಂದ್ರ ಸರ್ಕಾರದಿಂದ ಈವರೆಗೂ ಪ್ರತಿಕ್ರಿಯೆ ಬಂದಿಲ್ಲ, ಪಾಸ್‌ಪೋರ್ಟ್ ರದ್ದುಗೊಳಿಸಲು ಪ್ರಕ್ರಿಯೆ ಆರಂಭಿಸಿದ್ದಾರೆ ಎಂಬ ಮಾಹಿತಿ ಬಂದಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದರು.

ಫೋನ್ ಟ್ಯಾಪಿಂಗ್ ಕುರಿತು ಸುಮ್ಮನೆ ಅವರು, ಇವರು ಬಾಯಿಗೆ ಬಂದಂತೆ ಮಾತನಾಡುವುದಲ್ಲ. ಫೋನ್ ಟ್ಯಾಪಿಂಗ್ ಯಾರು ಮಾಡುತ್ತಿದ್ದಾರೆ, ಯಾರದ್ದು ಮಾಡಿದ್ದಾರೆ ಎಂಬುದು ಗೊತ್ತಿದ್ದರೆ ಹೇಳಲಿ. ಬಾಯಿಗೆ ಬಂದಿದ್ದು ಹೇಳಿದರೆ ಯಾರು ಕೇಳುತ್ತಾರೆ. ದೇಶದಲ್ಲಿ, ರಾಜ್ಯದಲ್ಲಿ ಕಾನೂನು ಇದೆ. ಕಾನೂನು ಹೊರತುಪಡಿಸಿ ನಾವ್ಯಾರೂ ಏನೂ ಮಾಡಲಾಗುವುದಿಲ್ಲ.

ಯಾರು ಚೀನಾದಿಂದ ತಂದಿದ್ದಾರೆ, ಯಾವ ಬ್ರ್ಯಾಂಡ್ ತಂದಿದ್ದಾರೆ, ಎಲ್ಲಿಟ್ಟಿದ್ದಾರೆ, ಯಾರ ಫೋನ್ ಟ್ಯಾಪಿಂಗ್ ಮಾಡುತ್ತಿದ್ದಾರೆ ಎಂಬುದು ಅವರಿಗೆ ಗೊತ್ತಿದೆಯಲ್ಲವೇ? ಅದನ್ನು ಪೊಲೀಸರಿಗೆ ಹೇಳಿದರೆ ಕ್ರಮ ತೆಗೆದುಕೊಳ್ಳುತ್ತಾರೆ.

ಸುತ್ತೋಲೆ ಹೊರಡಿಸುವ ಅಗತ್ಯತೆ ಏನಿದೆ, ಪ್ರತಿನಿತ್ಯ ಸುತ್ತೋಲೆ ಹೊರಡಿಸಲಾಗದು. ಯಾರೋ ಹೇಳಿದ್ದನ್ನು ಮಾಧ್ಯಮದವರು ಕೇಳಬೇಡಿ. ಕಳ್ಳತನಕ್ಕೊಂದು, ಕೊಲೆಗೊಂದು, ಯಾರೋ ಟ್ರಾಫಿಕ್ ಅಫೆನ್ಸ್ ಮಾಡಿದ್ರು ಅಂತ ಸುತ್ತೋಲೆ ಹೊರಡಿಸಲು ಆಗುತ್ತಾ? ಕಾನೂನಿನ ಪ್ರಕಾರ ಕೆಲಸ ಮಾಡುವಂತೆ ಪೊಲೀಸರಿಗೆ ತಿಳಿಸಿದ್ದೇವೆ, ಅವರು ತರಬೇತಿ ಪಡೆದಿದ್ದಾರೆ, ಕೆಲಸ ಮಾಡದಿದ್ದರೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದರು.

ಪ್ರಜ್ವಲ್ ರೇವಣ್ಣಗೆ ವಿದೇಶಾಂಗ ಸಚಿವಾಲಯದಿಂದ ಶೋಕಾಸ್ ನೋಟಿಸ್

ನವದೆಹಲಿ, ಮೇ 24– ನೂರಾರು ಮಹಿಳೆಯರ ಜೊತೆ ರಾಸಲೀಲೆ ನಡೆಸಿದ ವಿಡಿಯೋ ಬಹಿರಂಗವಾದ ನಂತರ ವಿದೇಶಕ್ಕೆ ಪರಾರಿಯಾಗಿರುವ ಹಾಸನದ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ವಿದೇಶಾಂಗ ಸಚಿವಾಲಯ ಶುಕ್ರವಾರ ಶೋಕಾಸ್ ನೋಟಿಸ್ ಜಾರಿ ಮಾಡಿದೆ.

ಪ್ರಜ್ವಲ್ ರೇವಣ್ಣ ಅವರ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದುಗೊಳಿಸುವಂತೆ ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರಕ್ಕೆ ಎರಡು ಬಾರಿ ಪತ್ರ ಬರೆದಿದ್ದರು. ಇದರ ಬೆನ್ನಲೇ ವಿದೇಶಾಂಗ



ಸಚಿವಾಲಯ, ವಿದೇಶದಲ್ಲಿರುವ ಪ್ರಜ್ವಲ್ ರೇವಣ್ಣಗೆ ಶೋಕಾಸ್ ನೋಟಿಸ್ ಜಾರಿ ಮಾಡಿದೆ. ಇದರಿಂದ ಪ್ರಜ್ವಲ್ ರೇವಣ್ಣಗೆ ಹಂತ ಹಂತವಾಗಿ ಸಂಕಷ್ಟ ಶುರುವಾದಂತಾಗಿದೆ. ವಿದೇಶಾಂಗ ಸಚಿವಾಲಯ ಇಂದು ಪ್ರಜ್ವಲ್ ರೇವಣ್ಣ ಅವರಿಗೆ ಶೋಕಾಸ್ ನೋಟಿಸ್ ಜಾರಿ ಮಾಡಿದ್ದು, ವಿದೇಶಕ್ಕೆ ತೆರಳಲು ಕಾರಣವೇನು, ಆರೋಪದ ಬಗ್ಗೆ ಹಾಗೂ ತನಿಖೆಗೆ ಯಾವಾಗ ಹಾಜರಾಗುತ್ತೀರಿ ಮತ್ತು ಪಾಸ್‌ಪೋರ್ಟ್ ರದ್ದುಗೊಳಿಸುವ ಬಗ್ಗೆ ಉತ್ತರಿಸುವಂತೆ ಸೂಚಿಸಲಾಗಿದೆ.

ಎನ್‌ಡಿಎ ಅಭ್ಯರ್ಥಿಯಾಗಿರುವ ಪ್ರಜ್ವಲ್ ರೇವಣ್ಣ ಅವರು ಏಪ್ರಿಲ್ 26ರಂದೇ ದೇಶ ಬಿಟ್ಟು ಜರ್ಮನಿಗೆ ಹೋಗಿದ್ದಾರೆ. ಯಾವುದೇ ನೋಟಿಸ್ ಜಾರಿ ಮಾಡಿದರೂ ಪ್ರಜ್ವಲ್ ರೇವಣ್ಣ ಕ್ಯಾರೇ ಎನ್ನುತ್ತಿಲ್ಲ. ಹೀಗಾಗಿ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದುಗೊಳಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ನರೇಂದ್ರ ಮೋದಿ ಅವರಿಗೆ ಎರಡು ಬಾರಿ ಪತ್ರ ಬರೆದಿದ್ದಾರೆ.

ಇಂದು 6ನೇ ಹಂತದ ಲೋಕಸಭಾ ಮತದಾನ

58 ಕ್ಷೇತ್ರಗಳ 889 ಅಭ್ಯರ್ಥಿಗಳ ಭವಿಷ್ಯ ನಿರ್ಧಾರ

ನವದೆಹಲಿ, ಮೇ 24–ದೇಶದಲ್ಲಿ ಲೋಕಸಭೆ ಚುನಾವಣೆ ಅಂತಿಮ ಘಟ್ಟ ತಲುಪುತ್ತಿದ್ದು, ಶನಿವಾರ ಒಟ್ಟು 58 ಕ್ಷೇತ್ರಗಳಲ್ಲಿ 6ನೇ ಹಂತದ ಮತದಾನ ನಡೆಯಲಿದೆ. ಒಟ್ಟು 889 ಅಭ್ಯರ್ಥಿಗಳು ಕಣದಲ್ಲಿದ್ದು, 11 ಕೋಟಿ ಮತದಾರರು ಅವರ ಭವಿಷ್ಯ ನಿರ್ಧರಿಸಲಿದ್ದಾರೆ. ಪ್ರತಿಕೂಲ ಹವಾಮಾನ ಪರಿಸ್ಥಿತಿ ಕಾರಣ ಚುನಾವಣೆಗೆ ಸಂಬಂಧಿಸಿದ ವಸ್ತುಗಳನ್ನು ಸಾಗಿಸಲು ಸಮಸ್ಯೆಯಾದ ಕಾರಣ ಜಮ್ಮು ಮತ್ತು ಕಾಶ್ಮೀರದ ಅನಂತನಾಗ್–ರಜೌರಿ ಕ್ಷೇತ್ರದಲ್ಲಿ ಮೂರನೇ ಹಂತದಲ್ಲಿ ಮುಂದೂಡಿಕೆಯಾಗಿದ್ದ ಚುನಾವಣೆಯನ್ನು ನಾಳೆ ಆರನೇ

● 6ನೇ ಪುಟಕ್ಕೆ

ಲೋಕಸಭಾ ಚುನಾವಣೆ ಫಲಿತಾಂಶದ ನಂತರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ

● ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ ● ಜಿಪಂ, ತಾಪಂ, ಬಿಬಿಎಂಪಿ ಸೇರಿ ಸ್ಥಳೀಯ ಸಂಸ್ಥೆಗೆ ಶೀಘ್ರ ಚುನಾವಣೆ ● ಲೋಕಸಭಾ ಚುನಾವಣೆ ನೀತಿ ಸಂಹಿತೆ ಅಂತ್ಯಗೊಂಡ ನಂತರ ಪ್ರಕ್ರಿಯೆ ಆರಂಭ ● ಇಷ್ಟರಲ್ಲೇ ಕ್ಷೇತ್ರ ವಿಂಗಡನೆ; ಮೀಸಲಾತಿ ಪ್ರಕಟ ● ಯತೀಂದ್ರಗೆ ಎಂಎಲ್‌ಸಿ ಸ್ಥಾನ ನಿರ್ಧಾರ ಹೈಕಮಾಂಡ್ ಬಿಟ್ಟಿದ್ದು

ಮೈಸೂರು, ಮೇ24(ಬಿಎಲ್‌ಯು) ಲೋಕಸಭಾ ಚುನಾವಣೆಯ ಫಲಿತಾಂಶದ ನಂತರ ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ, ಬಿಬಿಎಂಪಿ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಮೈಸೂರಿನ ರಾಮಕೃಷ್ಣನಗರದ ತಮ್ಮ ನಿವಾಸದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಸರ್ಕಾರ ಮೀನಾಮೇಷ ಎಣಿಸುತ್ತಿರುವ ಹಿನ್ನೆಲೆಯಲ್ಲಿ ಚುನಾವಣೆ ನಡೆಸುವಂತೆ ಚುನಾವಣಾ ಆಯೋಗ ನ್ಯಾಯಾಲಯದ ಮೊರೆ ಹೋಗುತ್ತಿರುವ ಬಗ್ಗೆ ಈ ಸ್ಪಷ್ಟನೆ ನೀಡಿದರು.

ಸ್ಥಳಿಯ ಸಂಸ್ಥೆ ಚುನಾವಣೆ ನಡೆಸಲು ನಾವು ತಯಾರಿದ್ದೇವೆ. ಆದರೆ ಈಗ ಲೋಕಸಭಾ ಚುನಾವಣೆಯ ನೀತಿ ಸಂಹಿತೆ ಇನ್ನು ಜಾರಿಯಲ್ಲಿದೆ. ಲೋಕಸಭಾ ಚುನಾವಣೆಯ ಫಲಿತಾಂಶ ಪ್ರಕಟವಾಗಿ ನೀತಿ ಸಂಹಿತೆ ಅವಧಿ ಮುಗಿದ ನಂತರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುತ್ತೇವೆ ಎಂದು ಭರವಸೆ ನೀಡಿದರು.

ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಅಗತ್ಯವಾದ ಎಲ್ಲಾ ತಯಾರಿ ಮಾಡಿಕೊಳ್ಳಲಾಗಿದೆ. ಮೊದಲು ಕ್ಷೇತ್ರ ಪುನರ್ ವಿಂಗಡನೆ ಮಾಡಲಾಗುವುದು. ತರುವಾಯ ಮೀಸಲಾತಿ ಪ್ರಕಟಿಸಿ ಚುನಾವಣೆ ನಡೆಸುತ್ತೇವೆ. ಚುನಾವಣೆಯನ್ನು

● 7ನೇ ಪುಟಕ್ಕೆ

ಮೈಲಾರಿ ಹೋಟೆಲ್‌ನಲ್ಲಿ ಬೆಣ್ಣೆ ದೋಸೆ ಸವಿದ ಸಿದ್ದರಾಮಯ್ಯ



ಮೈಸೂರು ನಜರ್‌ಬಾದ್‌ನಲ್ಲಿರುವ ಮೈಲಾರಿ ಹೋಟೆಲ್‌ನಲ್ಲಿ ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಣ್ಣೆ ದೋಸೆ ಸವಿದರು.

ಮೈಸೂರಿನಲ್ಲಿ ವಾಸ್ತವ್ಯ ಹೂಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಮೈಸೂರು ನಜರ್‌ಬಾದ್‌ನಲ್ಲಿರುವ ಮೈಲಾರಿ ಹೋಟೆಲ್‌ನಲ್ಲಿ ಬೆಣ್ಣೆ ದೋಸೆ ಸವಿದರು.

ತಮ್ಮ ಆಪ್ತರಾದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ಹಾಗೂ ಡಾ.ಯತೀಂದ್ರ ಜೊತೆ ಇಂದು ಬೆಳಿಗ್ಗೆ ಮೈಲಾರಿ ಹೋಟೆಲ್‌ಗೆ ಭೇಟಿ ನೀಡಿದ ಸಿದ್ದರಾಮಯ್ಯ, ಅಲ್ಲಿ ಬೆಣ್ಣೆ ದೋಸೆ ತಿಂದರು. ಸುಮಾರು ಅರ್ಧ ಗಂಟೆ ಕಾಲ ಹೋಟೆಲ್‌ನಲ್ಲೇ ಇದ್ದ ಸಿದ್ದರಾಮಯ್ಯ, ರಾಜಕೀಯ ಜಂಜಾಟ ಮರೆತು ದೋಸೆ ತಿಂದು, ಫಿಲ್ಟರ್ ಕಾಫಿ ಕುಡಿದರು. ಈ ವೇಳೆ ಹೋಟೆಲ್ ಮುಂದೆ ಸೇರಿದ್ದ ಜನರನ್ನು ಪ್ರೀತಿಯಿಂದಲೇ ಮಾತನಾಡಿಸಿದರು. ಸಾಮಾನ್ಯವಾಗಿ ಸದಾ ರಾಜಕೀಯ ಒತ್ತಡದಲ್ಲಿರುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತೀಚಿಗೆ ಆಗಾಗ ರಿಲ್ಯಾಕ್ಸ್ ಮೂಡ್‌ಗೆ ಜಾರುತ್ತಿದ್ದಾರೆ. ಕಳೆದ ಬಾರಿ ಮೈಸೂರಿಗೆ

● 7ನೇ ಪುಟಕ್ಕೆ

ಮೈಸೂರು ಮಿತ್ರ ಶನಿವಾರ 25 ಮೇ 2024

ಉತ್ತಮ ಮಳೆ-ಬೆಳೆಯೊಂದಿಗೆ ದೇಶ ಸುಭಿಕ್ಷವಾಗಲಿ: ಗಣಪತಿ ಶ್ರೀಗಳ ಪ್ರಾರ್ಥನೆ



ಮೈಸೂರು, ಮೇ 24-ಕ್ರೋಧ, ಮತ್ಸರ, ಕಷ್ಟ ಕೋಟಲೆಗಳು ದೂರವಾಗಿ ಕಾಲ ಕಾಲಕ್ಕೆ ಮಳೆ-ಬೆಳೆಯಾಗಿ ದೇಶ ಸುಭಿಕ್ಷವಾಗಲಿ ಎಂದು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಪ್ರಾರ್ಥಿಸಿದ್ದಾರೆ.

ಜನರ ದುಃಖ ಕಡಿಮೆಯಾಗಲಿ, ಸಮಸ್ತ ಜೀವಿಗಳಿಗೂ ಸುಖ ಪ್ರಾಪ್ತಿಯಾಗಲಿ. ರಾಜ್ಯ, ದೇಶ ಅಭಿವೃದ್ಧಿಯಾಗಲಿ ಎಂದು ಶ್ರೀ ಸ್ವಾಮೀಜಿ ಪ್ರಾರ್ಥಿಸಿದ್ದಾರೆ. ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ 25ನೇ ವಾರ್ಷಿಕೋತ್ಸವ ಹಾಗೂ ಬ್ರಹ್ಮೋತ್ಸವದ ಸಂದರ್ಭದಲ್ಲಿ ಇಂದು ಹಮ್ಮಿಕೊಂಡಿದ್ದ ಕುಂಭಾಭಿಷೇಕ ಕಾರ್ಯಕ್ರಮದ ವೇಳೆ ಭಕ್ತರಿಗೆ ಶ್ರೀಗಳು ಆಶೀರ್ವಚನ ನೀಡಿದರು.

ಪ್ರಜೆಗಳು ಮತ್ತು ಪ್ರಜಾ ಪ್ರತಿನಿಧಿಗಳಿಗೆ ಮನಃಶಾಂತಿ ಸಿಗಲಿ. ಜನರ ಕಷ್ಟಗಳನ್ನು ಪ್ರಜಾಪಾಲಕರು ಪರಿಹರಿಸಲಿ ಎಂದು ಆ ವೆಂಕಟರಮಣನಲ್ಲಿ ಪ್ರಾರ್ಥಿಸುತ್ತೇನೆ ಎಂದು ನುಡಿದರು. ಜನರಲ್ಲಿ ಕ್ರೋಧ ಹೆಚ್ಚಾಗುತ್ತಿದೆ,ಶಾಂತಿ ಇಲ್ಲದಂತಾಗಿದೆ. ಕಲಿಯುಗದ ದೇವರು ವೆಂಕಟರಮಣನನ್ನು ಪ್ರಾರ್ಥಿಸಿದರೆ ಸುಖ, ಐಶ್ವರ್ಯ, ಶಾಂತಿ ಸಿಗಲಿದೆ. ಕಡು ಬಡವರು ಕೂಡ ಶ್ರೀಮಂತರಾಗುತ್ತಾರೆ. ಆ ದೇವನಿಗೆ ನೆಮ್ಮದಿಯಿಂದ ಪ್ರಾರ್ಥನೆ ಮಾಡಿ, ಅವನ ಸ್ಮರಣೆ ಮಾಡಿ ಎಂದು ಶ್ರೀಗಳು ತಿಳಿಹೇಳಿದರು. ಇನ್ನಾದರೂ ಜಾಗೃತರಾಗಿ, ಸದಾ ದೇವರ ಸ್ಮರಣೆ ಮಾಡಿ, ಆಯಸ್ಸು, ಆರೋಗ್ಯ, ಸಂಪತ್ತು ಕರುಣಿಸುತ್ತಾನೆ. ಕಲಿಯುಗದ ದೈವ ವೆಂಕಟರಮಣನನ್ನು ಸ್ಮರಿಸುತ್ತಿರಿ. ನಾನೂ ಅವನಲ್ಲಿ ಪ್ರಾರ್ಥನೆ ಮಾಡುತ್ತೇನೆ ಎಂದು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ತಿಳಿಸಿದರು. ಇದಕ್ಕೂ ಮೊದಲು ವಜ್ರೋತ್ಸವ ಯಾಗಮಂಟಪದಲ್ಲಿ ಪ್ರಧಾನ ಯಾಗವನ್ನು ನೆರವೇರಿಸ ಲಾಯಿತು. ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಮತ್ತು ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರು ಹೋಮ ಕಾರ್ಯದಲ್ಲಿ ಪಾಲ್ಗೊಂಡು ಪೂರ್ಣಾಹುತಿ ಸಮರ್ಪಿಸಿದರು.

ನಂತರ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರು ದತ್ತ ವೆಂಕಟೇಶ್ವರ ದೇವಾಲಯದ ಮೇಲ್ಭಾಗಕ್ಕೆ ತೆರಳಿ ಆಗಮಪಂಡಿತರ ಸಮ್ಮುಖದಲ್ಲಿ ವಿವಿಧ ನದಿಗಳಿಂದ ತರಲಾಗಿದ್ದ ಪವಿತ್ರ ಜಲದಿಂದ ದೇವಾಲಯಗಳ ಶಿಖರಗಳಿಗೆ ಮಹಾ ಕುಂಭಾಭಿಷೇಕ ನೆರವೇರಿಸಿದರು. ನಂತರ ಗಣಪತಿ ಶ್ರೀಗಳು ದೇವತಾ ಮೂರ್ತಿಗಳಿಗೆ ಬ್ರಹ್ಮಕಲಶ ಅಭಿಷೇಕ ಮಾಡಿ, ಪೂಜೆ ಸಲ್ಲಿಸಿದರು. ಸಂಜೆ ವೇಳೆ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ದಿವ್ಯ ನಾಮ ಸಂಕೀರ್ತನೆ ಮೂಲಕ ಭಕ್ತರನ್ನು ಆಶೀರ್ವದಿಸಿದರು.

ಭಾರೀ ಮಳೆಯಿಂದ ಮೈಸೂರು ಜಿಲ್ಲೆಯ 11 ಸಾವಿರ ಹೆಕ್ಟೇರ್ ಪ್ರದೇಶದ ಬೆಳೆ ಹಾನಿ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಮಾಹಿತಿ





ಮೈಸೂರು, ಮೇ24(ಬಿಎಲ್‌ಯು)- ಪೂರ್ವ ಮುಂಗಾರು ಭಾರೀ ಮಳೆಯ ಕಾರಣ ಮೈಸೂರು ಜಿಲ್ಲೆಯ 11 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿ ಯಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮಾಹಿತಿ ನೀಡಿದರು.

ಮೈಸೂರಿನ ರಾಮಕೃಷ್ಣನಗರದ ಮುಖ್ಯಮಂತ್ರಿ ಸಿದ್ದರಾಮಯ್ಯ ನಿವಾಸದ ಬಳಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಮೈಸೂರು ಜಿಲ್ಲೆಯ 4 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗೆ ಹಾನಿಯಾಗಿದೆ. 6,900 ಹೆಕ್ಟೇರ್ ಪ್ರದೇಶದಲ್ಲಿ ಸಾಮಾನ್ಯ ಕೃಷಿ ಬೆಳೆಗೆ ಹಾನಿಯಾಗಿದೆ ಎಂದು ಅಂಕಿ ಅಂಶಗಳ ವಿವರ ನೀಡಿದರು. ಮೈಸೂರು ಜಿಲ್ಲೆಯಲ್ಲಿ ಮಳೆ ಆರ್ಭಟಕ್ಕೆ 6 ಮನೆಗಳು ಕುಸಿದಿವೆ. 60 ಮನೆಗಳಿಗೆ ಹಾನಿಯಾಗಿದೆ. ಧರಶಾಯಿಯಾಗಿರುವ ಮನೆಗಳಿಗೆ 50 ಸಾವಿರ ಹಾಗೂ ಹಾನಿಯಾಗಿರುವ ಮನೆಗಳಿಗೆ 25 ಸಾವಿರ ರೂಪಾಯಿ ಪರಿಹಾರ ನೀಡಲಾಗಿದೆ ಎಂದರು.

ವಿರೋಧ ಪಕ್ಷದ ನಾಯಕರಾಗಿ ಹೆಚ್.ಡಿ.ಕುಮಾರಸ್ವಾಮಿ ಮಳೆ ಹಾನಿ ಪ್ರದೇಶಕ್ಕೆ ಭೇಟಿ ನೀಡಿ ಮೌಲ್ಯಯುತ ಸಲಹೆ ನೀಡಿದರೆ ಅದನ್ನು ಸ್ವೀಕರಿಸುತ್ತೇವೆ. ಆದರೆ ರಾಜಕೀಯ ಕಾರಣಕ್ಕೆ ಆರೋಪ ಮಾಡಿದರೆ ಅದಕ್ಕೆ ನಾನು ಉತ್ತರ ನೀಡುವುದಿಲ್ಲ ಎಂದು ಡಾ.ಮಹದೇವಪ್ಪ ತಿಳಿಸಿದರು.

ಅರಮನೆ ಮಂಡಳಿ ಹಣದ ತನಿಖೆ: ಮೈಸೂರು ಅರಮನೆ ಮಂಡಳಿ ಕಚೇರಿ ಮೇಲೆ ಲೋಕಾಯುಕ್ತರು ದಾಳಿ ನಡೆಸಿದ ವೇಳೆ ಸಿಕ್ಕ ಲೆಕ್ಕವಿಲ್ಲದ ಹಣದ ಬಗ್ಗೆ ಪ್ರತಿಕ್ರಿಯೆ ನೀಡಿದ ಡಾ.ಮಹದೇವಪ್ಪ, ಲೋಕಾಯುಕ್ತರು ಈ ಬಗ್ಗೆ ತನಿಖೆ ನಡೆಸುತ್ತಾರೆ. ಈ ಬಗ್ಗೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಹೈಕಮಾಂಡ್ ನಿರ್ಧಾರ: ಮಾಜಿ ಶಾಸಕ ಡಾ.ಯತೀಂದ್ರ ಅವರನ್ನು ವಿಧಾನ ಪರಿಷತ್‌ಗೆ ಆಯ್ಕೆ ಮಾಡಲು ಅಭಿಮಾನಿಗಳು ಒತ್ತಡ ಹೇರುತ್ತಿರುವ ಬಗ್ಗೆ ಕೂಡ ಪ್ರತಿಕ್ರಿಯಿಸಿದ ಡಾ.ಮಹದೇವಪ್ಪ, ಯತೀಂದ್ರ ತಂದೆಗಾಗಿ ಕ್ಷೇತ್ರ ತ್ಯಾಗ ಮಾಡಿದ್ದಾರೆ. ಅಂತಿಮವಾಗಿ ಕಾಂಗ್ರೆಸ್ ಹೈಕಮಾಂಡ್ ಈ ಬಗ್ಗೆ ನಿರ್ಧಾರ ಕೈಗೊಳ್ಳಲಿದೆ ಎಂದರು.

ಲಾಬಿ ಸಾಮಾನ್ಯ: ಆಡಳಿತ ಪಕ್ಷದ ಸರ್ಕಾರದಲ್ಲಿ ಸಹಜವಾಗಿಯೇ ವಿಧಾನ ಪರಿಷತ್‌ಗೆ ಲಾಬಿ ಹೆಚ್ಚಿರುತ್ತದೆ. ಇದೇನು ಹೊಸದಲ್ಲ. ಇದೇನೆ ಇದ್ದರೂ ಐದು ಸ್ಥಾನಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಜಯ ಗಳಿಸುತ್ತಾರೆ. ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿಯಿಂದ ನಮ್ಮ ಗೆಲುವಿಗೆ ಯಾವುದೇ ಧಕ್ಕೆ ಆಗುವುದಿಲ್ಲ ಎಂದು ಡಾ.ಮಹದೇವಪ್ಪ ತಿಳಿಸಿದರು.

ಉಸ್ತುವಾರಿ ಬದಲಾದರೂ ಇಬ್ಬರೂ ಒಟ್ಟಿಗೆ ಕೆಲಸ ಮಾಡುತ್ತೇವೆ

ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ವೆಂಕಟೇಶ್ ಸ್ಪಷ್ಟನೆ



ಮೈಸೂರು, ಮೇ24(ಬಿಎಲ್‌ಯು)- ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಸ್ಥಾನ ಬದಲಾದರೂ ನಾನು ಹಾಗೂ ಡಾ.ಮಹದೇವಪ್ಪ ಒಟ್ಟಾಗಿ ಕೆಲಸ ಮಾಡುತ್ತೇವೆ ಎಂದು ಪಶು ಸಂಗೋಪಲನಾ ಸಚಿವ ಕೆ.ವೆಂಕಟೇಶ್ ಸ್ಪಷ್ಟಪಡಿಸಿದರು. ಜಿಲ್ಲಾ ಉಸ್ತುವಾರಿ ಸ್ಥಾನ ಬದಲಾವಣೆ ಮಾಡಿ ಎಂದು ನಾನಾಗಲಿ ಅಥವಾ ಡಾ.ಮಹದೇವಪ್ಪ ಆಗಲಿ ಕೇಳಿಲ್ಲ. ಈ ವಿಚಾರದಲ್ಲಿ ನಮ್ಮಿಬ್ಬರಲ್ಲಿ ಪೈಪೋಟಿ ಇಲ್ಲ. ಇರುವುದರಲ್ಲಿ ನಮ್ಮಿಬ್ಬರಲ್ಲಿ ತೃಪ್ತಿ ಇದೆ ಎಂದು ಹೇಳಿದರು. ಅಂತಿಮವಾಗಿ ಜಿಲ್ಲಾ ಉಸ್ತುವಾರಿ ಬದಲಾವಣೆ ತೀರ್ಮಾನ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಹೈಕಮಾಂಡ್‌ಗೆ ಬಿಟ್ಟದ್ದು ಎಂದು ವೆಂಕಟೇಶ್ ತಿಳಿಸಿದರು. ತರುವಾಯ ಇದೇ ವಿಚಾರವಾಗಿ ಪ್ರತಿಕ್ರಿಯೆ ನೀಡಿದ ಡಾ.ಮಹದೇವಪ್ಪ, ವೆಂಕಟೇಶ್ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರಾದರೂ ಮೈಸೂರಿನಲ್ಲೇ ಇದ್ದಾರೆ. ಇಲ್ಲೂ ಕೆಲಸ ಮಾಡುತ್ತಾರೆ. ಸದ್ಯಕ್ಕೆ ಜಿಲ್ಲಾ ಉಸ್ತುವಾರಿ ಬದಲಾವಣೆಯ ಪ್ರಸ್ತಾಪವಿಲ್ಲ ಎಂದು ಸ್ಪಷ್ಟನೆ ನೀಡಿದರು.

ಇಂದು ಮೈಸೂರಿಗೆ ಡಿ.ಕೆ.ಶಿವಕುಮಾರ್



ಮೈಸೂರು, ಮೇ.24(ಬಿಎಲ್‌ಯು)- ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಾಳೆ (ಮೇ 25) ಮೈಸೂರಿಗೆ ಭೇಟಿ ನೀಡಲಿದ್ದಾರೆ. ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನಿಂದ ವಿಶೇಷ ವಿಮಾನದಲ್ಲಿ ಹೊರಡುವ ಡಿ.ಕೆ.ಶಿವಕುಮಾರ್ 11.30 ಗಂಟೆಗೆ ಮೈಸೂರಿಗೆ ಆಗಮಿಸಲಿದ್ದಾರೆ. ತರುವಾಯ 11.40 ಗಂಟೆಗೆ ಮೈಸೂರು ವಿಮಾನ ನಿಲ್ದಾಣದಿಂದ ಮಂಗಳೂರಿಗೆ ತೆರಳುವರು. ಮಂಗಳೂರಿನಿಂದ ರಸ್ತೆ ಮೂಲಕ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಭೇಟಿ ನೀಡುವ ಡಿ.ಕೆ.ಶಿವಕುಮಾರ್ ಶ್ರೀ ಮಂಜುನಾಥನ ದರ್ಶನ ಪಡೆಯಲಿದ್ದಾರೆ. ಮಂಗಳೂರಿನ ಕಾರ್ಯಕ್ರಮದಲ್ಲಿ ಪಾಲ್ಗೊಂಡ ನಂತರ ಮತ್ತೆ ವಿಶೇಷ ವಿಮಾನದಲ್ಲಿ ರಾತ್ರಿ 8.20 ಗಂಟೆಗೆ ಮೈಸೂರಿಗೆ ಆಗಮಿಸಲಿದ್ದಾರೆ. ಮೈಸೂರು ವಿಮಾನ ನಿಲ್ದಾಣದಿಂದ 8.30 ಗಂಟೆಗೆ ಡಿ.ಕೆ.ಶಿವಕುಮಾರ್ ಬೆಂಗಳೂರಿಗೆ ತೆರಳಲಿದ್ದಾರೆ.

ವಾರಣಾಸಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಪರ

ಎಸ್.ಎ.ರಾಮದಾಸ್ ನೇತೃತ್ವದ ತಂಡ ಬಿರುಸಿನ ಮತಯಾಚನೆ

ಮೈಸೂರು,ಮೇ 24(ಪಿಎಂ)- ವಾರಣಾಸಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಕಂಟೋನ್ಮೆಂಟ್ ವಿಧಾನಸಭಾ ಕ್ಷೇತ್ರದಲ್ಲಿ ಮೈಸೂರಿನ ಕೆಆರ್ ಕ್ಷೇತ್ರದ ಮಾಜಿ ಶಾಸಕ ಎಸ್.ಎ.ರಾಮದಾಸ್ ನೇತೃತ್ವದ ತಂಡ ಗುರುವಾರ ಬಿಜೆಪಿ ಅಭ್ಯರ್ಥಿ ಹಾಗೂ ಪ್ರಧಾನಿ ನರೇಂದ್ರ ಮೋದಿಯವರ ಪರ ಬಿರುಸಿನ ಪ್ರಚಾರ ನಡೆಸಿತು.

ಸದರಿ ವಿಧಾನಸಭಾ ಕ್ಷೇತ್ರದ ಬೂತ್ 286ರ ಅಧ್ಯಕ್ಷ ಅನಿರುದ್ಧ ಹಾಗೂ ಬೂತ್ 288ರ ಅಧ್ಯಕ್ಷ ವಿಶಾಲ್ ಅವರೊಂದಿಗೆ ಎಸ್.ಎ.ರಾಮದಾಸ್ ನೇತೃತ್ವದ ತಂಡ ಮತ ಯಾಚಿಸಿತು. ಈ ಇಬ್ಬರೂ ಕನ್ನಡಿಗರಾಗಿದ್ದು, ಯುವ ಮತದಾರರು ಎಂಬುದು ಮತ್ತೊಂದು ವಿಶೇಷವಾಗಿದೆ. ರಾಮದಾಸ್ ತಂಡವು ಇವರ ಜೊತೆಯಲ್ಲಿ ಮನೆ ಮನೆಗೆ ತೆರಳಿ ಬಿತ್ತಿ ಪತ್ರಗಳ ಹಂಚಿ, ಸ್ಟಿಕ್ಕರ್‌ಗಳನ್ನು ಅಂಟಿಸಿತು.

ಇದೇ ಸಂದರ್ಭದಲ್ಲಿ ಬೂತ್ ವರ್ಗೀಕರಣ ಕಾರ್ಯವನ್ನು ಮಾಡಲಾಯಿತು. ಬೂತ್ 286ರಲ್ಲಿ ಸುಮಾರು 1,200 ಮತದಾರರಿದ್ದು, ಇಲ್ಲಿ 1000ಕ್ಕೂ ಹೆಚ್ಚು ಮತಗಳು ಬಿಜೆಪಿ ಪಡೆದುಕೊಳ್ಳಲಿದೆ. ಬೂತ್ ನಂಬರ್ 288ರಲ್ಲಿ 1,186 ಮತಗಳ ಪೈಕಿ ಶೇ.75ರಿಂದ 80ರಷ್ಟು ಮತದಾನ ಆಗಲಿದ್ದು, ಇದರಲ್ಲಿ ಸುಮಾರು 900 ಮತಗಳು ಬಿಜೆಪಿಗೆ ಬರಲಿವೆ ಎಂಬುದು ಸರ್ವೇ ವೇಳೆ ತಿಳಿದು ಬಂದಿದೆ.



ವಾರಣಾಸಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಕಂಟೋನ್ಮೆಂಟ್ ವಿಧಾನಸಭಾ ಕ್ಷೇತ್ರದಲ್ಲಿ ಮಾಜಿ ಶಾಸಕ ಎಸ್.ಎ.ರಾಮದಾಸ್ ನೇತೃತ್ವದ ತಂಡ ಬಿಜೆಪಿ ಅಭ್ಯರ್ಥಿಯೂ ಆದ ಪ್ರಧಾನಿ ನರೇಂದ್ರ ಮೋದಿಯವರ ಪರ ಬಿರುಸಿನ ಪ್ರಚಾರ ನಡೆಸಿತು.

ಈ ಎರಡು ಬೂತ್‌ಗಳಲ್ಲಿ ಹೆಚ್ಚಾಗಿ ಕನ್ನಡಿಗರು ಹಾಗೂ ದಕ್ಷಿಣ ಭಾರತದವರು ವಾಸವಾಗಿದ್ದು, ಅದರಲ್ಲೂ ಹಿರಿಯ ನಾಗರಿಕರು ಸುಮಾರು ಹತ್ತಾರು ವರ್ಷಗಳಿಂದ ಕೊಠಡಿಗಳನ್ನು ಮಾಡಿಕೊಂಡು ನೆಲೆಸಿದ್ದಾರೆ. ಕಾಶಿಯಲ್ಲಿ ನೆಲೆಸಬೇಕು ಎಂಬುದು ಅವರ ಇಚ್ಛೆಯಾಗಿದೆ. 350ಕ್ಕೂ ಹೆಚ್ಚು ಜನ ಕನ್ನಡಿಗರು ಈ ಪ್ರದೇಶದಲ್ಲಿ ಸುಮಾರು 25 ವರ್ಷಗಳಿಂದ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಮೂಲಕ ಜೀವನ ಕಂಡುಕೊಂಡಿದ್ದಾರೆ. ಅದರಲ್ಲೂ ಆಯುರ್ವೇದದಲ್ಲಿ ಬಹಳ ದೊಡ್ಡ ಪಾಲಿರುವುದು ಅಚ್ಚರಿ ವಿಷಯ. ಇಲ್ಲಿನ ದಂತ ವೈದ್ಯಕೀಯ ಕ್ಷೇತ್ರದಲ್ಲಿ ಕರ್ನಾಟಕದ ಕೊಡುಗೆ ಸಾಕಷ್ಟು ಇದ್ದು, ಡಾ.ನವೀನ್ ಮತ್ತು ಡಾ.ಮಂಗಳಾ ಅವರ ಮೂಲಕ ಕರ್ನಾಟಕ ಮೂಲದ ವೈದ್ಯರನ್ನು ಸಂಪರ್ಕ ಮಾಡಲು ಸಾಧ್ಯವಾಯಿತು.

ನರೇಂದ್ರ ಮೋದಿ ಅವರು 8 ಲಕ್ಷಕ್ಕೂ ಅಧಿಕ ಮತಗಳಿಂದ ಗೆಲ್ಲುತ್ತಾರೆಂದು ಇಲ್ಲಿನ ಜನ ವಿಶ್ವಾಸದಿಂದ ಹೇಳುತ್ತಿದ್ದಾರೆ. ಐದು ದಿನಗಳಿಂದ ಇಲ್ಲಿ 47 ಮತ್ತು 48 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿ ಕೆಲಸ ಮಾಡುತ್ತಿದ್ದ ರಾಮದಾಸ್ ನೇತೃತ್ವದ ತಂಡವು, ಇಂದು ಇಲ್ಲಿ ಸುರಿದ ತುಂತುರು ಮಳೆಯಿಂದ ಹರ್ಷಗೊಂಡಿತು. ಶಾಸಕ ಮಹೇಶ್ ಟೆಂಗಿನಕಾಯಿ, ವಿಧಾನ ಪರಿಷತ್ ಸದಸ್ಯ ಕೇಶವ್ ಪ್ರಸಾದ್, ಮುಖಂಡ ರಾಜೇಶ್ ಮತ್ತಿತರರು ಹಾಜರಿದ್ದಾರೆ.

ನಾಳೆ ಮೈಸೂರಲ್ಲಿ 'ಹಾಡೊಂದು ನಾ ಹಾಡುವೆನು' ಚಲನಚಿತ್ರ ಗೀತೆಗಳ ಕಾರ್ಯಕ್ರಮ

ಮೈಸೂರು, ಮೇ 24(ಜಿಎ)-ಡಾ. ರಾಜ್‌ಕುಮಾರ್ ಜನ್ಮದಿನದ ಅಂಗವಾಗಿ ಜನ ಚೈತನ್ಯ ಫೌಂಡೇಷನ್ ವತಿಯಿಂದ ಮೇ 26ರ ಮಧ್ಯಾಹ್ನ 3 ಗಂಟೆಯಿಂದ ರಾತ್ರಿ 9 ಗಂಟೆವರೆಗೆ ನಗರದ ಪುರಭವನದಲ್ಲಿ 'ಹಾಡೊಂದು ನಾ ಹಾಡುವೆನು' ಚಲನಚಿತ್ರ ಗೀತೆಗಳ ಕಾರ್ಯಕ್ರಮ ಆಯೋಜಿಸಲಾಗಿದೆ. ಫೌಂಡೇಷನ್‌ನ ಅಧ್ಯಕ್ಷ ಆರ್.ಲಕ್ಷ್ಮಣ್ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಈ ವಿಷಯ ತಿಳಿಸಿ, ಕಾರ್ಯಕ್ರಮದಲ್ಲಿ ಡಾ. ರಾಜ್‌ಕುಮಾರ್ ಹಾಗೂ ಇತರೆ ಕನ್ನಡ ಚಲನಚಿತ್ರ ಕಲಾವಿದರ ಸುಮಾರು 40 ಪ್ರಸಿದ್ಧ ಗೀತೆಗಳನ್ನು ಪ್ರಸ್ತುತ ಪಡಿಸಲಾಗುತ್ತಿದೆ. ಐವರು ಪ್ರತಿಭಾವಂತ ಗಾಯಕರನ್ನು ಅಭಿನಂದಿಸಲಾಗುವುದು. ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ನಾಗರಾಜು ವಿ. ಭೈರಿ, ಡಾ.ರೇಖಾ, ಎನ್. ಶ್ರೀನಿವಾಸಲು ವಿಶೇಷ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಜಾಯ್ಸ್ ಪೀಟರ್, ಉಮೇಶ್, ರಾಜೇಶ್ ಕಲ್ರೊ, ಎಸ್.ಆರ್.ರೂಪ್‌ಕುಮಾರ್, ನಾದಮಯ ಪ್ರೇಮ್ ಉಪಸ್ಥಿತರಿದ್ದರು.

ಮೇ 3, ಹಾಸನದಲ್ಲಿ ಪ್ರಜ್ವಲ್ ವಿರುದ್ಧ ಪ್ರತಿಭಟನಾ ಮೆರವಣಿಗೆ

ರೆಡ್ ಕಾರ್ನರ್ ನೋಟಿಸ್ ಹೊರಡಿಸಿ ಪಾಸ್‌ಪೋರ್ಟ್, ವೀಸಾ ರದ್ದಿಗೆ ಆಗ್ರಹ

ಮೈಸೂರು, ಮೇ 24(ಜಿಎ)- ಹಾಸನದ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ತಮ್ಮ ಅಧಿಕಾರ, ಕೌಟುಂಬಿಕ ಹಿನ್ನೆಲೆ, ಜಾತಿ ಪ್ರಾಬಲ್ಯ ಬಳಸಿಕೊಂಡು ನೂರಾರು ಮಹಿಳೆಯರನ್ನು ತಮ್ಮ ವಿಕೃತ ಕಾಮಕ್ಕೆ ಬಳಸಿಕೊಂಡಿದ್ದಾರೆ ಎಂದು ಆರೋಪಿಸಿ ಮೇ 30 ರಂದು ಹಾಸನದಲ್ಲಿ ಹೇಮಾವತಿ ಪ್ರತಿಮೆ ಬಳಿ ಜಿಲ್ಲಾ ಜನಪರ ಚಳವಳಿಗಳ ಒಕ್ಕೂಟದ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಕೆ.ಆರ್.ಸುಮತಿ, ಈ ವಿಷಯ ತಿಳಿಸಿ ಅಂದು ಬೆಳಗ್ಗೆ 10.30ಕ್ಕೆ ಹೇಮಾವತಿ ಪ್ರತಿಮೆ ಬಳಿ ಪ್ರತಿಭಟನಾ ಮೆರವಣಿಗೆ ಆರಂಭ ವಾಗಿ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಮನವಿ ಪತ್ರ ಸಲ್ಲಿಸಲಿದ್ದು, ಪ್ರಜ್ವಲ್ ರೇವಣ್ಣ ಅವ ರನ್ನು ಬಂಧಿಸಲು ರಾಜ್ಯ ಸರ್ಕಾರ ರೆಡ್ ಕಾರ್ನರ್ ನೋಟಿಸ್ ಹೊರಡಿಸಬೇಕು. ತ್ವರಿತವಾಗಿ ಆತನನ್ನು ದೇಶಕ್ಕೆ ಕರೆತರ ಬೇಕು. ಕೇಂದ್ರ ಸಹಾ ಆತನ ರಾಜ ತಾಂತ್ರಿಕ ಪಾಸ್‌ಪೋಟ್ ಮತ್ತು ವೀಸಾ ಕೂಡಲೇ ರದ್ದುಪಡಿಸಬೇಕು. ಆತನ ಬ್ಯಾಂಕ್ ಖಾತೆ ಮುಟ್ಟುಗೋಲು ಹಾಕಿಕೊಳ್ಳ ಬೇಕೆಂದು ಒತ್ತಾಯಿಸಲಾಗುವುದು ಎಂದರು.

ವಿಕೃತ ಲೈಂಗಿಕ ಹಗರಣದ ಪೆನ್‌ಡ್ರೈವ್‌ನಲ್ಲಿರುವ ಚಿತ್ರಗಳನ್ನು ವಿವಿಧ ಸಂವಹನ ಮಾಧ್ಯಮ ಮೂಲಕ ಹಂಚುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ವಿಶೇಷ ತನಿಖಾ ದಳವು ಸಹಾ ಯಾವುದೇ ರಾಜಕೀಯ ಒತ್ತಡಕ್ಕೆ ಮಣಿಯದೇ ನಿಸ್ಪಕ್ಷಪಾತ, ಪಾರದರ್ಶಕ ತನಿಖೆ ನಡೆಸಿ, ಆರೋಪಿಗಳ ವಿರುದ್ಧ ಕ್ರಮ ಜರುಗಿಸಲು ಸೂಚಿಸಬೇಕು. ಪ್ರಕರಣಕ್ಕೆ ಸಂಬಂಧಿಸಿಂತೆ ಫೋರೆನ್ಸಿಕ್ ಸೈನ್ಸ್ ಲ್ಯಾಬೊರೇಟರಿ ವರದಿಯನ್ನು ಶೀಘ್ರವಾಗಿ ಬಿಡುಗಡೆಗೊಳಿಸಬೇಕು ಆಗ್ರಹಿಸಿದರು.

ಶಾಸಕ ರೇವಣ್ಣ ವಿರುದ್ಧವೂ ಲೈಂಗಿಕ ಕಿರುಕುಳ, ದೌರ್ಜನ್ಯದ ಪ್ರಕರಣ ದಾಖಲಾಗಿರುವ ಕಾರಣ ಶಾಸಕರ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಜರುಗಿಸಬೇಕು. ಮುಖ್ಯಮಂತ್ರಿ ಹಾಗೂ ಗೃಹ ಸಚಿವರು ಹಾಸನಕ್ಕೆ ಭೇಟಿ ನೀಡಿ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಸಾರ್ವಜನಿಕವಾಗಿ ಸಾಂತ್ವನ ಹೇಳುವ ಮೂಲಕ ಆತ್ಮಸ್ಥೈರ್ಯ ತುಂಬಬೇಕು. ಗೌಪ್ಯತೆ ಕಾಪಾಡುವ ಭರವಸೆ ನೀಡಿ, ಸಂತ್ರಸ್ಥೆಯರಿಗೆ ಎಲ್ಲಾ ರೀತಿಯ ಕಾನೂನು ನೆರವು, ಭದ್ರತೆ, ಪರಿಹಾರ, ಪುನರ್ವಸತಿ, ಆಪ್ತ ಸಮಾಲೋಚನೆಯ ಅವಕಾಶ ಒದಗಿಸಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿ.ಪಿ.ಬಸವರಾಜು, ಕೆ.ಆರ್. ಗೋಪಾಲಕೃಷ್ಣ, ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ, ಪ್ರೊ.ಭೂಮಿಗೌಡ, ಉಗ್ರ ನರಸಿಂಹೇಗೌಡ ಉಪಸ್ಥಿತರಿದ್ದರು.

313ನೆಯ ಶಿವಾನುಭವ ದಾಸೋಹ ಉಪನ್ಯಾಸ

ಮೈಸೂರು, ಮೇ 24- ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ಆಶ್ರಯದಲ್ಲಿ ಪ್ರತಿ ತಿಂಗಳ ಕೊನೆಯ ಶನಿವಾರದಂದು ನಡೆಯುವ ಶಿವಾನುಭವ ದಾಸೋಹ ಮಾಲಿಕೆಯ 313ನೆಯ ಕಾರ್ಯಕ್ರಮವನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಆಶೀರ್ವಾದಗಳೊಂದಿಗೆ ನಾಳೆ (ಮೇ 25) ಸಂಜೆ 6ಕ್ಕೆ ಮೈಸೂರು ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಏರ್ಪಡಿಸಲಾಗಿದೆ.


ಮೈಸೂರು ಜೆಎಸ್‌ಎಸ್ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಡಾ. ಬಿ.ಎಸ್. ಸುದೀಪ್‌ರವರು 'ಅಕ್ಕಮಹಾದೇವಿಯ ವಚನಗಳಲ್ಲಿ ಅರಿವು' ಕುರಿತು ಉಪನ್ಯಾಸ ನೀಡಲಿದ್ದಾರೆ. ನಿವೃತ್ತ ಉಪನ್ಯಾಸಕರು ಮತ್ತು ಶ್ರೀ ಶಿವರಾತ್ರೀಶ್ವರ ಅಕ್ಕನ ಬಳಗದ ಅಧ್ಯಕ್ಷರಾದ ಶ್ರೀಮತಿ ಎಂ.ಎ. ನೀಲಾಂಬಿಕಾ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ.

ಕದಂಬ ನಗೆ ನಾಟಕೋತ್ಸವಕ್ಕೆ ಚಾಲನೆ...



ಮೈಸೂರಿನ ಕಿರುರಂಗಮಂದಿರದಲ್ಲಿ ಕದಂಬ ರಂಗವೇದಿಕೆ ಮೈಸೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಆಯೋಜಿಸಿದ್ದ ಕದಂಬ ನಗೆ ನಾಟಕೋತ್ಸವವನ್ನು ವೃತ್ತಿ ರಂಗಭೂಮಿ ಕಂಪನಿ ಮಾಲೀಕ, ನಾಟಕಕಾರ ಜೇವರ್ಗಿ ರಾಜಣ್ಣ ಉಧ್ಘಾಟಿಸಿದರು. ಡಾ.ವಾಣಿಶ್ರೀ ಅರುಣ್, ಡಾ.ಎಂ.ಡಿ.ಸುದರ್ಶನ್, ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಮೈಸೂರು ಆನಂದ್, ರಾಜಶೇಖರ ಕದಂಬ ಇದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.05.2024 ಶನಿವಾರ, ಮಳೆ ನಕ್ಷತ್ರ: ರೋಹಿಣಿ, 25.05.2024 ರಿಂದ 07.06.2024 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಕ್ಕಳ ಕಣ್ಣಿನ ದೃಷ್ಟಿ ಸಮಸ್ಯೆಗೆ ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ರಾಸಾ ಕನ್ನಡ ಮತ್ತು ಕಲಾ ಸಂಸ್ಕೃತಿ ಚಾರಿಟೆಬಲ್ ಟ್ರಸ್ಟ್, ರಾಸಾ ಪಬ್ಲಿಕೇಷನ್ಸ್, ಬೆಂಗಳೂರು :** ಕನ್ನಡ ನುಡಿ ಸಂಭ್ರಮ, ಕನ್ನಡ ಸಾಂಸ್ಕೃತಿಕ ಕಾರ್ಯಕ್ರಮ, ಸಾಹಿತ್ಯ ಕವಿಗೋಷ್ಠಿ, ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರಿಗೆ ಪ್ರಶಸ್ತಿ ಪ್ರದಾನ, ಉದ್ಘಾಟನೆ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕವಿಗೋಷ್ಠಿ ಉದ್ಘಾಟನೆ: ಪ್ರಾಧ್ಯಾಪಕರಾದ ಡಾ.ಎನ್.ಕೆ.ಲೋಲಾಕ್ಷಿ, ಗೌರವ ಸಮರ್ಪಣೆ: ರಾಸಾ ಆರ್.ಈಶ್ವರ ಅಭಯ್, ಅತಿಥಿಗಳು :ವಸಂತ ಮುರುಳಿ ಆಚಾರ್ಯ, ಮಹೇಂದ್ರ ಮುಣ್ಣೋತ್, ಶ್ರೀಮತಿ ಹೇಮ, ಸ್ಥಳ: ಕನ್ನಡ ಭವನ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ವಿಜಯನಗರ 1ನೇ ಹಂತ, ಬೆಳಗ್ಗೆ 9.30 ರಿಂದ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಶ್ರೀ ಶ್ಯಾಮಾಶಾಸ್ತ್ರಿಗಳ ದಿನಾಚರಣೆ, ಸಂಗೀತ ವಿದ್ವಾಂಸ, ವಿದುಷಿ ಮತ್ತು ವಿದ್ಯಾರ್ಥಿಗಳಿಂದ ಶ್ಯಾಮಾಶಾಸ್ತ್ರಿಗಳ ಕೃತಿಗಳ ಪ್ರಸ್ತುತಿ ಮತ್ತು ಅವರ ಸ್ವರಜತಿಗಳ ಗೋಷ್ಠಿ ಗಾಯನ, ಸ್ಥಳ: ಶ್ರೀ ವಿದ್ಯಾಭಾರತಿ ಪ್ರಾರ್ಥನಾ ಮಂದಿರ, ಶ್ರೀ ಚಂದ್ರಮೌಳೀಶ್ವರ ದೇವಸ್ಥಾನದ ಆವರಣ, ವಿ.ವಿ. ಮೊಹಲ್ಲಾ, ಬೆಳಗ್ಗೆ 9.30 ರಿಂದ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಪಾರಂಪರಿಕ ಹಾಸು ಆಟಗಳ 10ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್-ಹ್ಯಾಂಡಿಕ್ರಾಫ್ಟ್ ಸೇಲ್ಸ್ ಎಂಪೋರಿಯಂ, ಮೃಗಾಲಯ ಎದುರು, ಬೆಳಗ್ಗೆ 10 ರಿಂದ.

■ **ಪ್ರೊ. ಸಿ. ಬಸವರಾಜು ಅಭಿನಂದನಾ ಸಮಿತಿ :** ಪ್ರೊ. ಸಿ. ಬಸವರಾಜು ಅವರ ಅಭಿನಂದನಾ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಭಿನಂದಿಸುವವರು : ಕರ್ನಾಟಕ ಉಚ್ಚ ನ್ಯಾಯಾಲಯ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ, ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಅಭಿನಂದನೆ : ಹುಬ್ಬಳ್ಳಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಕುಲಪತಿ ಪ್ರೊ. ಸಿ. ಬಸವರಾಜು, ಮುಖ್ಯ ಅತಿಥಿಗಳು : ಸಾಹಿತಿ ಪ್ರೊ. ಪ್ರಧಾನ್ ಗುರುದತ್ತ, ಬೆಂಗಳೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ್, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ, ಭೂಪಾಲ್ ನ್ಯಾಷನಲ್ ಲಾ ಇನ್ಸ್‌ಟಿಟ್ಯೂಟ್ ಯೂನಿವರ್ಸಿಟಿ ಮಾಜಿ ಕುಲಪತಿ ಪ್ರೊ. ವಿ. ವಿಜಯಕುಮಾರ್, ಸಮಾಜ ಸೇವಕ ಮ. ವೆಂಕಟರಾಮ್‌ಜೀ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ : ಶಿವಮೊಗ್ಗ ಕುವೆಂಪು ವಿಶ್ವವಿದ್ಯಾಲಯ ಮಾಜಿ ಕುಲಪತಿ ಪ್ರೊ. ಪಿ. ವೆಂಕಟರಾಮಯ್ಯ, ಸ್ಥಳ: ಸೆನೆಟ್ ಭವನ, ಮೈಸೂರು ವಿಶ್ವವಿದ್ಯಾನಿಲಯ, ಬೆಳಗ್ಗೆ 10.30ಕ್ಕೆ.

■ **ಬಾಸುದೇವ ಸೋಮಾನಿ ಕಾಲೇಜು :** ಸೋಮಾನಿ ಸಂಭ್ರಮ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ. ಎಂ. ಪುಟ್ಟಸ್ವಾಮಿ, ಬಹುಮಾನ ವಿತರಣೆ : ಕಾರ್ಯದರ್ಶಿ ಕುಬೇರ್ ಪಿ. ಗೌಡ, ಮುಖ್ಯ ಅತಿಥಿಗಳು : ಮುಖ್ಯ ಆಡಳಿತಾಧಿಕಾರಿ ಪಿ. ಗೀತಾಂಜಲಿ, ಮ್ಯಾನೇಜಿಂಗ್ ಟ್ರಸ್ಟಿ ಶ್ರೀಮತಿ ಎಸ್. ಪ್ರಭಾ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ಮಹದೇವಸ್ವಾಮಿ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.45ಕ್ಕೆ.

■ **ಕರ್ನಾಟಕ ರಾಜ್ಯ ಕಾಯಕ ಸಮಾಜಗಳ ಒಕ್ಕೂಟ:** ದುಂಡುಮೇಜಿನ ಪರಿಷತ್ತು, ಶಿಕ್ಷಣ ಇಲಾಖೆಗೆ ಕಾಯಕಲ್ಪ ಕುರಿತು ವಿಚಾರ ಸಂಕಿರಣ, ಸಾನ್ನಿಧ್ಯ: ಉರಿಲಿಂಗಿ ಪೆದ್ದಿಮಠದ ಪೀಠಾಧ್ಯಕ್ಷ ಶ್ರೀ ಜಯಪ್ರಕಾಶ್ ಸ್ವಾಮೀಜಿ, ಉದ್ಘಾಟನೆ :ವಿಧಾನ ಪರಿಷತ್ ಸದಸ್ಯ ಕೆ.ಸಿ. ಪುಟ್ಟಸಿದ್ದಶೆಟ್ಟಿ, ಸ್ಥಳ: ಹೋಟೆಲ್ ಗೋವರ್ಧನ್, ಶ್ರೀ ಹರ್ಷ ರಸ್ತೆ, ಬೆಳಗ್ಗೆ 11ಕ್ಕೆ.

■ **ಸಂವಹನ ಪ್ರಕಾಶನ :** ಪ್ರೊ. ದೇವಣ್ಣ ಹೊಸಕೋಟೆ ಅವರ ಕೃತಿಗಳ ಬಿಡುಗಡೆ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ಡಾ. ಪದ್ಮಾಶೇಖರ್, ಕೃತಿ ಕುರಿತು ಮಾತನಾಡುವವರು : ಶ್ರೀ ಕುಂದೂರು ಮಠದ ಅಧ್ಯಕ್ಷ ಡಾ. ಶರತ್‌ಚಂದ್ರ ಸ್ವಾಮಿಗಳೂ, ವಾಗ್ಮಿ ಪ್ರೊ. ಎಂ. ಕೃಷ್ಣೇಗೌಡ, ಉಪಸ್ಥಿತರು : ಲೇಖಕ ಪ್ರೊ. ದೇವಣ್ಣ ಹೊಸಕೋಟೆ, ಪ್ರಕಾಶಕ ಡಿ.ಎನ್. ಲೋಕಪ್ಪ, ಸ್ಥಳ: ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಸಭಾಂಗಣ, ಸಂಜೆ 4ಕ್ಕೆ.

■ **ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ :** ಡಿಜಿಟಲ್ ಮಾರ್ಕೆಟಿಂಗ್ ಪ್ರಯೋಗಾಲಯ ಉದ್ಘಾಟನಾ ಸಮಾರಂಭ, ಉದ್ಘಾಟನೆ : ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಉಪಕುಲಪತಿ ಪ್ರೊ. ಎಸ್. ವಿದ್ಯಾಶಂಕರ್, ಮುಖ್ಯ ಅತಿಥಿಗಳು : ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ವಿಟಿಯು ಕಾರ್ಯಕಾರಿ ಆಡಳಿತ ಮಂಡಳಿ ಸದಸ್ಯ ಡಾ. ಟಿ.ಪಿ. ರೇಣುಕಾಮೂರ್ತಿ, ಸ್ಥಳ: ವಿಟಿಯು ಆವರಣದ ಕುವೆಂಪು ಮಲ್ಟಿಮೀಡಿಯಾ ಕೇಂದ್ರ, ಸಂಜೆ 4ಕ್ಕೆ.

■ **ಕಲಾಸುರುಚಿ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಕಥೆ ಹೇಳುವವರು: ನಂಜನಗೂಡು ತಾಲೂಕು ಸಮೂಹ ಸಂಪನ್ಮೂಲ ಸಂಯೋಜನಾಧಿಕಾರಿ ಚೇತನ್ ಶರ್ಮಾ, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಆತ್ಮಬೋಧ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಎಲೆಕ್ಟ್ರಾನಿಕ್ಸ್ ಇಂಜಿನಿಯರ್ ಎಂ.ಜೆ. ಸಂಪತ್ ಕುಮಾರ್ ಅವರಿಂದ ಡಿಜಿಟಲ್ ಇನ್ನೋವೇಷನ್ ಫಾರ್ ಸಸ್ಟೈನಬಲ್ ಡೆವಲಪ್‌ಮೆಂಟ್ ಕುರಿತು ಉಪನ್ಯಾಸ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಕದಂಬ ರಂಗ ವೇದಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಕದಂಬ ನಗೆ ನಾಟಕೋತ್ಸವ, ಅಂತರಂಗ ಬಹಿರಂಗ ಕಲಾವಿದರಿಂದ ಮೋಲಿಯರ್ ವಿರಚಿತ ಅನುಮಾನದ ಅವಾಂತರ ಹಾಸ್ಯ ನಾಟಕ, ಅನುವಾದ: ಎಂ.ರಾಮರಾವ್, ನಿರ್ದೇಶನ: ಎಸ್.ವಿಕಾಸ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 7ಕ್ಕೆ.

■ **ಅಸ್ತಿತ್ವ ಫೌಂಡೇಷನ್ :** ಕನ್ನಡ ಗೀತೆ, ನೃತ್ಯ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಕ್ರೇಜಿಸ್ಟಾರ್ ರವಿಚಂದ್ರನ್, ಬಿಗ್‌ಬಾಸ್ ಖ್ಯಾತಿಯ ನಮ್ರತಾಗೌಡ, ನೃತ್ಯ ಸಂಯೋಜಕ, ನಟ ಕಿಶನ್ ಬಿಳಗಲಿ, ಸ್ಥಳ: ಸೋಷಿಯಲ್ ಮೈಸೂರು ಯೂನಿಯನ್, ಸಂಜೆ 7 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ CFTRI ಶೋಧ - ಅನುಶೋಧ- ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು-CSIR, CFTRI, Mysuru, ಪ್ರಸ್ತುತಿ- ಡಾ. ನಾಗಪ್ಪ ಮಲ್ಲೇಶಿ, 6.40 ಪದ ಸಂಸ್ಕೃತಿ, ಪ್ರಸ್ತುತಿ- ಡಾ. ಟಿ.ವಿ.ವೆಂಕಟಾಚಲ ಶಾಸ್ತ್ರಿ, 6.50 ರೈತರಿಗೆ ಸಲಹೆ, 7.15 ಯಾರಿಗೂ ಕಾಣದ ಪ್ರವಾಸಿ ತಾಣಗಳು, ಪ್ರಸ್ತುತಿ-ಅಬ್ದುಲ್ ರಶೀದ್, 8.30 'ಹಾದಿಯಲ್ಲಿ ಕಂಡ ಮುಖ' ಬಾನುಲಿ ಸರಣಿ ಏಕಲವ್ಯ ನಗರದ ಕಲಾವಿದರೊಂದಿಗೆ ಸಂವಾದ, ಪ್ರಸ್ತುತಿ: ಅಬ್ದುಲ್ ರಶೀದ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ತನ್ಮಯಿ ಕೃಷ್ಣಮೂರ್ತಿ

ಮಧ್ಯಾಹ್ನ: 12.30 ದೇವರನಾಮ-ಅಜಿತ್ ಕಡಕಡೆ, 12.45 ಜನಪದ ಸಂಗೀತ, 1.20 ಭಾವಗೀತೆ- ರಾಧಿಕ ಪಿ. ಭಟ್, 3.30 ಮಕ್ಕಳ ಮಂಟಪ-ನಂದಗೋಕುಲ, ಪ್ರಸ್ತುತಿ- ಕೆ.ಬಿ.ಮೀನಾ, 4.00 ನಾಟಕ-ನೆರೆ ಹೊರೆ, ರಚನೆ ಹಾಗೂ ನಿರ್ದೇಶನ-ಶ್ರೀನಿವಾಸ ಪ್ರಸಾದ್, 4.30 ನೆನಪಿನಂಗಳ- ಸಾಹಿತ್ಯ ಕ್ಷೇತ್ರದ ಹಿರಿಯ ಬರಹಗಾರರಾದ ಪ್ರೊಫೆಸರ್. ಎಸ್.ವಿ. ರಂಗಣ್ಣ ಅವರೊಂದಿಗೆ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ನಡೆಸಿರುವ ಸಂವಾದ, 6.55 ಕೃಷಿರಂಗ-ಕಿಸಾನ್‌ವಾಣಿ, ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ: ನಂಜನಗೂಡು ತಾಲೂಕು ಮುದ್ದಹಳ್ಳಿಯ ಬಿ. ಚಿಕ್ಕಸ್ವಾಮಿ ಅವರೊಂದಿಗೆ ಸಂದರ್ಶನ, ಪ್ರಸ್ತುತಿ: ಎನ್. ಕೇಶವಮೂರ್ತಿ, 8.00 ಸಂಧ್ಯಾರಾಗ-ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ. ಚಿದಾನಂದಗೌಡ ಹಾಗೂ ಅವರ ಶ್ರೀಮತಿ ತಾರಿಣಿ ಚಿದಾನಂದಗೌಡ ಅವರೊಂದಿಗೆ ಮಾತುಕತೆ. ಸಂದರ್ಶನ : ಬೇದ್ರೆ ಮಂಜುನಾಥ್, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಸರ್ವರ್ ಹುಸೇನ್-ಸಾರಂಗಿ

ಚಾಮುಂಡಿಬೆಟ್ಟದಲ್ಲಿ ರಸ್ತೆ ಶಿಥಿಲಗೊಂಡ ಸ್ಥಳದಲ್ಲಿ ಸಿಮೆಂಟ್ ಕಾಂಕ್ರೀಟ್ ತಡೆಗೋಡೆ ನಿರ್ಮಾಣ

● ಸಾಧ್ಯವಿರುವೆಡೆ ರಸ್ತೆ ಸುಭದ್ರಗೊಳಿಸುವ ಕಾರ್ಯ ● ಮುನ್ನೆಚ್ಚರಿಕೆ ದೃಷ್ಟಿಯಿಂದ ಹಲವು ಸುರಕ್ಷಾ ಕ್ರಮ







ಮೈಸೂರು, ಮೇ 24(ಆರ್‌ಕೆ)– ಭಾರೀ ಮಳೆಯಿಂದಾಗಿ ನಂದಿ ವಿಗ್ರಹಕ್ಕೆ ಹೋಗುವ ರಸ್ತೆಯಲ್ಲಿ ಉಂಟಾಗಿದ್ದ ಭೂ ಕುಸಿತದ ಜಾಗದಲ್ಲಿ ತಡೆಗೋಡೆ ನಿರ್ಮಾಣ ಕಾಮಗಾರಿ ಬೆನ್ನಲ್ಲೇ ಇದೀಗ ಮುಖ್ಯ ರಸ್ತೆ ಹಾಗೂ ಉತ್ತನಹಳ್ಳಿ ಕಡೆಗೆ ಹೋಗುವ ರಸ್ತೆಗಳ ಕೆಲವೆಡೆ ತಡೆಗೋಡೆ ಕುಸಿದು ಬಿದ್ದಿದೆ.

ಚಾಮುಂಡಿಬೆಟ್ಟದ ತಪ್ಪಲಿನ ತಾವರೆ ಕಟ್ಟೆಯಿಂದ ಬೆಟ್ಟದ ಮೇಲಿನ ಪಾರ್ಕಿಂಗ್ ಸ್ಥಳದವರೆಗೂ ಮುಖ್ಯ ರಸ್ತೆಯ ಅಲ್ಲಲ್ಲಿ ಸುರಕ್ಷತೆಗಾಗಿ ಈ ಹಿಂದೆ ಕಲ್ಲಿನಲ್ಲಿ ಕಟ್ಟಿರುವ ತಡೆಗೋಡೆ ಕುಸಿದು ಬಿದ್ದಿದೆ. ಹಾಗೆಯೇ ಚಾಮುಂಡಿಬೆಟ್ಟದಿಂದ ಉತ್ತನಹಳ್ಳಿ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನಕ್ಕೆ ಹೋಗುವ ರಸ್ತೆಯಲ್ಲೂ ಕಡಿದಾದ ಸ್ಥಳದಲ್ಲೇ ತಡೆಗೋಡೆ ಶಿಥಿಲಗೊಂಡು, ಕುಸಿದಿರುವುದರಿಂದ ವಾಹನಗಳು ನಿಯಂತ್ರಣ ತಪ್ಪಿ ಉರುಳಿ ಬೀಳುವ ಅಪಾಯ ಇದೆ.

ಹಾಗಾಗಿ, ವಾಹನಗಳ ಚಾಲನೆ ಸುರಕ್ಷತೆಗಾಗಿ ಲೋಕೋಪಯೋಗಿ ಇಲಾಖೆಯು ಈ ಎರಡೂ ರಸ್ತೆಗಳಿಗೆ ಕಾಂಕ್ರೀಟ್ ಗೋಡೆ ನಿರ್ಮಿಸಲು ಎಸ್ಟಿಮೇಟ್‌ನೊಂದಿಗೆ ಡಿಪಿಆರ್ ತಯಾರಿಸಿ ಸರ್ಕಾರದಿಂದ ಅನುಮೋದನೆ ಪಡೆದು ಲೋಕಸಭಾ ಸಾರ್ವತ್ರಿಕ ಚುನಾವಣಾ ಮಾದರಿ ನೀತಿ ಸಂಹಿತೆ ಜಾರಿಗೆ ಬರುವ ಮುನ್ನವೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಯಶಸ್ವಿ ಗುತ್ತಿಗೆದಾರರಿಗೆ ಕಾಮಗಾರಿ ಕೈಗೊಳ್ಳಲು ಕಾರ್ಯಾದೇಶ ನೀಡಿದೆ.

ತಾವರೆಕಟ್ಟೆಯಿಂದ ವಾಹನಗಳ ಬಹುಮಹಡಿ ಪಾರ್ಕಿಂಗ್ ಕಟ್ಟಡದವರೆಗೆ 1.8 ಕೋಟಿ ರೂ. ಓರ್ವ ಗುತ್ತಿಗೆದಾರನಿಗೂ, ಚಾಮುಂಡಿಬೆಟ್ಟದಿಂದ ಉತ್ತನಹಳ್ಳಿಗೆ ಹೋಗುವ ರಸ್ತೆ ಬದಿ ತಡೆಗೋಡೆ ನಿರ್ಮಿಸಲು 50 ಲಕ್ಷ ರೂ.ಗಳಿಗೆ ಮತ್ತೊಬ್ಬರಿಗೆ ಕಾಮಗಾರಿ ನಿರ್ವಹಣೆಯನ್ನು ವಹಿಸಲಾಗಿದೆ.

ಲೋಕಸಭಾ ಚುನಾವಣೆ ಪ್ರಕ್ರಿಯೆ ಆರಂಭಕ್ಕೂ ಮುನ್ನವೇ ಏಕ ಕಾಲದಲ್ಲಿ ಎರಡೂ ಕಾಮಗಾರಿ ಆರಂಭವಾಗಿದ್ದು, ಈಗಾಗಲೇ ಶೇ. 50ರಷ್ಟು ಕೆಲಸ ಮುಗಿದಿದೆ. ಈ ಹಿಂದೆ ಇದ್ದ ಕಲ್ಲಿನ ತಡೆಗೋಡೆಯನ್ನು ತೆರವುಗೊಳಿಸಿ, ಲಭ್ಯವಿರುವ ಸ್ಥಳಾವಕಾಶ ವಿಸ್ತರಿಸಿ, ಅಡಿಪಾಯದಿಂದ ಕಬ್ಬಿಣ ಕಟ್ಟಿ ಕಾಂಕ್ರೀಟ್ ಗೋಡೆ ನಿರ್ಮಿಸಲಾಗುತ್ತಿದೆ.

ರಸ್ತೆಯಿಂದ ಕೇವಲ 2 ಅಡಿ ಎತ್ತರವಿದ್ದ ಕಲ್ಲಿನ ತಡೆಗೋಡೆ ಬದಲಾಗಿ ಈಗ 4 ಅಡಿ ಎತ್ತರಕ್ಕೆ ಕಾಂಕ್ರೀಟ್ ತಡೆಗೋಡೆ ನಿರ್ಮಿಸುತ್ತಿರುವುದರಿಂದ ಆ ಮಾರ್ಗ ಸಂಚರಿಸುವ ದ್ವಿಚಕ್ರ ವಾಹನ, ಕಾರು, ಆಟೋ, ಟೆಂಪೋ, ಬಸ್‌ಗಳಿಗೆ ಮತ್ತಷ್ಟು ಸುರಕ್ಷತೆ ದೊರೆತಂತಾಗಿದೆ.

ಈ ಸಂಬಂಧ ಮಾಹಿತಿ ನೀಡಿದ ಲೋಕೋಪಯೋಗಿ ಇಲಾಖೆ ಎಕ್ಸಿಕ್ಯೂಟಿವ್ ಇಂಜಿನಿಯರ್ ರಾಜು, ವಾಹನ ಸವಾರರ ಸುರಕ್ಷತೆ ದೃಷ್ಟಿಯಿಂದ ಕುಸಿದಿರುವ, ಶಿಥಿಲಗೊಂಡಿರುವೆಡೆ ಕಾಂಕ್ರೀಟ್ ತಡೆಗೋಡೆ ನಿರ್ಮಿಸಲು ಸರ್ಕಾರದಿಂದ ಅನುಮೋದನೆ ಪಡೆದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ತುರ್ತಾಗಿ ಆಗಬೇಕಾಗಿದ್ದರಿಂದ ಕಾಮಗಾರಿ ಆರಂಭಿಸಿದ್ದೇವೆ ಎಂದರು.

ಚಾಮುಂಡಿಬೆಟ್ಟದ ಮುಖ್ಯ ರಸ್ತೆ ಹಾಗೂ ಉತ್ತನಹಳ್ಳಿ ಕಡೆಗೆ ಹೋಗುವ ರಸ್ತೆಯಲ್ಲಿ ತಡೆಗೋಡೆ ನಿರ್ಮಾಣ ಕೆಲಸ ತೀವ್ರಗತಿಯಿಂದ ನಡೆಯುತ್ತಿದೆಯಲ್ಲದೇ ರಸ್ತೆಯ ಮತ್ತೊಂದು ಬದಿಯಲ್ಲಿ ಮಳೆ ನೀರಿನಿಂದ ಕೊರೆತ ಉಂಟಾಗಿರುವ ಜಾಗಕ್ಕೆ ಸಿಮೆಂಟ್ ಕಾಂಕ್ರೀಟ್ ಹಾಕಿ ಸಮತಟ್ಟು ಮಾಡುವ ಕಾಮಗಾರಿಯೂ ಜೊತೆಯಲ್ಲೇ ನಡೆಯುತ್ತಿದೆ ಎಂದು ಅವರು ತಿಳಿಸಿದರು.

ಬೆಟ್ಟಕ್ಕೆ ಸಂಪರ್ಕ ಕಲ್ಪಿಸುವ ಎಲ್ಲಾ ರಸ್ತೆಗಳನ್ನೂ ಆಗಿಂದಾಗ್ಗೆ ನೋಡಿಕೊಂಡು ನಿರ್ವಹಣೆ ಮಾಡಬೇಕಾಗಿದೆ. ಶಿಥಿಲಗೊಂಡಿರುವುದು ಕಂಡ ತಕ್ಷಣ ಇಲಾಖೆಯಿಂದ ಆದ್ಯತೆ ಮೇಲೆ ರಿಪೇರಿ ಮಾಡಿಸುವುದು ನಮ್ಮ ಜವಾಬ್ದಾರಿ ಎಂದು ರಾಜು ತಿಳಿಸಿದರು.

ಮೈಸೂರಲ್ಲಿ ಮತ್ತೆ ಮಳೆ ಆರ್ಭಟ



ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿ ಮಳೆ ನಡುವೆ ಮ್ಯಾನ್‌ಹೋಲ್ ಉಕ್ಕಿ ಹರಿದು ಹೈರಾಣಾದ ಜನ

ಮೈಸೂರು, ಮೇ 24(ಎಸ್‌ಬಿಡಿ)– ಮೈಸೂರಲ್ಲಿ ಒಂದು ದಿನ ಬಿಡುವು ನೀಡಿದ್ದ ಮಳೆ, ಶುಕ್ರವಾರ ಮತ್ತೆ ಆರ್ಭಟಿಸಿತು.

ಬೆಳಗ್ಗೆಯಿಂದ ಮೋಡ ಕವಿದ ವಾತಾವರಣವಿದ್ದರೂ ತಾಪಮಾನವಿತ್ತು. ಸಂಜೆ 6 ಗಂಟೆ ನಂತರ ದಟ್ಟ ಮೋಡ ಆವರಿಸಿ, ಗುಡುಗು ಮಾರ್ದನಿಸಿತು. ಈ ವೇಳೆ ಕೆಲ ನಿಮಿಷಗಳ ಕಾಲ ಮಳೆ ಸುರಿದು ನಿಂತು ಹೋಯಿತು. ಬಳಿಕ 7 ಗಂಟೆ ಸುಮಾರಿಗೆ ರಭಸವಾಗಿ ಸುರಿದ ಮಳೆ 40 ನಿಮಿಷಕ್ಕೂ ಹೆಚ್ಚು ಕಾಲ ಆರ್ಭಟಿಸಿತು. ಈ ಮಧ್ಯೆ ವಿಜಯನಗರ ಎಲ್‌ಐಸಿ ಕಚೇರಿ ಬಳಿ ಮರವೊಂದು ಉರುಳಿಬಿದ್ದಿದ್ದು, ಯಾವುದೇ ಅಪಾಯ ಸಂಭವಿಸಿಲ್ಲ ಎಂದು ಮೈಸೂರು ಮಹಾನಗರ ಪಾಲಿಕೆ ಮೂಲಗಳು ತಿಳಿಸಿವೆ.

ಮಳೆ ರಭಸಕ್ಕೆ ಕೆಲ ಹೊತ್ತಲ್ಲೇ ರಸ್ತೆಗಳೆಲ್ಲಾ ಜಲಾವೃತವಾದವು. ತಗ್ಗು ಪ್ರದೇಶಗಳಲ್ಲಿ ನೀರು ನಿಂತಿತ್ತು. ಇದರಿಂದ ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು. ದ್ವಿಚಕ್ರ ವಾಹನ ಸವಾರರು ಹಾಗೂ ಪಾದಚಾರಿಗಳು ಪರದಾಡಿದರು. ಸಯ್ಯಾಜಿರಾವ್ ರಸ್ತೆ, ಇಂದ್ರಕೆಫೆ ಬಳಿ ಮ್ಯಾನ್‌ಹೋಲ್ ಉಕ್ಕಿ ಕೊಳಚೆ ನೀರು ಹರಿಯಲಾರಂಭಿಸಿತು. ಇಲ್ಲಿನ ಫುಟ್‌ಪಾತ್ ವ್ಯಾಪಾರಿಗಳು ಹೈರಾಣಾದರು. ಪಾದಚಾರಿಗಳು ಇತ್ತ ರಸ್ತೆ ಬದಿಯಲ್ಲೂ ಅತ್ತ ಫುಟ್‌ಪಾತ್‌ನಲ್ಲೂ ನಡೆಯಲಾಗದೆ ಕೊಳಚೆ ನೀರಿನಲ್ಲೇ ಹಾದು ಹೋದರು. ಅರ್ಧ ಗಂಟೆಗೂ ಹೆಚ್ಚು ಕಾಲ ಆರ್ಭಟಿಸಿದ ಮಳೆ, ನಂತರ ಜಿಟಿ ಜಿಟಿ ಸುರಿಯಲಾರಂಭಿಸಿತು.

2 ತಾಲೂಕಲ್ಲಿ ಹೆಚ್ಚು: ಮೈಸೂರು ನಗರಕ್ಕೆ ಗುರುವಾರ ಮಳೆ ಬಿಡುವು ನೀಡಿತ್ತು. ನಗರ ಸೇರಿದಂತೆ ತಾಲೂಕಿನಲ್ಲಿ ನಿನ್ನೆ ಕೇವಲ 0.3 ಮಿ.ಮೀ. ಮಳೆಯಾಗಿತ್ತು. ಆದರೆ ಕೆ.ಆರ್.ನಗರ ಹಾಗೂ ಪಿರಿಯಾಪಟ್ಟಣ ತಾಲೂಕುಗಳಲ್ಲಿ ಭಾರೀ ಮಳೆಯಾಯಿತು. ಈ ಎರಡು ತಾಲೂಕುಗಳಲ್ಲಿ ಕ್ರಮವಾಗಿ 15.31 ಮಿ.ಮೀ. ಮತ್ತು 12.01 ಮಿ.ಮೀ. ಮಳೆ ಸುರಿಯಿತು. ಇನ್ನುಳಿದಂತೆ ಸರಗೂರಿನಲ್ಲಿ 2.6 ಮಿ.ಮೀ., ಹೆಚ್.ಡಿ.ಕೋಟೆಯಲ್ಲಿ 2.2 ಮಿ.ಮೀ., ಹುಣಸೂರಿನಲ್ಲಿ 1.57 ಮಿ.ಮೀ. ಹಾಗೂ ತಿ.ನರಸೀಪುರದಲ್ಲಿ 0.1 ಮಿ.ಮೀ. ಮಳೆಯಾಗಿದೆ. ನಂಜನಗೂಡಿನಲ್ಲಿ ನಿನ್ನೆ ಮಳೆಯಾಗಿಲ್ಲ ಎಂದು ತಿಳಿದುಬಂದಿದೆ.

ಐದು ದಿನ ಸಾಧಾರಣ ಮಳೆ: ಹವಾಮಾನ ಇಲಾಖೆ ಪ್ರಕಾರ ಮುಂದಿನ ಐದು ದಿನ ವಿವಿಧ ಜಿಲ್ಲೆಗಳಲ್ಲಿ ಮೋಡ ಕವಿದ ವಾತಾವರಣದೊಂದಿಗೆ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಮೈಸೂರು ಜಿಲ್ಲೆಯಲ್ಲಿ ಶನಿವಾರ 15 ಮಿ.ಮೀ., ಮೇ 26ರಂದು 10 ಮಿ.ಮೀ., ಮೇ.27, 28ರಂದು 8 ಮಿ.ಮೀ. ಮಳೆಯಾಗುವ ಸಾಧ್ಯತೆ ಇದೆ. ಕೊಡಗು ಜಿಲ್ಲೆಯಲ್ಲಿ ಕ್ರಮವಾಗಿ 28, 12, 14, 15 ಮಿ.ಮೀ. ಮಳೆಯಾಗಬಹುದು. ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲೂ 8ರಿಂದ 15 ಮಿ.ಮೀ.ನಷ್ಟು ಮಳೆಯಾಗುವ ಸಾಧ್ಯತೆ ಇದೆ ಎಂದು ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿ.ಪಟ್ಟಣದಲ್ಲಿ ಅಧಿಕ ಸಾಧ್ಯತೆ: ಶನಿವಾರ ಮೈಸೂರು ಜಿಲ್ಲೆಯಲ್ಲಿ ಜೋರು ಮಳೆಯಾಗುವ ನಿರೀಕ್ಷೆ ಇದೆ. ಅದರಲ್ಲೂ ಪಿರಿಯಾಪಟ್ಟಣ ತಾಲೂಕಿನಲ್ಲಿ 60 ಮಿ.ಮೀ.ಗೂ ಹೆಚ್ಚು ಮಳೆ ಸುರಿಯಲಿದೆ. ಹುಣಸೂರಿನಲ್ಲಿ 50, ಕೆ.ಆರ್.ನಗರದಲ್ಲಿ 43, ಮೈಸೂರು ತಾಲೂಕಿನಲ್ಲಿ 26, ಹೆಚ್.ಡಿ.ಕೋಟೆಯಲ್ಲಿ 25, ತಿ.ನರಸೀಪುರ ಹಾಗೂ ನಂಜನಗೂಡಿನಲ್ಲಿ 19 ಮಿ.ಮೀ. ಮಳೆಯಾಗುವ ಸಾಧ್ಯತೆ ಇದೆ.

ವಿಶ್ವವಚನ ರಸಪ್ರಶ್ನೆ, ರಾಧಿಕಾ ವಿಜೇತೆ



ಮೈಸೂರು, ಮೇ 24– ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ಅಂತರ್ಜಾಲದ ಮೂಲಕ ನಡೆದ 92ನೇ ಥಟ್ ಅಂತ ಉತ್ತರಿಸಿ ವಿಶ್ವವಚನ ರಸಪ್ರಶ್ನೆ ಕಾರ್ಯಕ್ರಮ ದಲ್ಲಿ ಹುಣಸೂರಿನ ರಾಧಿಕಾ ಅವರು ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುವುದರ ಮೂಲಕ ವಿಜೇತರಾಗಿದ್ದಾರೆ ಎಂದು ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪಾ ಕುಮಾರಸ್ವಾಮಿ ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಅಪ್ಸರೆ : (ಸ್ವರ್ಗದ ಬಾಗಿಲು ತಟ್ಟಿದಾಗ ಬಾಗಿಲು ತೆರೆದು ಮುಗುಳ್ನಕ್ಕು) "ಇಷ್ಟು ಬೇಗ ಹೇಗೆ ಬಂದ್ರಿ ಸ್ವರ್ಗಕ್ಕೆ?"
ಆತ : "ನಮ್ಮ ಡಾಕ್ಟ್ರು ಕಳುಹಿಸಿಕೊಟ್ರು!"

ಮೈಸೂರು ಮಿತ್ರ

ಶನಿವಾರ, 25 ಮೇ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಕೃತಿ ಕೆಟ್ಟದಿದ್ದು, ಮನಸ್ಸು ಸದಾ ಕೆಡುಕು ಬಯಸುತ್ತಿದ್ದು–ಸಜ್ಜನರಂತೆ ಮುಖವಾಡ ಧರಿಸುತ್ತಿರುವ ಜನರ ಬಗ್ಗೆ ಎಚ್ಚರದಿಂದಿರಬೇಕು. –ದ.ರಾ. ಬೇಂದ್ರೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹತ್ತೋಕೆ ಮೊದಲು ಕುದುರೆ ನೋಡು, ಬಿತ್ತೋಕೆ ಮೊದಲು ಹೊಲ ನೋಡು

ನಿಮ್ಮ ಪತ್ರಗಳು

■ ನೀರು ಕಲುಷಿತಗೊಳ್ಳದಂತೆ ಎಚ್ಚರಿಕೆ ವಹಿಸಿ

ಮಾನ್ಯರೆ,

ಮೈಸೂರಿನ ಸಾಲುಂಡಿ ಗ್ರಾಮದಲ್ಲಿ ಕಲುಷಿತ ನೀರು ಸೇವನೆ ಮಾಡಿದ ಪರಿಣಾಮ ಓರ್ವ ವ್ಯಕ್ತಿ ಸಾವನ್ನಪ್ಪಿದ್ದು, ಹಲವು ಮಂದಿ ಅಸ್ವಸ್ಥರಾಗಿರುವುದು ಆತಂಕಪಡುವ ಸಂಗತಿ. ಬಿರು ಬೇಸಿಗೆ ಅನಂತರ ಮಳೆ ಬೀಳಲು ಪ್ರಾರಂಭವಾಗುತ್ತಿದ್ದಂತೆ ರಾಜ್ಯದಲ್ಲಿ ಕಲುಷಿತ ನೀರಿನ ಪ್ರಕರಣಗಳು ಸಹ ಹೆಚ್ಚಾಗುತ್ತಿವೆ. ಬರಗಾಲ ಮತ್ತು ಮಳೆ ಇವೆರಡಕ್ಕೂ ಹಾಗೂ ಕಲುಷಿತ ನೀರಿಗೂ ಪರಸ್ಪರ ಸಂಬಂಧ ಇದೆ. ಬರಗಾಲದಲ್ಲಿ ಅಂತರ್ಜಲ ಮಟ್ಟ ಕುಸಿದಾಗ ಮಾನವ ಜೀವಕ್ಕೆ ಅಪಾಯಕಾರಿ ರಾಸಾಯನಿಕಗಳು ನೀರಿಗೆ ಸೇರಿ ಅದು ಕಲುಷಿತಗೊಳ್ಳುತ್ತದೆ. ಅದೇ ರೀತಿ ಮಳೆಗಾಲ ಆರಂಭವಾಗುತ್ತಿದ್ದಂತೆ ಚರಂಡಿಗಳು ತುಂಬಿ ಅಲ್ಲಿನ ಕಲ್ಮಶ ನೀರು ಕುಡಿಯುವ ನೀರಿಗೆ ಸೇರಿ ಕೊಂಡರೆ ಅದು ಸಹ ನೀರು ಕಲುಷಿತಗೊಳ್ಳಲು ಕಾರಣವಾಗುತ್ತದೆ. ಇದರ ಸೇವನೆಯಿಂದ ಜನರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟು ಮಾಡುತ್ತಿದ್ದು, ಈ ಬಗ್ಗೆ ಎಚ್ಚರಿಕೆ ವಹಿಸುವುದು ಅಗತ್ಯವಾಗಿದೆ.

ಕಲುಷಿತ ನೀರು ಸೇವಿಸಿದ ಪ್ರಕರಣಗಳು ವರದಿಯಾದ ತತ್‌ಕ್ಷಣ ಆರಂಭದ ಶೂರತ್ವ ತೋರಿಸುವ ಆಡಳಿತ ವರ್ಗ ಸತ್ತವರಿಗೆ ಪರಿಹಾರ, ಅಸ್ವಸ್ಥರ ಚಿಕಿತ್ಸಾ ವೆಚ್ಚ ಭರಿಸುವುದು, ಒಂದಿಬ್ಬರು ಅಧಿಕಾರಿಗಳನ್ನು ಅಮಾನತುಗೊಳಿಸುವ ಅಲ್ಪಕಾಲಿಕ ಕ್ರಮಗಳನ್ನು ಕೈಗೊಳ್ಳುತ್ತದೆ. ಆದರೆ ದೀರ್ಘಕಾಲಿಕ ಕ್ರಮಗಳ ಬಗ್ಗೆ ಅಷ್ಟೊಂದು ಗಂಭೀರತೆ ತೋರುವುದಿಲ್ಲ. ಇಂತಹ ಪ್ರಕರಣಗಳು ನಡೆದಾಗ ಅಲ್ಪಕಾಲಿಕ ಕ್ರಮಗಳು ಎಷ್ಟು ಆವಶ್ಯಕವೋ ದೀರ್ಘಕಾಲಿಕ ಕ್ರಮಗಳು, ಶಾಶ್ವತ ಪರಿಹಾರ ಕಂಡುಕೊಳ್ಳುವುದು ಅಷ್ಟೇ ಮುಖ್ಯವಾಗಿದೆ. ಬರಗಾಲ ಮತ್ತು ಮಳೆ ಜತೆಗೆ ಕಲುಷಿತ ನೀರು ಸಮಸ್ಯೆಗೆ ಮುಖ್ಯವಾಗಿ ಶುದ್ಧ ನೀರು ಪೂರೈಕೆ ವ್ಯವಸ್ಥೆಯ ಕೊರತೆ ಒಂದು ಕಡೆಯಾದರೆ, ನದಿ ಹಳ್ಳ ಕೆರೆಗಳಿಗೆ ವಿವಿಧ ತ್ಯಾಜ್ಯಗಳ ಸೇರುವಿಕೆ, ಮಿತಿ ಮೀರಿದ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ಬಳಕೆ, ಬಯಲು ಬಹಿರ್ದೆಸೆ ಹಾಗೂ ಆರ್ಸೆನಿಕ್ ಅಂಶ ಸೇರ್ಪಡೆಯೂ ಕಾರಣವಾಗುತ್ತಿದೆ. ಇದರ ಸೇವನೆಯಿಂದ ಜನರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಉಂಟು ಮಾಡುತ್ತಿದೆ. ಮಳೆಗಾಲ ಬಂದಿರುವುದರಿಂದ ಕಲುಷಿತ ನೀರು, ಕುಡಿಯುವ ನೀರನ್ನು ಸೇರದಂತೆ ಕ್ರಮ ವಹಿಸಬೇಕು ಹಾಗೂ ಕುಡಿಯುವ ನೀರಿನ ಪರೀಕ್ಷೆಯನ್ನು ನಿಯಮಿತವಾಗಿ ಮಾಡಬೇಕಿದೆ. ಇಂತಹ ಘಟನೆಗಳು ಸರಕಾರಕ್ಕೆ ಎಚ್ಚರಿಕೆಯ ಗಂಟೆಯಾಗುವುದರ ಜೊತೆಗೆ ಸ್ಥಳೀಯ ಆಡಳಿತ ಈ ನಿಟ್ಟಿನಲ್ಲಿ ಸಕ್ರಿಯಗೊಳ್ಳಬೇಕು. ಸಕಾಲದಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳುವ ಮೂಲಕ ಮುಂದೆ ಸಂಭವಿಸಬಹುದಾದ ಅವಘಡಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ರಾಜ್ಯ ಸರಕಾರ ಮತ್ತು ಸ್ಥಳೀಯ ಆಡಳಿತ ಕಾರ್ಯೋನ್ಮುಖವಾಗಬೇಕಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

■ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ಸಾರಿಗೆ ಇಲಾಖೆ ಗುರುತಿನ ಚೀಟಿ ನೀಡಲಿ

ಮಾನ್ಯರೆ,

ರಾಜ್ಯಾದ್ಯಂತ ಸರ್ಕಾರ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ನೀಡಿ ಒಂದು ವರ್ಷದತ್ತ ಹೆಜ್ಜೆ ಹಾಕುತ್ತಿದ್ದೆ. ಆದರೂ ಸಾರಿಗೆ ಇಲಾಖೆ ಗುರುತಿನ ಚೀಟಿ ನೀಡುವಲ್ಲಿ ವಿಫಲವಾಗಿದೆ. ಏಕೆಂದರೆ ಆಧಾರ್ ಕಾರ್ಡ್ ಇನ್ನಿತರ ಸರ್ಕಾರಿ ದಾಖಲೆಗಳನ್ನು ತೋರಿಸಿ ಬಸ್ ಪ್ರಯಾಣ ಮಾಡಲು ಅವಕಾಶ ನೀಡಿದೆ. ಈ ರೀತಿಯ ಸನ್ನಿವೇಶದಿಂದ ಸರ್ಕಾರಕ್ಕೆ ಬೋಗಸ್ ಲೆಕ್ಕ ತಲಪಲಿದೆಯಾ? ಎಂಬ ಅನುಮಾನ ಮೂಡಿಸಿದೆ. ಇನ್ನುಳಿದ ಗ್ಯಾರಂಟಿಗಳಾದ ಉಚಿತ 200 ಯುನಿಟ್ ವಿದ್ಯುತ್, 2000 ರೂ. ಗೃಹಲಕ್ಷ್ಮೀ ಹಣ, ನಿರುದ್ಯೋಗಿ ಯುವಕ–ಯುವತಿಯರಿಗೆ 3000 ರೂ. ಹಣ ಪಡೆಯಲು ಅರ್ಜಿ ಆಹ್ವಾನಿಸಲಾಗಿತ್ತು. ಬೇಕಾದವರು ಅರ್ಜಿ ಹಾಕಿದ್ರೂ ಬೇಡದವರು ಬಿಟ್ರು ಆದರೆ ಸರ್ಕಾರ ಕೆ.ಎಸ್.ಆರ್.ಟಿ.ಸಿ ವಿಷಯದಲ್ಲಿ ಮಾತ್ರ ಆಧಾರ ಕಾರ್ಡ್ ಸೇರಿದಂತೆ ಇನ್ನಿತರ ಸರ್ಕಾರಿ ದಾಖಲೆ ತೋರಿಸಿ, ಉಚಿತ ಪ್ರಯಾಣ ಮಾಡಬಹುದೆಂದು ಹೇಳಿತು.

ಇದರಿಂದ ಅನುಕೂಲಕ್ಕಿಂತ ದುರುಪಯೋಗವೇ ಹೆಚ್ಚಾಗಿದೆ. ಕರ್ನಾಟಕ ರಾಜ್ಯಕ್ಕೆ ಸಂಬಂಧವೇ ಇಲ್ಲದ ರಾಜ್ಯ ಗಡಿ ಜಿಲ್ಲೆಯ ಮಹಿಳೆಯರು ಆಧಾರ್ ಕಾರ್ಡ್ ತೋರಿಸಿ, ರಾಜರೋಷವಾಗಿ ಬಸ್ ಪ್ರಯಾಣ ಮಾಡುತ್ತಿದ್ದಾರೆ ಎಂಬ ಸಂಶಯ ಮೂಡುತ್ತಿದೆ. ಆದ್ದರಿಂದ ಉಚಿತ ಬಸ್ ಪ್ರಯಾಣ ಮಾಡುವ ಮಹಿಳೆಯರಿಗೆ ಕೆಎಸ್‌ಆರ್‌ಟಿಸಿಯಿಂದ ಗುರುತಿನ ಚೀಟಿ ಪಡೆಯಲು ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ನೀಡಿ, ಅರ್ಜಿ ಸಲ್ಲಿಸಲು ಮೂಲ ದಾಖಲೆಯನ್ನಾಗಿ ರಾಜ್ಯದ ಆಧಾರ ಕಾರ್ಡ್ ಅಪ್‌ಲೋಡ್ ಮಾಡಿದ ತಕ್ಷಣ ವೆಬ್‌ಸೈಟ್‌ನಲ್ಲಿವೇ ಗುರುತಿನ ಚೀಟಿ ಡೌನ್‌ಲೋಡ್ ಮಾಡುವಂತಹ ವ್ಯವಸ್ಥೆಯನ್ನು ಸರ್ಕಾರ ಅಳವಡಿಸಬೇಕು. ಇದರಿಂದ ಸರ್ಕಾರಕ್ಕೆ ಸಲ್ಲಿಕೆಯಾಗುವ ಭೋಗಸ್ ವರದಿ ತಪ್ಪಿ, ಉಚಿತ ಬಸ್ ಪ್ರಯಾಣ ಬೇಕಿದ್ದ ಮಹಿಳೆಯರಿಗೆ ಕೆ.ಎಸ್.ಆರ್.ಟಿ.ಸಿ ನೀಡುವ ಗುರುತಿನ ಚೀಟಿ ತೋರಿಸಿ ಟಿಕೆಟ್ ಪಡೆದುಕೊಳ್ಳುತ್ತಾರೆ. ಬೇಡದವರು ಗುರುತಿನ ಚೀಟಿ ಇಲ್ಲದೇ ಹಣ ನೀಡಿ ಪ್ರಯಾಣ ಬೆಳೆಸಬಹುದು. ಕೆ.ಎಸ್.ಆರ್.ಟಿ.ಸಿ ವಿಷಯದಲ್ಲಿ ಸರ್ಕಾರ ಹೆಚ್ಚು ಗಮನಹರಿಸಿ, ಸಾರಿಗೆ ಇಲಾಖೆಯಿಂದ ಉಚಿತ ಬಸ್ ಪ್ರಯಾಣ ಬೆಳೆಸುವ ಮಹಿಳೆಯರಿಗೆ ಗುರುತಿನ ಚೀಟಿ ನೀಡುವಂತಹ ಕೆಲಸ ಮಾಡಬೇಕಿದೆ. – ವೀರೇಶ, ಧೂಪದಮಠ

■ ಕಾನೂನು ಸುವ್ಯವಸ್ಥೆ ಹಳಿ ತಪ್ಪುತ್ತಿದೆಯೇ...?

ಮಾನ್ಯರೆ,

ಇತ್ತೀಚೆಗೆ ರಾಜ್ಯದಲ್ಲಿ ಅತ್ಯಾಚಾರ, ಕೊಲೆ, ಸುಲಿಗೆಯಂತಹ ದುಷ್ಕೃತ್ಯಗಳು ಹೆಚ್ಚುತ್ತಿರುವುದು ಆತಂಕಕಾರಿಯಾದ ವಿಚಾರವಾಗಿದೆ. ಹುಬ್ಬಳ್ಳಿಯ ನೇಹಾ ಹೀರೆಮಠ ಹಾಗೂ ಅಂಜಲಿ ಅಂಬೀಗೇರ ಹತ್ಯೆ ಪ್ರಕರಣಗಳು ರಾಜ್ಯ ಸರ್ಕಾರಕ್ಕೆ ಸಾಕಷ್ಟು ಮುಜುಗರವನ್ನು ಉಂಟು ಮಾಡಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಳಿ ತಪ್ಪುತ್ತಿದೆಯೇ ಎಂಬ ಶಂಕೆ ಪ್ರಜ್ಞಾವಂತ ನಾಗರೀಕರನ್ನು ಕಾಡಿದರೆ ಅಚ್ಚರಿಯಿಲ್ಲ. ಈ ಎಲ್ಲಾ ವೈಫಲ್ಯಗಳ ಹೊಣೆಗಾರಿಕೆ ಮೊದಲನೆಯದಾಗಿ ಮುಖ್ಯಮಂತ್ರಿ ಹಾಗೂ ಎರಡನೆಯದಾಗಿ ಗೃಹ ಸಚಿವರ ಮೇಲೆ ಬೀಳುತ್ತದೆ. ರಾಜ್ಯದಲ್ಲಿ ಯಾವುದೇ ಪಕ್ಷದ ಸರ್ಕಾರವಿದ್ದರೂ ಇಂತಹ ದುಷ್ಕೃತ್ಯಗಳು ನಡೆಯುತ್ತಲೇ ಇರುತ್ತವೆ. ಅದು ಬೇರೆ ಮಾತು. ರಾಜ್ಯದ ಗೃಹ ಸಚಿವ ಡಾ.ಜಿ.ಪರಮೇಶ್ವರರವರು ತಡವಾಗಿಯಾದರೂ ಹುಬ್ಬಳ್ಳಿಗೆ ಭೇಟಿ ನೀಡಿ ಸಂತ್ರಸ್ತ ಕುಟುಂಬಗಳನ್ನು ಸಂತೈಸಿ, ಈ ಎರಡು ಪ್ರಕರಣಗಳ ತನಿಖೆ ನಡೆಸಲು ರಾಜ್ಯದ ಸಿಐಡಿಗೆ ಹಸ್ತಾಂತರಿಸಿದ್ದಾರೆ.

ಇದೊಂದು ಸ್ವಾಗತಾರ್ಹ ವಿಚಾರ. ಇದರ ಜೊತೆಗೆ ಹಾಸನದ ಸಂಸದ ಪ್ರಜ್ವಲ್ ರೇವಣ್ಣನವರನ್ನು ಒಳಗೊಂಡ ಲೈಂಗಿಕ ದೌರ್ಜನ್ಯದ ಪ್ರಕರಣ ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿದ್ದು, ದೇಶವ್ಯಾಪಿ ಚರ್ಚೆಗೆ ಕಾರಣವಾಗಿದೆ. ಈ ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ಮತ್ತಷ್ಟು ಚುರುಕಾಗಬೇಕಾಗಿದೆ. ರಾಜ್ಯದ ಮುಖ್ಯಮಂತ್ರಿ ಹಾಗೂ ಗೃಹ ಸಚಿವರು ಇವುಗಳ ಬಗ್ಗೆ ಶೀಘ್ರ ಗಮನಹರಿಸಿ ಕಾನೂನು ಸುವ್ಯವಸ್ಥೆಯನ್ನು ಬಲಪಡಿಸಬೇಕಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.



ಜೆ.ಬಿ. ರಂಗಸ್ವಾಮಿ
ನಿವೃತ್ತ ಪೊಲೀಸ್ ಅಧಿಕಾರಿ
ಮೊ : 94490-10009

ಸಮಯೋಚಿತ

ತಲೆ ಮರೆಸಿಕೊಂಡರೆ ತಲೆ ನೋವು ಜಾಸ್ತಿಯೇ...!?

ರಾಜಕಾರಣಿಯ ಮೇಲೋ, ಮತ್ಯಾರೋ ಸೆಲೆಬ್ರಿಟಿಯ ಮೇಲೋ ಕೇಸು ಬಿತ್ತೆಂದರೆ ಅವರು ಮಾಡುವ ಮೊತ್ತ ಮೊದಲ ಕೆಲಸವೇ ಪಲಾಯನ. ತಲೆಮರೆಸಿಕೊಂಡು ಪರಾರಿ!

ದೊಡ್ಡ ಲಾಯರ್‌ಗಳು, ಅಧಿಕಾರಸ್ಥರು, ಪ್ರಭಾವಿಗಳು ಸದಾ ಅವರ ಮಗ್ಗುಲಲ್ಲೇ ಇರುತ್ತಾರೆ. ಸ್ವತಃ ಇವರೇ ಪ್ರಭಾವಶಾಲಿಗಳಾಗಿರುತ್ತಾರೆ. ಆದರೂ ಭೇದಿ ಕಿತ್ತುಕೊಂಡವರಂತೆ ತಲೆಮರೆಸಿಕೊಂಡು ಹೋಗುವ ಅಗತ್ಯವೇನಿದೆ?

ಪರಾರಿಯಾದರೆ ಸಾಕು; ಟಿವಿ, ಪತ್ರಿಕೆಗಳು ಬೊಂಬಡಾ ಬಜಾಯಿಸುವ ವೇಗಕ್ಕೆ ಇವರ ಮಾನ–ಮರ್ಯಾದೆಯೆಲ್ಲಾ ಡಬ್ಬಲ್ ಧೂಳಿಪಟವಾಗುತ್ತೆ ಅನ್ನೋ ಎಚ್ಚರವಾದರೂ ಬೇಡವೇ! ಹೋಗಲಿ, ಪರಾರಿಯಾಗುವ ಘನ ಸಲಹೆಯನ್ನು ಇವರಿಗೆ ಅದ್ಯಾರು ಕೊಟ್ಟಿರುತ್ತಾರೋ ನಾಕಾಣೆ ಅಥವಾ ಇವೇ ಹೆದರಿಕೊಂಡು ಓಟಾ ಹೊಡೆದಿರುತ್ತವೆಯೋ ಏನೋ.

ಬಹಳ ವರ್ಷಗಳಿಂದ ನಾನೂ ಗಮನಿಸುತ್ತಲೇ ಇದ್ದೇನೆ; ಸಹೋದ್ಯೋಗಿಗಳೊಂದಿಗೆ ಚರ್ಚೆ ಮಾಡಿದ್ದೇನೆ; ಈವರೆಗೂ ಸರಿಯಾಗಿ ಅರ್ಥವಾಗದ ಸಂಗತಿ ಎಂದರೆ ಗಣ್ಯರ ಈ ದಿಢೀರ್ ತಲೆಮರೆಸಿಕೊಳ್ಳುವಿಕೆ!

ಕೊಲೆಯ ಕೇಸೇ ಇರಬಹುದು. ರೇಪ್ ಅಥವಾ ಅಪ್ರಾಪ್ತರೊಂದಿಗೆ ಸೆಕ್ಸ್ ಇಲ್ಲವೇ ಲೈಂಗಿಕ ದೌರ್ಜನ್ಯದ ಕೇಸೇ ಇರಬಹುದು. ಪರಾರಿಯಾಗಿ ಬಿಟ್ಟರೆ ಆಪಾದನೆಯ ಗುರುತರತೆ ಹೇಗೆ ಕಡಿಮೆಯಾಗಬಲ್ಲದು?

ಕೋಟಿ ಕೋಟಿ ವಾಪಸ್ ಕಟ್ಟಬೇಕಾಗಿರುತ್ತದೆ ಅಂತಿಟ್ಟುಕೊಳ್ಳಿ; ಈಗಾಗಲೇ ಪಾಪರ್ ಆಗಿ ಚಿಂದಿ ಚಿತ್ರಾನ್ನವಾಗಿದ್ದೇನೆ; ಬೇರೆ ಗತ್ಯಂತರವಿಲ್ಲ. ಆತ್ಮಹತ್ಯೆ ಇಲ್ಲವೇ ಪಲಾಯನವೇ ಗತಿ ಎಂದಾದರೆ ತಲೆಮರೆಸಿಕೊಳ್ಳುವಿಕೆಗೆ ಒಂದು ಅರ್ಥವಿದೆ. ಆದರೆ ಪ್ರಸ್ತುತ ಬೆಳವಣಿಗೆಯಲ್ಲಿ ಎಲ್ಲವೂ ಸುಳ್ಳು ಆಪಾದನೆ ಎಂದೇ ಭಾವಿಸೋಣ. ಕಾನೂನಿಗೆ ಸಿಕ್ಕದಂತೆ ಓಡಿಬಿಟ್ಟರೆ, ವಿರೋಧಿಗಳಿಗೆ ಇನ್ನಷ್ಟು ಸುಳ್ಳಿನ ಮುಳ್ಳುಗಳನ್ನು ಹರಡಲು ಆಸ್ಪದ ಕೊಟ್ಟಂತಲ್ಲವೇ?

ಪೊಲೀಸ್ ಸ್ಟೇಷನ್ನಿಗೆ ಹೋದರೆ ಥರ್ಡ್ ಡಿಗ್ರಿ ಟ್ರೀಟ್‌ಮೆಂಟು ಕೊಟ್ಟು ಸುಳ್ಳು ಆಪಾದನೆಯನ್ನೇ ನಿಜವೆಂದು ಒಪ್ಪಿಸಿಬಿಟ್ಟಾರೆಂಬ ಪುಕ್ಕಲೇ, ಇನ್ನಾವ ಬಗೆಯ ಭೀತಿ ಇವರನ್ನು ನಾಪತ್ತೆಯಾಗುವಂತೆ ಮಾಡುತ್ತದೆಯೋ!

ಭಯಕ್ಕೆ ಕಾರಣವಾದ ಅರೆಸ್ಟು, ಲಾಕಪ್ಪು, ಥರ್ಡ್ ಡಿಗ್ರಿ ಟ್ರೀಟ್‌ಮೆಂಟು, ಜೈಲು, ಬೇಲು ಇವೆಲ್ಲವೂ ಅಷ್ಟೊಂದು ಭಯಾನಕವೇ; ಹಾಗಿದ್ದರೆ ಪೊಲೀಸ್ ಠಾಣೆಗೆ ತಾನೇ ನೇರ ಹೋಗಿ, ಶರಣಾಗಿ ತನಿಖೆಗೆ ಸಹಕರಿಸುತ್ತೇನೆಂದು ಹೇಳಬಹುದಲ್ಲ. ನಿರಪರಾಧಿಗೆ ಹೆದರಿಕೆಯೇಕೆ. ಹಾಗೆ ಶರಣಾದರೆ ಆಗಬಾರದ್ದು ಆಗಿಹೋಗುತ್ತದೆ ಎಂಬ ಭಯಾನಕ ಭೀತಿಯೇ!

ಆಯ್ತಪ್ಪಾ, ಅಷ್ಟೊಂದು ಹೆದರಿಕೆ ಇದ್ದರೆ ಕೋರ್ಟಿಗೇ ನೇರ ಹೋಗಿ ಶರಣಾಗಬಹುದಲ್ಲಾ! ಪೊಲೀಸರು ಅರೆಸ್ಟ್ ಮಾಡಿದರೂ 24 ಗಂಟೆಯೊಳಗೆ ಹೇಗೂ ನ್ಯಾಯಾಲಯಕ್ಕೆ ಹಾಜರ್ಪಡಿಸಲೇಬೇಕು. ತನಿಖೆಗೆ ಆರೋಪಿಯ ಆವಶ್ಯಕತೆ ಬೇಕೇ; ಬೇಕಿದೆಯೆಂಬ ಸಕಾರಣ ಕೊಟ್ಟರೆ ಮಾತ್ರ ಕೋರ್ಟು ಪೊಲೀಸ್ ಕಸ್ಟಡಿಗೆ ಕೊಡುತ್ತದೆ. ಇಲ್ಲದಿದ್ದರೆ ನ್ಯಾಯಾಂಗ ಬಂಧನಕ್ಕೆ (ತಾತ್ಕಾಲಿಕ ಜೈಲು) ಒಪ್ಪಿಸುತ್ತದೆ. ಆಮೇಲೆ ಜಾಮೀನು ಪಡೆದು ಸುಲಭವಾಗಿ ಹೊರ ಬರಬಹುದಲ್ಲಾ. ನೇರಾ ನೇರ ಕಾನೂನಿನಲ್ಲೇ ಹೇರಳ ಅವಕಾಶವಿರುವಾಗ ಗಾಯಬ್ ಆಗುವುದಾದರೂ ಏಕೆ?

> ಹಾಗಿದ್ದರೆ ಇಷ್ಟು ದಿನ ಖಂಡಾಂತರಗಳಲ್ಲಿ ತಲೆಮರೆಸಿಕೊಂಡಿದ್ದರಿಂದ ಆದ ಪ್ರಯೋಜನವಾದರೂ ಏನೇನು; ವೃಥಾ ಮಾಧ್ಯಮಗಳ ವಿಕೃತ ವರದಿಗಳಿಗೆ, ಜನಗಳ ಬಾಯಿಗೆ ಆಹಾರವಾದಂತಾಯಿತು ಅಷ್ಟೇ. ನಾನು ಕದ್ದು ಮದುವೆಯಾಗ್ತೀನಿ, ನೀನು ಬಗ್ಗಿ ವಾಲಗ ಊದು ಅಂದಂತೆ. ಮರ್ಯಾದೆ ಉಳಿದುಕೊಂಡದ್ದು ಅಷ್ಟರಲ್ಲೇ ಏನೇನು ಡ್ಯಾಮೇಜ್ ಆಗಬೇಕಿತ್ತೋ ಜಾಸ್ತಿಯೇ ಆಗಿ ಹೋಗಿದೆ. ಹೊರಗಿದ್ದರೆ ಸಾಕ್ಷ್ಯಗಳನ್ನು ನಾಶಪಡಿಸುತ್ತಾನೆ, ಸಾಕ್ಷಿಗಳನ್ನು ಬೆದರಿಸುತ್ತಾನೆ ಎಂದು ಹೇಳಬಹುದಷ್ಟೇ. ಆದರೆ ಅದನ್ನೂ ಮಾಡಲು ಸಾಧ್ಯವಿಲ್ಲದ ಪರಿಸ್ಥಿತಿ ಈಗ ಉಂಟಾಗಿಲ್ಲವೇ.

ತಲೆ ತಪ್ಪಿಸಿಕೊಂಡು ತಿರುಗಿದರೆ ಕೋರ್ಟು ಬೇಲ್ ಕೊಡುವುದು ಕಷ್ಟ. ಇವನು ತನಿಖೆಗೆ ಸಹಕರಿಸುವುದಿಲ್ಲ, ಪುನಃ ಪರಾರಿಯಾಗುತ್ತಾನೆ, ಇನ್ನೆಂದೂ ವಾಪಸ್ ಬರುವುದಿಲ್ಲ ಇತ್ಯಾದಿ ಕಾರಣಗಳಿಂದ ಬೇಲ್ ನಿರಾಕರಿಸಿ ತಿಂಗಳುಗಟ್ಟಲೆ ಜೈಲಿಗೇ ಅಟ್ಟಬಹುದು.

ತಾನೇ ಸ್ವಯಂ ಶರಣಾಗಿದ್ದಾಗ ಬಿಡುಗಡೆ ಕಷ್ಟವಲ್ಲ. ಆದರೂ ಏಕೆ ಈ ಗಣ್ಯರು ಕೇಸಾದೊಡನೆ ಕದ್ದು ತಿರುಗುತ್ತಾರೋ. ಹೆದರಿದವನ ಮೇಲೆ ಹಗ್ಗವನ್ನೇ ಹಾವೆಂದು ಎಸೆಯುವ ಹಿತೈಷಿಗಳ ಬೋಧನೆ ಕಾರಣವೇ! ಇವರು ಹೆದರಿದಷ್ಟೂ ಪರಿಸ್ಥಿತಿ ಗಂಭೀರ ಸ್ವರೂಪ ಪಡೆದುಕೊಳ್ಳುತ್ತೆ.

ಗಣ್ಯರ ಮುಖ್ಯ ಭಯವೆಂದರೆ ಪೊಲೀಸ್ ಟಾರ್ಚರ್ ಮತ್ತು ಕೈಬೇಡಿ ಹಾಕಿಕೊಂಡು ಊರೆಲ್ಲಾ ಮೆರವಣಿಗೆ ಮಾಡಿಯಾರೆಂಬ ಭೀತಿ. ತಾವೇ ಸ್ವಯಂ ಶರಣಾಗಿದ್ದಾಗ ಹಾಗಾಗುವ ಸಾಧ್ಯತೆ ಕಡಿಮೆ. ಕೋರ್ಟ್ ಮೂಲಕ ಕಸ್ಟಡಿಗೆ ಬಂದ ಅಪರಾಧಿಯ ಯೋಗಕ್ಷೇಮವನ್ನು ಕಣ್ರೆಪ್ಪೆಯಲ್ಲಿಟ್ಟುಕೊಂಡು ಪೊಲೀಸರು ಕಾಪಾಡಲೇಬೇಕು. ಅದವರ ಜವಾಬ್ದಾರಿ ಕೂಡಾ. ಅವನ ಆರೋಗ್ಯದ ಚಿಕ್ಕ ಏರುಪೇರುಗಳಿಗೂ ಅವಕಾಶ ಕೊಡುವುದಿಲ್ಲ. ಇದನ್ನೆಲ್ಲಾ ಗಣ್ಯರ ಲಾಯರುಗಳು ಹೇಳುವುದಿಲ್ಲವೇ. ಕದ್ದು ಓಡೋಗಿದ್ದರಿಂದ ಗಣ್ಯನಿಗೆ ಹೇಗೆ ಪ್ರಯೋಜನವಾಗಬಹುದು; ತನ್ನ ವಿರುದ್ಧದ ಸಾಕ್ಷಿಗಳ ಕೈಕಾಲು ಹಿಡಿದು ಗೋಲ್ ಮಾಲ್ ಮಾಡಬಹುದೆಂದೇ; ಹಾಗೆ ಮಾಡಲು ಹೋಗಿ ತಾನೇ, ರೇವಣ್ಣ ಎರಡನೇ ಕಿಡ್ನ್ಯಾಪ್ ಕೇಸಿನಲ್ಲಿ ಅನಗತ್ಯವಾಗಿ ತಗಲಾಕಿಕೊಂಡದ್ದು!

ಯಾಕೋ ಎಲ್ಲವೂ ಅಯೋಮಯ. ರೇಪ್, ಕೊಲೆ, ಪೋಕ್ಸೋ, ಡ್ರಗ್ಸ್, ದಲಿತರ ಮೇಲಿನ ದೌರ್ಜನ್ಯದಂತಹ ಕೇಸಿನಲ್ಲಿ ಸಿಕ್ಕಿಬಿದ್ದಾಗ ಬೇಲ್ ಸಿಕ್ಕಲಾರದು. ಆರೋಪಿ ಎಷ್ಟೇ ಪ್ರಭಾವಿಯಾಗಿರಲಿ, ತಿಪ್ಪರಲಾಗ ಹಾಕಿದರೂ ಸಿಕ್ಕುವುದಿಲ್ಲ. ಆ ಕೇಸುಗಳ ಗುರುತರತೆಯೇ ಹಾಗಿವೆ. ಅರೆಸ್ಟ್ ಮಾಡಿ ವಿಚಾರಣೆಗೆ ಒಳಪಡಿಸಲೇಬೇಕು. ರೇಪ್, ಹಲ್ಲೆಯಂತಹ ಕೇಸಿನಲ್ಲಿ ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಬೇಕು. ಇವನೇ ಆರೋಪಿ ಎಂದು ಸಾಕ್ಷಿಗಳಿಂದ ಖಚಿತಪಡಿಸಿಕೊಳ್ಳಬೇಕು. ಅಗತ್ಯದ ವಸ್ತುಗಳನ್ನು ಸೀಜ಼್ ಮಾಡಬೇಕು. ಇಷ್ಟಾದರೆ ಆಯ್ತು.ಇವನ ಆವಶ್ಯಕತೆ ಮುಗಿದಂತೆ. ಜಾಮೀನೀಯ (bailable) ಕೇಸಾಗಿದ್ದರೆ ಠಾಣೆಯಲ್ಲೇ ಜಾಮೀನು ಕೊಟ್ಟು ಕಳಿಸಿಕೊಡುತ್ತಾರೆ. ರೇವಣ್ಣನವರ ವಿಚಾರಣೆ ನಡೆಯಿತಲ್ಲಾ ಸೇಮ್ ಅದೇ ರೀತಿ.


ಪ್ರಜ್ವಲ್ ರೇವಣ್ಣ

Non bailable (ಜಾಮೀನು ರಹಿತ) ಆಗಿದ್ದರೆ ಕೋರ್ಟ್‌ಗೆ ಕಳಿಸಿಕೊಡುತ್ತಾರೆ. ಪ್ರಕ್ರಿಯೆ ಇರುವುದೇ ಇಷ್ಟು! ಕೇಸು ದಾಖಲಾದೊಡನೆ ಶರಣಾದರೆ ಮೇಲ್ನೋಟಕ್ಕೆ ಕಾಣುವ ಆಪಾದನೆಗಳೇನಿವೆಯೋ ಅದಷ್ಟನ್ನು ವಿಚಾರಣೆ ಮಾಡಿ ಕೋರ್ಟಿಗೆ ಹಾಜರ್ಪಡಿಸುತ್ತಾರೆ. ರೇವಣ್ಣನವರ ಮೇಲೆ ಮೊದಲ ಕೇಸು ದಾಖಲಾದಾಗಲೇ ಠಾಣೆಗೆ ಹಾಜರಾಗಿದ್ದಿದ್ದರೆ ಠಾಣೆಯ ಬೇಲಿನಲ್ಲೇ ಆರಾಮಾಗಿ ಹೊರಬರಬಹುದಿತ್ತು. ದೂರಿಗೆ ರೆಕ್ಕೆ ಪುಕ್ಕಗಳಿರಲಿಲ್ಲ. ಅದೇಕೆ ಯಾರ ಘನ ಸಲಹೆಯ ಮೇಲೆ ಮೂರ್ನಾಲ್ಕು ದಿನ ಬೇಲ್ ನೆಪದಲ್ಲಿ ನಾಪತ್ತೆಯಾಗಿದ್ದರೋ.

ಕೇಸು ಇದ್ದಿದ್ದಾದರೂ ಏನು; ಐದಾರು ವರ್ಷಗಳ ಹಿಂದೆ ಸೀರೆ ಹಿಡಿದು ಎಳೆದಾಡಿದ್ದರು ಎಂಬ ಆರೋಪ. ಇದ್ದರಲ್ಲಾವ ವಸ್ತುಗಳನ್ನು ಈಗ ಸೀಜ್ ಮಾಡುವುದಿರುತ್ತದೆ! ಬಾಯ್ಮಾತಿನ ವಿಚಾರಣೆ ಮತ್ತು ಸಾಕ್ಷಿಗಳು ಗುರುತು ಹಿಡಿಯುವ ಅಗತ್ಯವಿದ್ದರೆ ಇವನೇ ಆ ಅಪರಾಧಿ ಎಂದು ತೋರಿಸಬಹುದು. ಕೃತ್ಯಕ್ಕೆ ಬಳಸಿದ್ದ ವಸ್ತುಗಳಿದ್ದರೆ ವಶಪಡಿಸಿಕೊಳ್ಳಬಹುದು. ಇಷ್ಟಾದ ಮೇಲೆ ಪೊಲೀಸರಿಗೆ ಆರೋಪಿಯ ಆವಶ್ಯಕತೆಯೇ ಇರುವುದಿಲ್ಲ. ಇಂತಹುದೇ ಆರೋಪದಲ್ಲಿ ಓರ್ವ ಬಡವ ಸಿಲುಕಿದ್ದಿದ್ದರೆ, ವಿಚಾರಣೆ ಮಾಡಿ, ಒಂದೆರಡು ಧರ್ಮದೇಟು ಕೊಟ್ಟು ಆಗಿಂದಾಗಲೇ ಕಳಿಸಿರೋರು. ಧರ್ಮದೇಟು ಯಾಕೆಂದರೆ ಠಾಣೆಗೆ ಬಂದವನಿಗೆ ಬಂದ್ಯಾ ಪುಟ್ಟಾ ಹೋದ್ಯಾ ಪುಟ್ಟಾ ಅಂತ ಸದರವಾಗಬಾರದು ಎಂಬ ಕಾರಣಕ್ಕೆ!

ಆದರೆ ಈ ಕೇಸಿನಲ್ಲಿ ಆರೋಪಿ ಪ್ರಭಾವಿ ವಿಪಕ್ಷ ಶಾಸಕ. ಮೇಲಾಗಿ ಮಾಜಿ ಸಚಿವ. ಬಲಿಷ್ಠ ರಾಜಕೀಯ ಹಿನ್ನೆಲೆ. ಹೊಡೆದು ಬಡಿದು ಮಾಡುವಂತಿಲ್ಲ. ಅವರ ಗೌರವಕ್ಕೆ ಧಕ್ಕೆಯಾಗದಂತೆ ಕಾನೂನು ಪ್ರಕ್ರಿಯೆ ನಡೆಸಿ ಕಳಿಸಿಕೊಡುತ್ತಿದ್ದರು. ಅಧಿಕಾರಸ್ಥ ಪಕ್ಷದ ಮಂತ್ರಿಗಳು ಹೇಳಿದ್ದಾರೆಂದು ಯಾವ ಪೊಲೀಸನೂ ಕಾನೂನು ಮೀರಿ ಅನುಚಿತವಾಗಿ ನಡೆದು ಕೊಳ್ಳಲಾರ. ಕೇಸು ರಿಜಿಸ್ಟರ್ ಆಗಿರೋದ್ರಿಂದ ಬೇಗ ಅರೆಸ್ಟ್ ಮಾಡಿ ಎಂದು ಮಂತ್ರಿ ಹೇಳಬಹುದಷ್ಟೇ. ಆರೋಪಿಗೆ ಟಾರ್ಚರ್ ಕೊಡು ಎಂದು ಹೇಳಿದರೂ ಪೊಲೀಸರು ಕೊಡಲಾರರು. ನಾಳೆ ಇದೇ ಮಂತ್ರಿ ಕುರ್ಚಿ ಅದಲು ಬದಲಾಗುವ ವಾಸ್ತವ ಪೊಲೀಸರಿಗೆ ಚೆನ್ನಾಗಿ ಗೊತ್ತು! ಮಂತ್ರಿ ಹೇಳಿದಂತೆಯೇ ಮಾಡುವ ದಡ್ಡ ಪೊಲೀಸರು ಕಡಿಮೆ. ಆದರೆ ಶಿರಸಾವಹಿಸಿ ಮಾಡಿದಂತೆ ಚೆನ್ನಾಗಿ ನಟಿಸಬಲ್ಲರು!

ಈಗ ಪ್ರಜ್ವಲ್‌ನನ್ನೇ ತೆಗೆದುಕೊಳ್ಳಿ. ಅವನನ್ನು ಅರೆಸ್ಟ್ ಮಾಡಿದ ಪೊಲೀಸರು ಯಾವ ಕ್ರಮ ಜರುಗಿಸುತ್ತಾರೆ! ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗಿದೆ ಎಂದು ಕೈಗೆ, ಮೈಗೆ ಬೇಡಿ ಹಾಕಿಕೊಂಡು ಊರೆಲ್ಲಾ ಮೆರವಣಿಗೆ ಮಾಡಲಾಗುತ್ತದೆಯೇ; ದೈಹಿಕ ಹಿಂಸೆ ಕೊಡಲು ಸಾಧ್ಯವೇ! ಪೊಲೀಸರು ಮಾಡುವ ಚಿಕ್ಕ ಎಡವಟ್ಟನ್ನೂ ದೊಡ್ಡದಾಗಿ ಬಿಂಬಿಸಿ, ಅವರ ಮೇಲೇ ಆಪಾದನೆ ಮಾಡಲು ಗಣ್ಯಾಪರಾಧಿ ಹೊಂಚು ಹಾಕಿರುತ್ತಾನೆ. ಇಂತಿಲ್ಲಿ ಚಿಕ್ಕ ಲೋಪಕ್ಕೂ ಎಡೆಗೊಡದಂತೆ ಪೊಲೀಸರು ಎಚ್ಚರದಿಂದ ಕಾರ್ಯನಿರ್ವಹಿಸಬೇಕು.

ಅರೆಸ್ಟ್ ಮಾಡಿದ ತಕ್ಷಣ ವೈದ್ಯಕೀಯ ಪರೀಕ್ಷೆ ಮಾಡಿಸುತ್ತಾರೆ. ಮೈಮೇಲಿರಬಹುದಾದ ಗಾಯ–ಪಾಯ, ಬಾಸುಂಡೆ ಎಲ್ಲವೂ ವೀಡಿಯೋ ಸಮೇತ ದಾಖಲಾಗುತ್ತವೆ. ಕೇಸಿಗೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುತ್ತಾರೆ. ತನಿಖೆಗೆ ಸಂಬಂಧಿಸಿದಂತೆ ಮಹಜರು, ಸೀಜ಼ರು, ವೈದ್ಯಕೀಯ ಪರೀಕ್ಷೆ ಹೇಳಿಕೆ ಇತ್ಯಾದಿಗಳನ್ನು ವೀಡಿಯೋ ಸಮೇತ ನಡೆಸುತ್ತಾರೆ. ಇದೇ ಕೆಲಸಗಳನ್ನು ಕೇಸು ದಾಖಲಾದ ದಿನವೇ ದಸ್ತಗಿರಿ ಮಾಡಿದ್ದಿದ್ದರೂ ನಡೆಸುತ್ತಿದ್ದರು. ಈಗ ಸಿಕ್ಕರೂ ಅದನ್ನೇ ಮಾಡುತ್ತಾರೆ. ಇನ್ನಾರು ತಿಂಗಳು ಬಿಟ್ಟು ನಂತರ ಸಿಕ್ಕರೂ ಇದನ್ನೇ ಮಾಡಬೇಕು. ಮಾಡಿಯೇ ಮಾಡುತ್ತಾರೆ. ಕಾನೂನು ಪ್ರಕ್ರಿಯೆ ಇರುವುದೇ ಹೀಗೆ.


ಹಾಗಿದ್ದರೆ ಇಷ್ಟು ದಿನ ಖಂಡಾಂತರಗಳಲ್ಲಿ ತಲೆಮರೆಸಿಕೊಂಡಿದ್ದರಿಂದ ಆದ ಪ್ರಯೋಜನವಾದರೂ ಏನೇನು; ವೃಥಾ ಮಾಧ್ಯಮಗಳ ವಿಕೃತ ವರದಿಗಳಿಗೆ, ಜನಗಳ ಬಾಯಿಗೆ ಆಹಾರವಾದಂತಾಯಿತು ಅಷ್ಟೇ. ನಾನು ಕದ್ದು ಮದುವೆಯಾಗ್ತೀನಿ, ನೀನು ಬಗ್ಗಿ ವಾಲಗ ಊದು ಅಂದಂತೆ. ಮರ್ಯಾದೆ ಉಳಿದುಕೊಂಡದ್ದು ಅಷ್ಟರಲ್ಲೇ ಏನೇನು ಡ್ಯಾಮೇಜ್ ಆಗಬೇಕಿತ್ತೋ ಜಾಸ್ತಿಯೇ ಆಗಿ ಹೋಗಿದೆ. ಹೊರಗಿದ್ದರೆ ಸಾಕ್ಷ್ಯಗಳನ್ನು ನಾಶಪಡಿಸುತ್ತಾನೆ, ಸಾಕ್ಷಿಗಳನ್ನು ಬೆದರಿಸುತ್ತಾನೆ ಎಂದು ಹೇಳಬಹುದಷ್ಟೇ. ಆದರೆ ಅದನ್ನೂ ಮಾಡಲು ಸಾಧ್ಯವಿಲ್ಲದ ಪರಿಸ್ಥಿತಿ ಈಗ ಉಂಟಾಗಿಲ್ಲವೇ. ಹಾಗಿದ್ದರೆ ಈ ಕಣ್ಮರೆಯಿಂದ ಆರೋಪಿಗಾದ ಲಾಭವೇನು, ಕಾಪಾಡಿಕೊಂಡ ಮರ್ಯಾದೆಯಾದರೂ ಎಷ್ಟು. ಆರೋಪಿಗಳಿಗೆ ತಲೆ ತಪ್ಪಿಸಿಕೊಂಡು ಹೋಗಿ ಎಂದು ಸಲಹೆ ಕೊಟ್ಟ ಮಹಾನುಭಾವರೇ ಹೇಳಬೇಕು ಅಷ್ಟೇ. ಕೇಸು ದಾಖಲಾದಾಗಲೇ ಶರಣಾಗಿದ್ದಿದ್ದರೆ ತನಿಖೆಯ ಕೆಲಸಗಳೂ ಸರಸರ ಮುಗಿದು ಕೋರ್ಟ್‌ನಿಂದ ಬೇಲೂ ಸಿಕ್ಕಿರೋದು. ಹಗರಣ ಈ ಮಟ್ಟಕ್ಕೆ ಬೆಳೆಯುತ್ತಿರಲಿಲ್ಲ.


ಇಂಥದ್ದೇ ಕೇಸುಗಳಲ್ಲಿ ಬಡವನೊಬ್ಬ ಸಿಕ್ಕಿಬಿದ್ದಿದ್ದರೆ ಸುದ್ದಿಯ ಹಲಾ–ಗುಲ್ಲಾವೇ ಆಗುತ್ತಿರಲಿಲ್ಲ. ಕಾನೂನು ಪ್ರಕ್ರಿಯೆಗಳು ಸಲೀಸಾಗಿ ನಡೆದು, ಸುಲಭವಾಗಿ ಬೇಲೂ ಸಿಕ್ಕು ಬಿಡುಗಡೆಯಾಗಿರುತ್ತಿದ್ದ ಎಂದರೆ ಉತ್ಪ್ರೇಕ್ಷೆಯಲ್ಲ! ಅಪರಾಧಿ ಅರೆಸ್ಟ್ ಆದನೆಂದರೆ ಕೇಸೇ ಕ್ಲೋಸ್ ಆದಂತೆ . ಜನಕ್ಕೆ ಆಸಕ್ತಿಯೇ ಉಳಿಯುವುದಿಲ್ಲ. ಮಾಧ್ಯಮದವರು ಬೇರೆ ಹೊಸ ಬ್ರೇಕಿಂಗ್ ನ್ಯೂಸ್‌ನ ಬೆನ್ನು ಹತ್ತುತ್ತಿದ್ದರು!

ಈಗ ಬಂದು ಶರಣಾದರೂ ಮುಂದೆ ವಿದೇಶಕ್ಕೆ ಪಲಾಯನ ಮಾಡುತ್ತಾನೆ. ವಾಪಸ್ ಬರುವುದೇ ಇಲ್ಲ ಎಂಬಂತಹ ಅಬ್ಜೆಕ್ಷನ್ ಹಾಕಿದರೆ ಜೈಲೇ ಗತಿ. ಶರಣಾಗತಿಯಲ್ಲಿರುವ ಪ್ರಯೋಜನ ಪಲಾಯನದಲ್ಲಿದೆಯೇ! ಇದೆಲ್ಲಾ ಬೇಕಿತ್ತೇ ಹೇಳಿ...!!

ಭರಣಿ ಆರ್ಟ್ ಗ್ಯಾಲರಿ 30ನೇ ವಾರ್ಷಿಕೋತ್ಸವ ಸಂಭ್ರಮ

ನಾಳೆಯಿಂದ ನಿಸರ್ಗ ಲಾಲಿತ್ಯ: ಜಲವರ್ಣ ಕಲಾಕೃತಿಗಳ ಪ್ರದರ್ಶನ





ಮೈಸೂರು, ಮೇ 24– ಮೈಸೂರಿನ ಭರಣಿ ಆರ್ಟ್ ಗ್ಯಾಲರಿಯು ತನ್ನ 30ನೇ ವಾರ್ಷಿಕೋತ್ಸವದ ಅಂಗವಾಗಿ ವಿವೇಕಾನಂದನಗರದಲ್ಲಿರುವ ಭರಣಿ ಆರ್ಟ್ ಗ್ಯಾಲರಿಯಲ್ಲಿ ಮೇ 26ರಿಂದ 28 ರವರೆಗೆ ನಿಸರ್ಗ ಚಿತ್ರ ಕಲಾವಿದ ಹಾ.ಪು. ರಂಗಸ್ವಾಮಿ ಅವರ ನಿಸರ್ಗ ಲಾಲಿತ್ಯ: ಜಲವರ್ಣ ಕಲಾಕೃತಿಗಳ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಪ್ರದರ್ಶನವು ಬೆಳಗ್ಗೆ 11 ರಿಂದ ರಾತ್ರಿ 7 ಗಂಟೆಯವರೆಗೆ ಇರುತ್ತದೆ.


ಮೇ 26 ರಂದು ಬೆಳಗ್ಗೆ 11 ಗಂಟೆಗೆ ಕೊಡವ ಸಮಾಜದ ಕಲ್ಚರಲ್ ಮತ್ತು ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ಕುಟ್ಟಿಮಾಡ ಡಿ. ಮುತ್ತಪ್ಪ ಪ್ರದರ್ಶನ ಉದ್ಘಾಟಿಸುವರು. ಭರಣಿ ಆರ್ಟ್ ಗ್ಯಾಲರಿ ಹಿರಿಯ ಕಲಾವಿದರು, ಸಂಸ್ಥಾಪಕರು ಮತ್ತು ಪ್ರಧಾನ ಸಂಚಾಲಕರಾದ ಎನ್.ಬಿ. ಕಾವೇರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ವಿಶೇಷ ಅತಿಥಿಗಳಾಗಿ ಖ್ಯಾತ ಕಲಾವಿದ ಗಂಜೀಫಾ ರಘುಪತಿ ಭಟ್, ಸಾಹಿತಿ ಡಾ. ಮಜ್ಜಿಗೆಪುರ ಕೆ.ಶಿವರಾಮು, ಇ–ಬಂಟೋಟೋರಿಯಂ ನೆಟ್‌ವರ್ಕ್ ಪ್ರೈವೇಟ್ ಲಿಮಿಟೆಡ್‌ನ ಮುಖ್ಯ ವಿತರಕ ನಂಜುಂಡಸ್ವಾಮಿ ಭಾಗವಹಿಸುವರು. ನಿಸರ್ಗ ಚಿತ್ರ ಕಲಾವಿದ ಹಾ.ಪು. ರಂಗಸ್ವಾಮಿ ಉಪಸ್ಥಿತರಿರುವರು.


ನಿಸರ್ಗ ಚಿತ್ರ ಕಲಾವಿದ ಹಾ.ಪು. ರಂಗಸ್ವಾಮಿ

ಭರಣಿ ಆರ್ಟ್ ಗ್ಯಾಲರಿ: ಭರಣಿ ಆರ್ಟ್ ಗ್ಯಾಲರಿಯು ಸುಮಾರು 30 ವರ್ಷಗಳಿಂದ ಕಲಾವಲಯಕ್ಕೆ ಸೇವೆ ಸಲ್ಲಿಸುತ್ತಿರುವ ಮೈಸೂರಿನ ಪ್ರಪ್ರಥಮ ಸೇವಾ ನೆಲೆಗಟ್ಟಿನ ಖಾಸಗಿ ಕಲಾಗ್ಯಾಲರಿಯಾಗಿದೆ. 1994 ಮೇ ಮಾಹೆಯಲ್ಲಿ ಮೈಸೂರಿನ ಹಳೆಯ ಗ್ಯಾಲರಿ ಕಲ್ಪನೆಯನ್ನು ಬದಲಾಯಿಸಿ ಸಮಕಾಲೀನ ನೆಲೆಗಟ್ಟಿನಲ್ಲಿ ಕಲಾ ಗ್ಯಾಲರಿಯನ್ನು ನಡೆಸಿಕೊಂಡು ಬಂದಿರುವ ಮೂಲತಃ ಕೊಡಗಿನವರು, ಮೈಸೂರಿನಲ್ಲಿ ನೆಲೆಸಿರುವ ಕಲಾವಿದ ಎನ್.ಬಿ.ಕಾವೇರಪ್ಪನವರು, ದೃಶ್ಯಕಲಾ ಪ್ರದರ್ಶನ ಮತ್ತು ಕಲಾಭಿವೃದ್ಧಿಗಾಗಿ ಬಹಳ ಪರಿಶ್ರಮ ಪಟ್ಟಿದ್ದಾರೆ.

ಕಲಾವಲಯದಲ್ಲಿ ಅನೇಕ ಪ್ರಥಮಗಳನ್ನು ಸೃಷ್ಟಿಸಿರುವ ಈ ಕಲಾ ಗ್ಯಾಲರಿಯಲ್ಲಿ ನೂರಾರು ಕಲಾ ಪ್ರದರ್ಶನಗಳಾಗಿವೆ. ನಮ್ಮ ರಾಜ್ಯದ 10ಜನ ಹಿರಿಯ ಖ್ಯಾತ ಕಲಾವಿದರನ್ನು ಒಂದೆಡೆ ಸೇರಿಸಿ ಗ್ಯಾಲರಿಯಲ್ಲೇ 3 ದಿನ ಕಲಾಶಿಬಿರ, ಕಲಾ ಪ್ರದರ್ಶನ ಹಾಗೂ ಸಂವಾದ ಕಾರ್ಯಕ್ರಮಗಳನ್ನು ನಡೆಸಿರುವ ಕೀರ್ತಿ ಭರಣಿ ಆರ್ಟ್ ಗ್ಯಾಲರಿಯದ್ದಾಗಿದೆ. ಫಿನ್ಲೆಂಡ್‌ನ ಇಬ್ಬರು ಹಾಗೂ ಆಸ್ಟ್ರೇಲಿಯಾದ ಇಬ್ಬರು ಮಹಿಳಾ ಕಲಾವಿದರು ಇಲ್ಲಿ ತಮ್ಮ ಕಲಾಪ್ರದರ್ಶನವನ್ನು ನಡೆಸಿದ್ದಾರೆ. ಹೆಚ್ಚಿನ ಮಾಹಿತಿಗೆ ಎನ್.ಬಿ. ಕಾವೇರಪ್ಪ ಅವರನ್ನು ಮೊ. 94485–54221 ಸಂಪರ್ಕಿಸಬಹುದು.

ಇಂದಿನಿಂದ ಶ್ರೀಯೋಗಾ ನರಸಿಂಹಸ್ವಾಮಿ ದೇವಾಲಯದಲ್ಲಿ ಕುಂಭಾಭಿಷೇಕ, ಮಹಾ ಸುದರ್ಶನ ಯಾಗ



ಮೈಸೂರು, ಮೇ 24– ಮೈಸೂರಿನ ವಿಜಯನಗರ ಒಂದನೇ ಹಂತದ ಸುದರ್ಶನ ನಾರಸಿಂಹ ಕ್ಷೇತ್ರ– ಶ್ರೀಯೋಗಾ ನರಸಿಂಹಸ್ವಾಮಿ ದೇವಾಲಯದಲ್ಲಿ ಮೇ 25ರಿಂದ ಕುಂಭಾಭಿಷೇಕ ಮಹೋತ್ಸವ ಹಾಗೂ ಮಹಾ ಸುದರ್ಶನ ಯಾಗ ಹಮ್ಮಿಕೊಳ್ಳಲಾಗಿದೆ. ದೇಗುಲದ ಸ್ಥಾಪಕ ಆಗಮ ಪ್ರವೀಣ ಡಾ.ಬಾಷ್ಯಂ ಸ್ವಾಮೀಜಿ ನೇತೃತ್ವದಲ್ಲಿ ಮೇ 25 ಶನಿವಾರದಂದು ವಿಜೃಂಭಣೆಯಿಂದ ಪ್ರತಿನಿತ್ಯ ಸ್ವಾಮಿಯವರಿಗೆ ವಿವಿಧ ಬಗೆಯ ಅಲಂಕಾರಗಳು ಲಕ್ಷಾರ್ಚನೆ ಮತ್ತು ಮಾತೆಯರಿಂದ ಲಲಿತಾ ಸಹಸ್ರಾಮ ಪಾರಾಯಣ, ಮೇ 26 ಭಾನುವಾರದಂದು ಸಹಸ್ರ ಕಳಶಾಭಿಷೇಕ – ಸೌಂದರ್ಯ ಲಹರಿ ಪಾರಾಯಣ, ಮೇ 27 ರಂದು ಕುಂಭಾಭಿಷೇಕ ಅಖಂಡ ಮಹಾ ಸುದರ್ಶನ ಹೋಮ, ವಿಷ್ಣು ಸಹಸ್ರ ನಾಮ ಪಾರಾಯಣದೊಂದಿಗೆ ಸಂಪನ್ನವಾಗಲಿದೆ ಎಂದು ದೇವಾಲಯದ ಆಡಳಿತಾಧಿಕಾರಿ ಎನ್ ಶ್ರೀನಿವಾಸನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾಹಿತಿಗೆ 9900400000 ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಪಾಲಿಕೆ ಪ್ರಧಾನ ಕಚೇರಿ ಕಟ್ಟಡ ತಾರಸಿ ದುರಸ್ತಿಗೆ ಆಡಳಿತಾತ್ಮಕ ಅನುಮೋದನೆ



ಟೆಂಡರ್ ಪ್ರಕ್ರಿಯೆ ನಂತರ ಕೋಟಿ ರೂ. ವೆಚ್ಚದ ಕಾಮಗಾರಿಗೆ ಚಾಲನೆ

ಮೈಸೂರು, ಮೇ 24(ಆರ್‌ಕೆ)– ಶಿಥಿಲಗೊಂಡು ಸೋರುತ್ತಿದ್ದ ಮೈಸೂರು ಮಹಾನಗರ ಪಾಲಿಕೆ ಪ್ರಧಾನ ಕಚೇರಿ ಪಾರಂಪರಿಕ ಕಟ್ಟಡದ ತಾರಸಿಗೆ ವಾಟರ್ ಪ್ರೂಫಿಂಗ್ ಮಾಡುವ ಸಲುವಾಗಿ ಡಿಪಿಆರ್‌ಗೆ ಆಡಳಿತಾತ್ಮಕ ಅನುಮೋದನೆ ದೊರೆತಿದೆ.

ಈ ಹಿಂದೆಯೇ ಜಿಲ್ಲಾಧಿಕಾರಿಗಳ ನೇತೃತ್ವದ ಜಿಲ್ಲಾ ಮಟ್ಟದ ಪಾರಂಪರಿಕ ಸಮಿತಿಯು ಸಯ್ಯಾಜಿರಾವ್ ರಸ್ತೆಯಲ್ಲಿರುವ ಪಾಲಿಕೆ ಪ್ರಧಾನ ಕಚೇರಿಯ ಪಾರಂಪರಿಕ ಕಟ್ಟಡದ ಟೆರೇಸ್ ದುರಸ್ತಿಗೊಳಿಸಿ, ಸಂರಕ್ಷಿಸುವ ಅಂದಾಜು ಪಟ್ಟಿಗೆ ಅನುಮೋದನೆ ನೀಡಿತ್ತು.

ಕಾಮಗಾರಿಗೆ ಟೆಂಡರ್ ಕರೆಯಲಾಗಿತ್ತಾದರೂ, ಗುತ್ತಿಗೆದಾರರು ಬಿಡ್‌ನಲ್ಲಿ ಪಾಲ್ಗೊಂಡಿರಲಿಲ್ಲ. ಇದೀಗ ಮಳೆಯಿಂದಾಗಿ ತಾರಸಿ ಸೋರುತ್ತಿದ್ದು, ಕಚೇರಿಗಳಲ್ಲಿ ನೀರು ನಿಲ್ಲುತ್ತಿದ್ದರಿಂದ ಎಚ್ಚೆತ್ತ ಅಧಿಕಾರಿಗಳು, ಪಾರಂಪರಿಕ ತಜ್ಞರಿಂದ ಪರಿಶೀಲನೆ ನಡೆಸಿ, ಯಾವ ರೀತಿ ರಿಪೇರಿ ಮಾಡಬೇಕೆಂಬುದರ ಬಗ್ಗೆ ಸಲಹೆ, ಮಾರ್ಗದರ್ಶನ ಪಡೆದು ಒಂದು ಕೋಟಿ ರೂ. ಅಂದಾಜು ಪಟ್ಟಿಯೊಂದಿಗೆ ಡಿಪಿಆರ್ ತಯಾರಿಸಿದ್ದರು. ತುರ್ತಾಗಿ ಪಾರಂಪರಿಕ ಕಟ್ಟಡವನ್ನು ಸಂರಕ್ಷಿಸಬೇಕಾಗಿರುವುದರಿಂದ ಪಾಲಿಕೆ ಆಯುಕ್ತ ಡಾ. ಎನ್.ಎನ್. ಮಧು ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದಾರೆ. ಟೆಂಡರ್ ಕರೆದು ಪಾರಂಪರಿಕ ಶೈಲಿ ಹಾಗೂ ಮಾರ್ಗಸೂಚಿಯಂತೆ ಸಾಮಗ್ರಿಗಳನ್ನು ಬಳಸಿ ಕಾಮಗಾರಿ ಆರಂಭಿಸಲಾಗುವುದು ಎಂದು ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಸಿಂಧೂ ತಿಳಿಸಿದ್ದಾರೆ.

ಕಾಮೆಡ್–ಕೆ ಫಲಿತಾಂಶ: ಬೆಂಗಳೂರು ವಿದ್ಯಾರ್ಥಿಗಳ ಮೇಲುಗೈ

ಬೆಂಗಳೂರು, ಮೇ 24– ಕರ್ನಾಟಕ ವೈದ್ಯಕೀಯ, ಎಂಜಿನಿಯರಿಂಗ್ ಮತ್ತು ದಂತ ವೈದ್ಯಕೀಯ ಕಾಲೇಜುಗಳ ಒಕ್ಕೂಟ (ಕಾಮೆಡ್–ಕೆ) ನಡೆಸಿದ್ದ 2024ನೇ ಸಾಲಿನ ಪ್ರವೇಶ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಮೊದಲ 10 ಸ್ಥಾನಗಳಲ್ಲಿ ಬೆಂಗಳೂರಿನ ಎಂಟು ವಿದ್ಯಾರ್ಥಿಗಳು ಸ್ಥಾನ ಪಡೆದಿದ್ದಾರೆ. ಬೆಂಗಳೂರಿನ ಬಾಲಸತ್ಯ ಸರವಣನ್ ಮೊದಲಿಗರಾಗಿ ಹೊರಹೊಮ್ಮಿದ್ದಾರೆ. ದೇವಾಂಶ್ ತ್ರಿಪಾಠಿ, ಸನಾ ತಬಸ್ಸುಮ್, ಪ್ರಕೇತ್ ಗೋಯಲ್ ಕ್ರಮವಾಗಿ ಎರಡು, ಮೂರು ಹಾಗೂ ನಾಲ್ಕನೇ ಸ್ಥಾನ ಪಡೆದಿದ್ದಾರೆ. ಹಿಮಾಚಲ ಪ್ರದೇಶದ ವಿದ್ಯಾರ್ಥಿ ಮಾನಸ್ ಸಿಂಗ್ ರಜಪೂತ್ ಐದು, ಆಂಧ್ರಪ್ರದೇಶದ ಗಣಿಪಿಸೆಟ್ಟಿ ನಿಶ್ಚಲ್ ಆರನೇ ಸ್ಥಾನ ಗಳಿಸಿದ್ದಾರೆ. ಬೆಂಗಳೂರಿನ ನಿಕೇತ್ ಪ್ರಕಾಶ್ ಅಚಂತಾ (ಏಳು) ನೇಹಾ ಪ್ರಭು (ಎಂಟು), ಜಗದೀಶ್ ರೆಡ್ಡಿ ಮಾರ್ಲಾ (ಒಂಬತ್ತು), ಈಶ್ವರಚಂದ್ರ ರೆಡ್ಡಿ ಮುಲ್ಕಾ 10ನೇ ಸ್ಥಾನ ಪಡೆದಿದ್ದಾರೆ. ಮೊದಲ 100 ಸ್ಥಾನಗಳಲ್ಲಿ 58 ವಿದ್ಯಾರ್ಥಿಗಳು ಕರ್ನಾಟಕದವರು.

ಕರ್ನಾಟಕದ 3,126 ಮಂದಿ ಸೇರಿ 10,575 ವಿದ್ಯಾರ್ಥಿಗಳು ಶೇ 90ರಿಂದ 100 ಪರ್ಸೆಂಟೈಲ್ ಗಳಿಸಿದ್ದಾರೆ. 10,538 ಅಭ್ಯರ್ಥಿಗಳು ಶೇ 80ರಿಂದ 90 ಹಾಗೂ 10,648 ಅಭ್ಯರ್ಥಿಗಳು 70 ಮತ್ತು 80 ಪರ್ಸೆಂಟೈಲ್ ಪಡೆದಿದ್ದಾರೆ.

ಈ ಬಾರಿಯೂ ಆನ್‌ಲೈನ್ ಮೂಲಕವೇ ಕೌನ್ಸೆಲಿಂಗ್ ನಡೆಸಲಾಗುವುದು. ವಿದ್ಯಾರ್ಥಿಗಳು ದಾಖಲೆಗಳ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಅಪ್‌ಲೋಡ್ ಮಾಡಬೇಕು. ಶುಲ್ಕ ವಿವರಗಳು ಮತ್ತು ಕೌನ್ಸೆಲಿಂಗ್ ದಿನಾಂಕಗಳನ್ನು www.comedk.orgನಲ್ಲಿ ವೀಕ್ಷಿಸಬಹುದು. ಕರ್ನಾಟಕದ 150 ಎಂಜಿನಿಯರಿಂಗ್ ಕಾಲೇಜುಗಳು ಹಾಗೂ ಭಾರತದ 50ಕ್ಕೂ ಹೆಚ್ಚು ಖಾಸಗಿ ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶಕ್ಕಾಗಿ ಕಾಮೆಡ್–ಕೆ ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ಮೇ 12ರಂದು ಪರೀಕ್ಷೆ ನಡೆಸಿತ್ತು. 28 ರಾಜ್ಯಗಳು, 189 ನಗರಗಳು ಮತ್ತು 264 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆದಿದ್ದವು. ಕರ್ನಾಟಕದ 35,124 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 1,03,799 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು.

ಅತ್ಯಾಚಾರ ಆರೋಪ ಪ್ರಕರಣ; ವಕೀಲ ದೇವರಾಜೇಗೌಡ ನ್ಯಾಯಾಂಗ ಬಂಧನ ವಿಸ್ತರಣೆ



ಹಾಸನ, ಮೇ 24–ಬಿಜೆಪಿ ಮುಖಂಡ, ವಕೀಲ ದೇವರಾಜೇಗೌಡ ವಿರುದ್ಧದ ಅತ್ಯಾಚಾರ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ಬಂಧನ ಅವಧಿಯನ್ನು ವಿಸ್ತರಿಸಿ ಹಾಸನ 2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಆದೇಶಿಸಿದೆ. ಮತ್ತೆ 14 ದಿನ ಅಂದರೆ ಜೂನ್ 7ರವರೆಗೆ ನ್ಯಾಯಾಂಗ ಬಂಧನಕ್ಕೊಪ್ಪಿಸಲಾಗಿದೆ.

ಅತ್ಯಾಚಾರ ಆರೋಪ ಕೇಸ್‌ನಲ್ಲಿ ವಕೀಲ ದೇವರಾಜೇಗೌಡರಿಗೆ ಮೇ 11 ರಂದು 14 ದಿನ ನ್ಯಾಯಾಂಗ ಬಂಧನಕ್ಕೆ ನೀಡಿ ಹಾಸನ ಜಿಲ್ಲೆಯ ಹೊಳೆನರಸೀಪುರ ಜೆಎಂಎಫ್‌ಸಿ ಕೋರ್ಟ್ ಆದೇಶಿಸಿತ್ತು. ಬಳಿಕ ಪೊಲೀಸರು ಹೆಚ್ಚಿನ ವಿಚಾರಣೆಗಾಗಿ 4 ದಿನ ಕಸ್ಟಡಿಗೆ ಅನುಮತಿ ಪಡೆದಿದ್ದರು. ಅದರಂತೆ ವಿಚಾರಣೆ ಮುಕ್ತಾಯ ಹಿನ್ನಲೆ ಕೋರ್ಟ್‌ಗೆ ಹಾಜರುಪಡಿಸಿ ನಂತರ ಮೇ 24ರವರೆಗೂ JMFC ಕೋರ್ಟ್ ನ್ಯಾಯಾಂಗ ಬಂಧನಕ್ಕೆ ನೀಡಿತ್ತು. ಈ ಮಧ್ಯೆ ಒಂದು ದಿನ ಎಸ್‌ಐಟಿ ಕಸ್ಟಡಿಗೆ ನೀಡಿ ಕೋರ್ಟ್ ಆದೇಶಿಸಿತ್ತು. ಇಂದಿಗೆ ನ್ಯಾಯಾಂಗ ಬಂಧನ ಅವಧಿ ಮುಗಿದಿದ್ದ ಹಿನ್ನೆಲೆ ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು.

ಇದೇ ಮೇ 28ಕ್ಕೆ ದೇವರಾಜೇಗೌಡರ ಜಾಮೀನು ಅರ್ಜಿ ವಿಚಾರಣೆ ನಡೆಯಲಿದೆ. ಇನ್ನು ಇವರು ಮೇ 11 ರಂದು ಬಂಧನಕ್ಕೆ ಒಳಗಾಗಿದ್ದರು. ದೇವರಾಜೇಗೌಡನನ್ನು ಮೇ 14ರಿಂದ ಮೇ 16 ರವರೆಗೆ ಹೊಳೆನರಸೀಪುರ ನಗರ ಠಾಣೆ ಪೊಲೀಸರು ಕಸ್ಟಡಿಗೆ ಪಡೆದಿದ್ದರು. ಬಳಿಕ ಮತ್ತೊಂದು ದಿನ ಕಸ್ಟಡಿಗೆ ಮನವಿ ಮಾಡಿ ಮೇ 17 ಮಧ್ಯಾಹ್ನದವರೆಗೆ ಪೊಲೀಸರು ವಿಚಾರಣೆ ನಡೆಸಿದ್ದರು.

ಹಾರ್ಟ್ ಸಂಸ್ಥೆಯಿಂದ ಪೌರ ಕಾರ್ಮಿಕರಿಗೆ ಆರೋಗ್ಯ ಶಿಬಿರ



ಮೈಸೂರು, ಮೇ 24– ಹಾರ್ಟ್ ಸಂಸ್ಥೆಯು ಮೈಸೂರು ಮಹಾನಗರ ಪಾಲಿಕೆಯ ಪೌರಕಾರ್ಮಿಕರಿಗಾಗಿ ಆರೋಗ್ಯ ಶಿಬಿರವನ್ನು ಏರ್ಪಡಿಸಿತ್ತು. ಈ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಮೈಸೂರು ನಗರ ಪಾಲಿಕೆ ವಲಯ ಆಯುಕ್ತ ಮಂಜುನಾಥ್ ರೆಡ್ಡಿ, ನಮ್ಮ ನಗರದ ಸ್ವಚ್ಛತಾ ರುವಾರಿಗಳಾದ ಪೌರ ಕಾರ್ಮಿಕರಿಗೆ ಆರೋಗ್ಯ ಜಾಗೃತಿ ಮತ್ತು ತಪಾಸಣಾ ಶಿಬಿರವನ್ನು ಆಯೋಜಿಸುವ ಮೂಲಕ ಹಾರ್ಟ್ ಸಂಸ್ಥೆಯು ನಮ್ಮ ಪೌರಕಾರ್ಮಿಕರಲ್ಲಿ ಆರೋಗ್ಯ ವೃದ್ಧಿಸುವ ಕೆಲಸಗಳನ್ನು ಮಾಡುತ್ತಿರುವುದು ಶ್ಲಾಘನೀಯ ಎಂದರು.

ಇವರ ಸೇವೆ ಹೀಗೆ ನಗರದ 65 ವಾರ್ಡ್‌ಗಳಲ್ಲಿಯೂ ಮುಂದುವರೆಯಲಿದ್ದು, ಇದರ ಸದುಪಯೋಗವನ್ನು ಎಲ್ಲಾ ಪೌರಕಾರ್ಮಿಕರು ಪಡೆದುಕೊಳ್ಳಿ ಎಂದು ಕರೆ ನೀಡಿದರು.

ಹಾರ್ಟ್ ಸಂಸ್ಥೆಯ ಸಂಸ್ಥಾಪಕ ಮತ್ತು ಅಧ್ಯಕ್ಷ ಶಿವಕುಮಾರ ಮಾತನಾಡಿ, ಮೈಸೂರು ನಗರ ಸುಂದರ ನಗರಿ ಎಂದು ಹೆಸರು ಬರುವಲ್ಲಿ ಪ್ರಮುಖ ಕಾರಣೀಭೂತರಾದ ನಮ್ಮ ಸ್ವಚ್ಛತಾಕರ್ಮಿಗಳು ಎಲ್ಲಾ ಸಮುದಾಯದ ಆರೋಗ್ಯವನ್ನು ಕಾಪಾಡುವಲ್ಲಿ ಮುಂಚೂಣಿಯಲ್ಲಿದ್ದಾರೆ. ಹಾಗಾಗಿ ಇವರ ಆರೋಗ್ಯ ಕಾಪಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದರು. ಅದಕ್ಕಾಗಿಯೇ ಹಾರ್ಟ್ ಸಂಸ್ಥೆಯು ನಗರದ ಎಲ್ಲಾ 65 ವಾರ್ಡಿನಲ್ಲಿರುವ ಸುಮಾರು 2000 ಪೌರ ಕಾರ್ಮಿಕರ ಆರೋಗ್ಯ ತಪಾಸಣೆ ಮಾಡುವ ಯೋಜನೆಯನ್ನು ಹೊಂದಿದ್ದು, ಇಂದು ವಲಯ ಒಂದರಿಂದ ಆರಂಭಿಕ ಶಿಬಿರಕ್ಕೆ ಚಾಲನೆ ನೀಡಲಾಗುತ್ತಿದೆ ಎಂದು ತಿಳಿಸಿದರು. ನಾರಾಯಣ ಹೃದಯಾಲಯ ಹಾಗೂ ಎಎಸ್‌ಜಿ ಕಣ್ಣಿನ ಆಸ್ಪತ್ರೆ, ಮೈಸೂರು ಇವರ ಸಹಯೋಗದೊಂದಿಗೆ ಆಯೋಜಿಸಿದ್ದ ಈ ಶಿಬಿರದಲ್ಲಿ 4 ವಾರ್ಡಿನ 100ಕ್ಕೂ ಹೆಚ್ಚು ಪೌರಕಾರ್ಮಿಕರಿಗೆ ಮಧುಮೇಹ, ರಕ್ತದೊತ್ತಡ ಹಾಗೂ ಹೃದಯ ಸಂಬಂಧಿತ ಸಮಸ್ಯೆಗಳಿಗೆ ತಪಾಸಣೆ ಮಾಡಲಾಯಿತು ಮತ್ತು 110 ಪೌರ ಕಾರ್ಮಿಕರಿಗೆ ಕಣ್ಣಿನ ಪರೀಕ್ಷೆಯನ್ನು ಮಾಡಲಾಯಿತು.

ಕಾರ್ಯಕ್ರಮದಲ್ಲಿ ಹಾರ್ಟ್ ಸಂಸ್ಥೆಯ ಕಾರ್ಯದರ್ಶಿ ರಮೇಶ್, ಸಹಾಯಕ ಅಭಿಯಂತರ ಸುಶ್ರುತ್, ಪರಿಸರ ಅಭಿಯಂತರ ಶ್ರೀಮತಿ ಜ್ಯೋತಿ, ಮತ್ತು ಸಿಬ್ಬಂದಿ ವರ್ಗ ಹಾಗೂ ನಾರಾಯಣ ಹೃದಯಾಲಯ, ಎಎಸ್‌ಜಿ ಕಣ್ಣಿನ ಆಸ್ಪತ್ರೆಯ ಸಿಬ್ಬಂದಿ ಹಾಜರಿದ್ದರು.

ಪ್ರಜ್ವಲ್ ವಿದೇಶಕ್ಕೆ ಕಳಿಸಿದ್ದೇ ದೇವೇಗೌಡರು ಎಂದ ಸಿದ್ದರಾಮಯ್ಯರಿಗೆ ಕುಮಾರಸ್ವಾಮಿ ತಿರುಗೇಟು

ಅತ್ಯಾಚಾರಕ್ಕೆ ಒಳಗಾದ ಹೆಣ್ಮಕ್ಕಳ ವೀಡಿಯೋಗಳ ಹಂಚುವುದು ಅಮಾನುಷವಲ್ಲವೇ ಮುಖ್ಯಮಂತ್ರಿಗಳೇ...!

● ಇಂಟೆಲಿಜೆನ್ಸ್ ಇಟ್ಟುಕೊಂಡಿರುವ ನಿಮಗೇನೂ ಗೊತ್ತಿಲ್ಲವೇ ● ಶೋಕದ ಮನೆಯಲ್ಲಿ ರಾಜಕೀಯ ಮಾಡುವ ಜಾಯಮಾನ ನಮ್ಮದಲ್ಲ

ಬೆಂಗಳೂರು, ಮೇ 24– ಪ್ರಜ್ವಲ್‌ನನ್ನು ವಿದೇಶಕ್ಕೆ ಕಳಿಸಿರುವುದೇ ಅವರ ತಾತ ದೇವೇಗೌಡರು. ವಿದೇಶಕ್ಕೆ ಕಳಿಸಿ ಈಗ ಪತ್ರ ಬರೆದು ಏನು ಮಾಡುತ್ತಾರೆ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಬಗ್ಗೆ ಮಾತನಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ನಿಮ್ಮ ಆತ್ಮಸಾಕ್ಷಿ ಎನ್ನುವುದು ಅಸ್ತಿತ್ವದಲ್ಲಿ ಇದೆಯಾ ಎಂದು ಪ್ರಶ್ನಿಸಿದ್ದಾರೆ.

ದಯಮಾಡಿ ವಕೀಲಿಕೆ ಮಾಡಬೇಡಿ: ಹಿಂದೆ ನಾನೂ ವಕೀಲಿಕೆ ಮಾಡುತ್ತಿದ್ದೆ ಎಂದು ಪದೇ ಪದೇ ಹೇಳಬೇಡಿ. ನಿಮ್ಮ ವಕೀಲಿ ಜ್ಞಾನದ ಮೇಲೆ ಅಗೌರವ ಬರುವಂತೆ ಮಾತನಾಡಬೇಡಿ. ಎಷ್ಟೋ ಮಹಾನುಭಾವರು ಈ ವೃತ್ತಿಗೆ ಕಳಸಪ್ರಾಯರಾಗಿದ್ದಾರೆ. ಅವರೆಲ್ಲರನ್ನು ಅಪಮಾನಿಸಬೇಡಿ. ಅತ್ಯಾಚಾರದ ವೀಡಿಯೊ ಹರಿದಾಡಿತು ಎನ್ನುವುದಕ್ಕಿಂತ, ಅತ್ಯಾಚಾರ ಘೋರ ಅಪರಾಧ ಎನ್ನುವ ಆಣಿಮುತ್ತು ಉದುರಿಸಿದ್ದೀರಿ. ನಿಮ್ಮ ವಕೀಲಿಕೆಯ ಪಾಂಡಿತ್ಯದ ಬಗ್ಗೆ ಈ ನಿಮ್ಮ ಮಾತು ನನ್ನಲ್ಲಿ ಅನೇಕ ಪ್ರಶ್ನೆಗಳನ್ನು ಉಂಟು ಮಾಡಿದೆ ಎಂದು ಸಿಎಂ ಅವರಿಗೆ ಕುಟುಕಿದ್ದಾರೆ.

ವಿಡಿಯೋ ಹಂಚುವುದು ಅಮಾನುಷವಲ್ಲವೆ?: ಅತ್ಯಾಚಾರ ಅಮಾನುಷ ಎನ್ನುವುದರಲ್ಲಿ ಎರಡನೇ ಮಾತಿಲ್ಲ. ಆದರೆ, ಆ ಅಮಾನುಷಕ್ಕೆ ತುತ್ತಾದ ಹೆಣ್ಮಕ್ಕಳ ವಿಡಿಯೋಗಳನ್ನು ಹಂಚಿ ವಿಕೃತಾನಂದ ಅನುಭವಿಸುವುದು ಮಾನುಷವೇ? ಮನುಷ್ಯರು ಹೇಳುವ ಮಾತೇ ಇದು, ದಯಮಾಡಿ ನೀವು ಇನ್ನೆಂದೂ ನಾನು ವಕೀಲಿಕೆ ಮಾಡುತ್ತಿದ್ದೆ ಎನ್ನಬೇಡಿ.



ನಿಮ್ಮ ಪಕ್ಕದಲ್ಲಿ ಪೆನ್‌ಡ್ರೈವ್ ಹಂಚಿಕೆದಾರ ಕೂತಿದ್ದಾರೆ. ಆ CD ಶಿವು ಚುನಾವಣಾ ಸ್ವಾರ್ಥಕ್ಕಾಗಿ ಹೆಣ್ಮಕ್ಕಳ ಮಾನವನ್ನು ಪೆನ್‌ಡ್ರೈವುಗಳಿಗೆ ತುಂಬಿಸಿ ಹಾದಿಬೀದಿಯಲ್ಲಿ ಮಾರಿಕೊಂಡಿದ್ದು ನಿಮಗೆ ಗೊತ್ತಿಲ್ಲವೇ. ಸ್ವಯಂ ಘೋಷಿತ ಸಂವಿಧಾನ ತಜ್ಞ ಬಿರುದಾಂಕಿತರಾದ ನೀವು, ಇಂಥ ಮಾನದ್ರೋಹಿಯನ್ನು ಪಕ್ಕದಲ್ಲೇ ಕೂರಿಸಿಕೊಳ್ಳಲು ನಿಮ್ಮ ಆತ್ಮಸಾಕ್ಷಿ ಒಪ್ಪುತ್ತದೆಯೇ, ಪ್ರಶ್ನೆ ಮಾಡಿಕೊಳ್ಳಿ ಎಂದು ಖಾರವಾಗಿ ಪ್ರತಿಕ್ರಿಯಿಸಿದ್ದಾರೆ.

ನಿಮ್ಮ ಡಿಸಿಎಂ ಅನ್ನು ಪ್ರಶ್ನಿಸಿದ್ದೀರಾ: ನಿಮ್ಮ ಉಪ ಮುಖ್ಯಮಂತ್ರಿ ಮಹಾಶಯ ಪೆನ್‌ಡ್ರೈವ್ ಹಂಚಿಕೆಯಲ್ಲಿ ಶಾಮೀಲಾಗಿಲ್ಲವೇ? ದೇವರಾಜೇಗೌಡ, ಬ್ರೋಕರ್ ಶಿವರಾಮೇಗೌಡ, ಡಿ.ಕೆ.ಶಿವಕುಮಾರ್ ನಡುವಿನ ಮೊಬೈಲ್ ಸಂಭಾಷಣೆ ನಿಮ್ಮ ಸರಕಾರದ ಮಾನವನ್ನು ಹಾಸನದಲ್ಲಿ ಪೆನ್‌ಡ್ರೈವ್ ರೂಪದಲ್ಲಿ ವೋಟಿಗೆ ಹರಾಜಾಗಲಿಲ್ಲವೇ? ಚಾಲಕ ಕಾರ್ತಿಕ್ ಗೌಡ ಆ ನೊಂದ ಮಹಿಳೆಯರ ಅಶ್ಲೀಲ ವಿಡಿಯೋಗಳನ್ನು ತುಂಬಿದ್ದ ಮೊದಲ ಪೆನ್‌ಡ್ರೈವನ್ನು ನಿಮಗೆ ತಂದು ಕೊಡಲಿಲ್ಲವೇ? ಎಂದು ನಿಮ್ಮ ಉಪ ಮುಖ್ಯಮಂತ್ರಿಯನ್ನು ಒಮ್ಮೆಯಾದರೂ ಕೇಳಿದ್ದೀರಾ ಮುಖ್ಯಮಂತ್ರಿಗಳೇ.. ಎಂದು ಅವರು ಪ್ರಶ್ನಿಸಿದ್ದಾರೆ.

ಪ್ರಜ್ವಲ್ ರೇವಣ್ಣ ಅವರನ್ನು ನಾನೆಂದೂ ಸಮರ್ಥನೆ ಮಾಡಿಲ್ಲ, ಮಾಡುವುದೂ ಇಲ್ಲ. ಪ್ರಕರಣ ಹೊರ ಬಂದ ಮೊದಲ ದಿನವೇ ಈ ನೆಲದ ಕಾನೂನಿಗೆ ಎಲ್ಲರೂ ತಲೆ ಬಾಗಲೇಬೇಕು. ಉಪ್ಪು ತಿಂದವರು ನೀರು ಕುಡಿಯಲೇಬೇಕು ಎಂದು ಹೇಳಿದ್ದೇನೆ. ನನ್ನ ಹೇಳಿಕೆ ನಿಮಗೆ ಗೊತ್ತಾಗಲಿಲ್ಲವೇ. ನಿಮಗೆ ಪತ್ರಿಕೆ ಓದುವ ಅಭ್ಯಾಸ ಇಲ್ಲದಿದ್ದರೆ ನಾನೇನು ಮಾಡಲಿ ಎಂದಿದ್ದಾರೆ. ದೇವೇಗೌಡರ ಬಗ್ಗೆ ನೀವು ಕಾರಿಕೊಂಡ ವಿಷದ ಬಗ್ಗೆ ಹೇಳುವುದಾದರೆ, ನನ್ನ ಮಾತಿಗೆ ಗೌರವ ಕೊಟ್ಟು ಪ್ರಜ್ವಲ್ ವಾಪಸ್ ಬಂದು SIT ಮುಂದೆ ಹಾಜರಾಗದಿದ್ದರೆ ಕುಟುಂಬದಿಂದ ಹೊರ ಹಾಕುತ್ತೇನೆ ಎಂದು ದೇವೇಗೌಡರು ಎಚ್ಚರಿಕೆ ನೀಡಿದ್ದಾರೆ. ಅವರ ಮಾತೇ ನಮ್ಮ ಕುಟುಂಬದ ಮಾತು. ಆದರೆ ನೀವು ಹೇಳಿದ್ದೇನು; ಪ್ರಜ್ವಲ್‌ನನ್ನು ವಿದೇಶಕ್ಕೆ ಕಳಿಸಿರುವುದೇ ಅವರ ತಾತ. ವಿದೇಶಕ್ಕೆ ಕಳಿಸಿ ಈಗ ಪತ್ರ ಬರೆದು ಏನು ಮಾಡುತ್ತಾರೆ ಎಂದಿದ್ದೀರಿ! ನಿಮ್ಮ ಆತ್ಮಸಾಕ್ಷಿ ಎನ್ನುವುದು ಅಸ್ತಿತ್ವದಲ್ಲಿ ಇದೆಯಾ ಎಂದು ತೀಕ್ಷ್ಣವಾಗಿ ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ನಮ್ಮ ಮನೆಗಳ ಮೇಲೆ ಕಳ್ಳಕಿವಿ ಇಟ್ಟಿದ್ದೀರಿ: ಅವನು ದೇವೇಗೌಡರಿಗೆ ಹೇಳಿಯೇ ವಿದೇಶಕ್ಕೆ ಹೋಗಿದ್ದಾನೆ ಎಂದು ಹೇಳಿದ್ದೀರಿ. ನಿಮಗೆ ಹೇಗೆ ಗೊತ್ತು? ನಿಮ್ಮ ಪಕ್ಷದಲ್ಲೇ ಕೂರುವ CD ಶಿವು ಮಾಡುತ್ತಿರುವ ಮಾನಗೇಡಿ ಕೃತ್ಯಗಳು ಗೊತ್ತಾಗೋದಿಲ್ಲ ನಿಮಗೆ! ಆದರೆ, ದೇವೇಗೌಡರ ಮನೆಯಲ್ಲಿ ನಡೆಯೋದೆಲ್ಲ ನಿಮಗೆ ಗೊತ್ತಾಗುತ್ತದೆಯೇ! ಅದು ಹೇಗೆ, ನನ್ನ ಮತ್ತು ದೇವೇಗೌಡರ ಮನೆಗೆ ಕಳ್ಳಕಿವಿ ಇಟ್ಟಿದ್ದೀರಿ ಎನ್ನುವ ನನ್ನ ಆರೋಪ ಸತ್ಯ ಎಂದ ಹಾಗಾಯಿತು... ಅಸತ್ಯ ಹೇಳುವ ಅಗತ್ಯ ನಮಗಿಲ್ಲ. ಅವನು ಕುಟುಂಬದ ಸಂಪರ್ಕದಲ್ಲಿ ಇಲ್ಲ. ಹಿಂದೆಯೂ ಹೇಳಿದ್ದೆ, ಈಗಲೂ ಹೇಳುತ್ತಿದ್ದೇನೆ ಎಂದು ಮಾಜಿ ಮುಖ್ಯಮಂತ್ರಿ ಸ್ಪಷ್ಟಪಡಿಸಿದ್ದಾರೆ.

ಇಂಟೆಲಿಜೆನ್ಸ್ ಇಟ್ಟುಕೊಂಡಿರುವ ನಿಮಗೇನೂ ಗೊತ್ತಿಲ್ಲವೇ: ಪಕ್ಷದ ಅಧ್ಯಕ್ಷನಾಗಿ ಆತನ ವಿರುದ್ಧ ಕ್ರಮ ಕೈಗೊಂಡಿದ್ದೇನೆ. ಆತನ ಮೇಲಿರುವ ಆರೋಪ ಸಾಬೀತಾದರೆ ಪಕ್ಷದಲ್ಲಿ ಆತನಿಗೆ ಸ್ಥಾನವಿಲ್ಲ. ನಿಮಗೆ ಸಂಶಯ ಸಲ್ಲ. ಇನ್ನು, SIT ತನಿಖೆ ಅಂತೀರಾ SIT ಹೆಸರಿನಲ್ಲಿ ಎಷ್ಟು ಸ್ಲೀಪರ್ ಸೆಲ್‌ಗಳು ತನಿಖೆ ಮಾಡುತ್ತಿವೆ ಎಂದು ಬಿಚ್ಚಿಟ್ಟರೆ ನಿಮ್ಮ ಸರಕಾರ ಕಥೆ ಮುಗಿದೇ ಹೋಗುತ್ತದೆ. CD ಶಿವು ಆದೇಶದ ಮೇರೆಗೆ ಪೆನ್‌ಡ್ರೈವ್‌ಗಳನ್ನು ಹಂಚಿದ ಕಿರಾತಕರೆಲ್ಲ ದಿನ ಬೆಳಗಾದರೆ ಯಾರ ಮನೆಯಲ್ಲಿ ಪ್ರತ್ಯಕ್ಷರಾಗುತ್ತಾರೆ, ವಿಧಾನಸೌಧದಲ್ಲಿ ಯಾರ ಕಚೇರಿಯೊಳಕ್ಕೆ ನುಸುಳುತ್ತಾರೆ ಎನ್ನುವುದು ಇಂಟೆಲಿಜೆನ್ಸ್ ಅನ್ನು ಇಟ್ಟುಕೊಂಡಿರುವ ನಿಮಗೇ ಗೊತ್ತಿಲ್ಲದಿದ್ದರೆ ಹೇಗೆ ಎಂದು ಸಿಎಂಗೆ ಟಾಂಗ್ ಕೊಟ್ಟಿದ್ದಾರೆ.

ಶೋಕದ ಮನೆಯಲ್ಲಿ ರಾಜಕೀಯ ಮಾಡಲ್ಲ: ನಿಮ್ಮ ಸುಪುತ್ರ, ದಿವಂಗತ ರಾಕೇಶ್ ಅವರನ್ನು ಟುಮಾರೋ ಲ್ಯಾಂಡ್ (Tomorrow Land) ಎನ್ನುವ ಅಮಲಿನ ಪಾರ್ಟಿಗೆ ನೀವೇ ಕಳಿಸಿದ್ದೀರಿ, ಅಲ್ಲಿ ಅವರ ಸಾವಿಗೆ ನೀವೇ ಕಾರಣರಾದಿರಿ ಎಂದು ಯಾರಾದರೂ ನಿಮ್ಮನ್ನು ಕೇಳಿದರೆ ನಿಮ್ಮ ಮನಸ್ಸಿಗೆ ಹೇಗಾಗಬೇಡ? ದೇವೇಗೌಡರ ಬಗ್ಗೆ ನೀವು ಕೇಳಿದ್ದು ಕೂಡ ಹಾಗೆಯೇ ಅಲ್ಲವೇ ಮಾನ್ಯ ಮುಖ್ಯ ಮಂತ್ರಿಗಳೇ... ಶೋಕದ ಮನೆಯಲ್ಲಿ ರಾಜಕೀಯ ಮಾಡುವ ಜಾಯಮಾನ ನಮ್ಮದಲ್ಲ. ದಯಮಾಡಿ ಅರ್ಥ ಮಾಡಿಕೊಳ್ಳಿ ಎಂದು ಕುಮಾರಸ್ವಾಮಿ ಕಿಡಿಕಾರಿದ್ದಾರೆ.

ಮೈಸೂರು ಡಿ ಪಾಲ್ ಕಾಲೇಜಲ್ಲಿ 92 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ



ಮೈಸೂರು, ಮೇ 24(ಎಂಕೆ)– ಮೈಸೂರಿನ ಡಿ ಪಾಲ್ ಕಾಲೇಜಿನಲ್ಲಿ ನಡೆದ 9ನೇ ಪದವಿ ಪ್ರದಾನ ಸಮಾರಂಭದಲ್ಲಿ ವಿವಿಧ ವಿಭಾಗಗಳ 92 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಡಿ ಪಾಲ್ ಮ್ಯಾನೇಜ್‌ಮೆಂಟ್‌ನ ಯೋಜನಾ ನಿರ್ದೇಶಕ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿ ನಿರ್ದೇಶಕ ಎನ್.ನಾಗರಾಜ ಸಮಾರಂಭವನ್ನು ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಈ ಸಮಾರಂಭವು ವಿದ್ಯಾರ್ಥಿಗಳ ಕಠಿಣ ಪರಿಶ್ರಮ ಮತ್ತು ಅವರ ಶೈಕ್ಷಣಿಕ ಸಾಧನೆಯನ್ನು ಪ್ರತಿಬಿಂಬಿಸಿದೆ. ಪದವಿ ಪಡೆದ ವಿದ್ಯಾರ್ಥಿಗಳ ಮುಂದಿನ ವಿದ್ಯಾಭ್ಯಾಸವೂ ಉಜ್ವಲವಾಗಿರಲಿ ಎಂದು ಹಾರೈಸಿದರು. ಕಾಲೇಜು ಪ್ರಾಂಶುಪಾಲ ಡಾ.ಬೈಜು ಆಂಟೋನಿ, ಉಪ ಪ್ರಾಂಶುಪಾಲ ಡಾ.ಜಾಯ್ ತುರುತೇಲ್, ಅಧ್ಯಯನ ಮುಖ್ಯಸ್ಥ ಡಾ.ಶಿಜೋ ಆಂಟೋನಿ, ಹಣಕಾಸು ಅಧಿಕಾರಿ ಸಂಟೋಯ್ ಕುರಿಯನ್, ಸಂಚಾಲಕಿ ರೋಚ್ ಲಿಬಿಯ ರಾಣಿ ಮತ್ತಿತರರು ಉಪಸ್ಥಿತರಿದ್ದರು.

ಡಾ.ಯತೀಂದ್ರರ ಎಂಎಲ್‌ಸಿ ಮಾಡಲು ವರುಣಾ ಮಹೇಶ್ ಒತ್ತಾಯ



ಮೈಸೂರು, ಮೇ 24– ಮಾಜಿ ಶಾಸಕ ಡಾ.ಯತೀಂದ್ರ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಆಯ್ಕೆ ಮಾಡಬೇಕು ಎಂದು ಕೆಪಿಸಿಸಿ ಮಾಜಿ ಕಾರ್ಯದರ್ಶಿ ವರುಣಾ ಮಹೇಶ್ ಒತ್ತಾಯಿಸಿದ್ದಾರೆ.

ವರುಣ ಶಾಸಕರಾಗಿ ಡಾ.ಯತೀಂದ್ರ ಅವರು ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದಾರೆ. ಜೊತೆಗೆ ವರುಣ ಮಾತ್ರವಲ್ಲದೆ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಸಂಘಟನೆಯಲ್ಲಿ ಇವರ ಪಾತ್ರ ಪ್ರಮುಖವಾಗಿದೆ. ಸದಾ ಕಾಲ ಜನರೊಂದಿಗಿದ್ದು ಅವರ ಕಷ್ಟ–ಸುಖದಲ್ಲಿ ಭಾಗಿಯಾಗುತ್ತಿದ್ದಾರೆ. ಇವರನ್ನು ವಿಧಾನಪರಿಷತ್‌ಗೆ ಆಯ್ಕೆ ಮಾಡಿದರೆ ಜನಸೇವೆಗೆ ಮತ್ತಷ್ಟು ಶಕ್ತಿ ತುಂಬಿದಂತಾಗುತ್ತದೆ. ಜೊತೆಗೆ ಪಕ್ಷ ಸಂಘಟನೆ ದೃಷ್ಟಿಯಿಂದಲೂ ಸಹಕಾರಿಯಾಗಲಿದೆ. ಹಾಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಾಗೂ ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ನಮ್ಮ ಮನವಿಯನ್ನು ಪರಿಗಣಿಸಿ, ಯತೀಂದ್ರ ಅವರನ್ನು ವಿಧಾನಪರಿಷತ್‌ಗೆ ಆಯ್ಕೆ ಮಾಡುವ ನಿಟ್ಟಿನಲ್ಲಿ ಮುಂದಾಗಬೇಕು ಎಂದು ಪ್ರಕಟಣೆಯಲ್ಲಿ ಕೋರಿದ್ದಾರೆ.


ನಾಳೆ ವಿಪ್ರ ವಕೀಲರ ಪರಿಷತ್‌ನಿಂದ ಮೈಸೂರಲ್ಲಿ ಶೋಭಾ ಯಾತ್ರೆ

ಮೈಸೂರು, ಮೇ 24(ಜಿಎ)–ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ವರ್ಧಂತಿ ಅಂಗವಾಗಿ ವಿಪ್ರ ವಕೀಲರ ಪರಿಷತ್ ವತಿಯಿಂದ ಮೇ 26ರಂದು ಬೆಳಗ್ಗೆ 10ಕ್ಕೆ ಚಾಮುಂಡಿಪುರಂ ವೃತ್ತದಿಂದ ಗಣಪತಿ ಸಚ್ಚಿದಾನಂದ ಆಶ್ರಮದವರೆಗೆ ಶೋಭಾ ಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಅಧ್ಯಕ್ಷ ಎಂ.ಎಸ್. ರವೀಂದ್ರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶೋಭಾಯಾತ್ರೆಯಲ್ಲಿ ಸುಮಾರು 500ಕ್ಕೂ ಹೆಚ್ಚು ಮಂದಿ ಪಾಲ್ಗೊಳ್ಳಲಿದ್ದಾರೆ. ಅಲ್ಲದೆ, ವೇದ ಘೋಷ ತಂಡ, ವೀರಗಾಸೆ, ನಂದಿಧ್ವಜ, ಭಜನಾ ಮಂಡಳಿಗಳ ಜೊತೆಗೆ ತೆರೆದ ಜೀಪ್ ಹಾಗೂ ಲಾರಿ, ಒಂದು ಸಾರೋಟಿನಲ್ಲಿ ಸ್ವಾಮೀಜಿಯವರ ಭಾವಚಿತ್ರಗಳ ಮೆರವಣಿಗೆ ನಡೆಯಲಿದೆ ಎಂದರು.


ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷ ಡಿ.ಸಿ. ಅನಂತಕುಮಾರ್, ಎಸ್.ಜೆ.ಮಧ್ವರಾಜ್, ಎಸ್.ಎನ್.ಪ್ರಕಾಶ್, ಸಿ.ಆರ್.ಸತ್ಯಪ್ರಕಾಶ್, ಸತ್ಯನಾರಾಯಣಉಪಸ್ಥಿತರಿದ್ದರು.

ನಿವೃತ್ತ ಐಪಿಎಸ್ ಅಧಿಕಾರಿ ಸಿ.ಚಂದ್ರಶೇಖರ್‌ರವರ 'ಕಾವೇರಿ ವಿವಾದ' ಪುಸ್ತಕ ನಾಳೆ ಬಿಡುಗಡೆ



ಮೈಸೂರು, ಮೇ 24(ಎಸ್‌ಬಿಡಿ)– ಮೈಸೂರಿನ ಅಭಿರುಚಿ ಪ್ರಕಾಶನದ ಮೂಲಕ ಪ್ರಕಟಗೊಂಡಿರುವ ನಿವೃತ್ತ ಐಪಿಎಸ್ ಅಧಿಕಾರಿ ಸಿ.ಚಂದ್ರಶೇಖರ್ ಅವರ 'ಕಾವೇರಿ ವಿವಾದ' ಒಂದು ಐತಿಹಾಸಿಕ ಹಿನ್ನೋಟ ಪುಸ್ತಕ ಮೇ 26ರಂದು ಬಿಡುಗಡೆಯಾಗಲಿದೆ.

ನಗರದ ಇಂಜಿನಿಯರುಗಳ ಸಂಸ್ಥೆ ಸಭಾಂಗಣದಲ್ಲಿ ಅಂದು ಬೆಳಗ್ಗೆ 10.30ಕ್ಕೆ ನಡೆಯಲಿರುವ ಸಮಾರಂಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕ, ಮದರಾಸು ಅಭಿವೃದ್ಧಿ ಅಧ್ಯಯನ ಸಂಸ್ಥೆ ಮಾಜಿ ನಿರ್ದೇಶಕ ಪ್ರೊ.ವಿ.ಕೆ.ನಟರಾಜ್, ಪ್ರಸಿದ್ಧ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ, ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಪಿ.ವಿ.ನಂಜರಾಜ ಅರಸು ಮತ್ತಿತರರು ಭಾಗವಹಿಸಲಿದ್ದಾರೆ.



ಶತಮಾನಗಳಿಂದ ಜೀವಂತವಾಗಿರುವ ಈ ಸಮಸ್ಯೆಗೆ ಇನ್ನೂ ಪರಿಹಾರ ವೇಕಿಲ್ಲ? ನಮ್ಮ ಸರ್ಕಾರಗಳು ಅತಿರಥ ಮಹಾರಥ ವಕೀಲರ ಮೂಲಕ ವಾದಿಸಿದ್ದರೂ ಹಿನ್ನಡೆಯಾಗಿದ್ದು ಏಕೆ? ಈವರೆಗೆ ಬಂದ ಹೆಚ್ಚಿನ ತೀರ್ಪುಗಳೆಲ್ಲ ತಮಿಳುನಾಡಿನ ಪರವೇ ಏಕೆ ಬಂದಿವೆ? ಕಾವೇರಿ ನೀರಿನ ಹಂಚಿಕೆಯಲ್ಲಿ ನಮ್ಮ ನ್ಯಾಯುವಾದ ಪಾಲೆಷ್ಟು? ಇನ್ನಿತರ ವಿಚಾರಗಳ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡಿ ಈ 'ಕಾವೇರಿ ವಿವಾದ' ಕೃತಿ ರಚಿಸಲಾಗಿದೆ. ಕೃತಿಯ ಲೇಖಕ, ನಿವೃತ್ತ ಐಜಿಪಿ ಸಿ.ಚಂದ್ರಶೇಖರ್ ಹಿಂದೆ ಮೈಸೂರು ನಗರ ಪೊಲೀಸ್ ಆಯುಕ್ತರಾಗಿ ಕಾರ್ಯ ನಿರ್ವಹಿಸಿದ್ದರು. ಕಾವೇರಿ ವಿವಾದಕ್ಕೆ ಸಂಬಂಧಿಸಿದ ವಿಶೇಷ ಘಟಕದಲ್ಲಿ ಮೂರು ದಶಕಗಳ ಹಿಂದೆ ಕೆಲಸ ಮಾಡಿದ್ದರು. ಸರ್ಕಾರಕ್ಕೆ ವಿಶೇಷ ಅಧ್ಯಯನ ವರದಿಗಳನ್ನೂ ಸಲ್ಲಿಸಿದ್ದರು. ವರ್ಗಾವಣೆಯಾದ ನಂತರವೂ ಸಮಸ್ಯೆಯ ಚಾರಿತ್ರಿಕ ಅಧ್ಯಯನ ಮುಂದುವರೆಸಿ ಪರಿಹಾರದ ಬಗ್ಗೆ ಸಮಗ್ರವಾಗಿ ವಿಶ್ಲೇಷಿಸಿದ್ದಾರೆ. ಕಾವೇರಿ ವಿವಾದ ಈಗಾಗಲೇ ಇಂಗ್ಲಿಷ್‌ನಲ್ಲಿ ಪ್ರಕಟಗೊಂಡಿದೆ.

ತರಬೇತಿ

ಮೈಸೂರು, ಮೇ24(ಬಿಎಲ್‌ಯು)– ಸಮರ್ಥನಂ ಅಂಗವಿಕಲ ಸಂಸ್ಥೆಯು ವಿಕಲಚೇತನರು ಹಾಗೂ ವಿಕಲಚೇತನ ಪೋಷಕರ ಮಕ್ಕಳಿಗೆ ಸರ್ಕಾರದ ವಿವಿಧ ಇಲಾಖೆಗಳ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯ ತರಬೇತಿ ಆಯೋಜಿಸಿದೆ.

ಕೆಎಎಸ್, ಕೆಪಿಎಸ್, ಪಿಡಿಒ, ಎಫ್‌ಡಿಎ, ಎಸ್‌ಡಿಎ, ಎಸ್‌ಎಸ್‌ಸಿ, ಆರ್‌ಆರ್‌ಬಿ ಹಾಗೂ ಬ್ಯಾಂಕಿಂಗ್ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲಾಗುವುದು.

7 ರಿಂದ 8 ತಿಂಗಳ ಕಾಲಾವಧಿಯ ತರಬೇತಿಯಲ್ಲಿ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ನೋಟ್ಸ್ ನೀಡಲಾಗುವುದು. ಪ್ರಿಲಿಮ್ಸ್ ಮತ್ತು ಮೈನ್ಸ್ ಪಠ್ಯಕ್ರಮದ ಬಗ್ಗೆ ಸಮಗ್ರ ಮಾಹಿತಿ ನೀಡಲಿದ್ದು, ವ್ಯಕ್ತಿಗತ ಮಾರ್ಗದರ್ಶನ ಕೂಡ ನೀಡಲಾಗುವುದು. ತರಬೇತಿ ಸಮಯದಲ್ಲಿ ಉಚಿತ ಊಟ ಮತ್ತು ವಸತಿ ಸೌಲಭ್ಯ ಕಲ್ಪಿಸಲಾಗುವುದು. ಮೈಸೂರಿನಲ್ಲಿ ತರಬೇತಿ ನೀಡಲಿದ್ದು, ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ 6364867818 ಸಂಪರ್ಕಿಸಬಹುದು.

ರಾಜಸ್ಥಾನ್ ವಿರುದ್ಧ ಗೆಲುವು: ಫೈನಲ್‌ಗೆ ಹೈದರಾಬಾದ್

ಚೆನ್ನೈ, ಮೇ 24– ಹೆನ್ರಿಚ್ ಕ್ಲಾಸೆನ್ ಅವರ ಅರ್ಧಶತಕ ಹಾಗೂ ಶಹಬಾಜ್ ಅಹಮದ್, ಅಭಿಷೇಕ್ ಶರ್ಮಾ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್, ರಾಜಸ್ಥಾನ್ ರಾಯಲ್ಸ್ ವಿರುದ್ಧ 36 ರನ್‌ಗಳ ಜಯ ಸಾಧಿಸಿದೆ. ಆ ಮೂಲಕ ಎಸ್‌ಆರ್‌ಹೆಚ್ 3ನೇ ಬಾರಿಗೆ ಐಪಿಎಲ್ ಫೈನಲ್ ಪ್ರವೇಶಿಸಿದ್ದು, ಮೇ 26ರ ಭಾನುವಾರ ಚೆನ್ನೈನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ನಡೆಯುವ ಫೈನಲ್ ಪಂದ್ಯದಲ್ಲಿ ಕೆಕೆಆರ್ ವಿರುದ್ಧ ಪ್ರಶಸ್ತಿಗಾಗಿ ಕಾದಾಟ ನಡೆಸಲಿದೆ.

ಇಲ್ಲಿನ ಎಂ.ಎ. ಚಿದಂಬರಂ ಸ್ಟೇಡಿಯಂನಲ್ಲಿ ನಡೆದ ಕ್ವಾಲಿಫೈಯರ್–2 ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಸನ್‌ರೈಸರ್ಸ್ ಹೈದರಾಬಾದ್ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 175ರನ್ ಬಾರಿಸಿತು. ಈ ಮೊತ್ತವನ್ನು ಬೆನ್ನಟ್ಟಿದ ರಾಜಸ್ಥಾನ ಉತ್ತಮ ಆರಂಭ ಪಡೆದರೂ ಕೂಡ ಆ ಬಳಿಕ ನಾಟಕೀಯ ಕುಸಿತ ಕಂಡು 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 139 ರನ್ ಗಳಿಸಲಷ್ಟೇ ಶಕ್ತವಾಗಿ ಸೋಲು ಅನುಭವಿಸಿತು.



ರಾಜಸ್ಥಾನ್ ಪರ ಇನ್ನಿಂಗ್ಸ್ ಆರಂಬಿಸಿದ ಟಾಮ್ ಕೊಹ್ಲರ್–ಕ್ಯಾಡ್ಮೋರ್ ಕೇವಲ 10 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ನಾಯಕ ಸಂಜು ಸ್ಯಾಮ್ಸನ್ ಕೂಡ 10 ರನ್ ಗಳಿಸಿದರೆ, ರಿಯಾನ್ ಪರಾಗ್ 6 ರನ್ ಗಳಿಸಿ ಔಟಾದರು. ಮತ್ತೊಂದೆಡೆ ಬಿರುಸಿನ ಬ್ಯಾಟಿಂಗ್ ಮಾಡಿದ ಯಶಸ್ವಿ ಜೈಸ್ವಾಲ್ 21 ಎಸೆತಗಳಲ್ಲಿ 1 ಬೌಂಡರಿ, 3 ಸಿಕ್ಸರ್ ಒಳಗೊಂಡ 42 ರನ್ ಗಳಿಸಿ ಔಟಾದರು. ನಂತರ ಬಂದ ಧೃವ್ ಜುರೇಲ್ 35 ಎಸೆತಗಳಿಂದ 7 ಬೌಂಡರಿ, 2 ಸಿಕ್ಸರ್ ಒಳಗೊಂಡ 56 ರನ್ ಗಳಿಸಿದರಾದರೂ ತಂಡಕ್ಕೆ ಜಯ ತಂದು ಕೊಡಲು ಸಾಧ್ಯವಾಗಲಿಲ್ಲ. ಹೈದರಾಬಾದ್ ಪರ ಶಹಬಾಜ್ ಅಹಮದ್ 3, ಅಭಿಷೇಕ್ ಶರ್ಮಾ 2, ಟಿ.ನಟರಾಜನ್, ಪ್ಯಾಟ್ ಕಮ್ಮಿನ್ಸ್ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಸನ್‌ರೈಸರ್ಸ್ ಹೈದರಾಬಾದ್ ಆರಂಭ ಉತ್ತಮವಾಗಿರಲಿಲ್ಲ. 12 ರನ್ ಗಳಿಸಿ ಅಭಿಷೇಕ್ ಶರ್ಮಾ ಬಹುಬೇಗ ನಿರ್ಗಮಿಸಿದರು. ಈ ವೇಳೆ 2ನೇ ವಿಕೆಟ್‌ಗೆ ಟ್ರಾವಿಸ್ ಹೆಡ್ ಹಾಗೂ ರಾಹುಲ್ ತ್ರಿಪಾಠಿ 42 ರನ್‌ಗಳ ಜತೆಯಾಟವಾಡಿದರು. 15 ಎಸೆತಗಳಲ್ಲಿ 5 ಬೌಂಡರಿ ಹಾಗೂ 2 ಸಿಕ್ಸರ್ ಸಹಿತ 37 ರನ್ ಸಿಡಿಸಿದ ತ್ರಿಪಾಠಿ ವಿಕೆಟ್ ಒಪ್ಪಿಸಿದರು. ಇದೇ ಓವರ್‌ನಲ್ಲಿ ಏಯ್ಡನ್ ಮಾರ್ಕ್ರಮ್ ಒಂದು ರನ್ ಗಳಿಸಿ ಚಹಲ್‌ಗೆ ಕ್ಯಾಚಿತ್ತು ಪೆವಿಲಿಯನ್ ಸೇರಿದರು. ಮತ್ತೊಂದು ತುದಿಯಲ್ಲಿ ಎಚ್ಚರಿಕೆಯ ಬ್ಯಾಟಿಂಗ್ ನಡೆಸಿದ ಟ್ರಾವಿಸ್ ಹೆಡ್ 34 ರನ್ ಗಳಿಸಿ ಸಂದೀಪ್ ಶರ್ಮಾಗೆ ವಿಕೆಟ್ ಒಪ್ಪಿಸಿದರು.

ಒಂದು ಹಂತದಲ್ಲಿ 120 ರನ್‌ಗೆ 6 ವಿಕೆಟ್ ಕಳೆದುಕೊಂಡು ಅಲ್ಪಮೊತ್ತಕ್ಕೆ ಕುಸಿಯುವ ಭೀತಿಗೆ ಸಿಲುಕಿದ್ದ ತಂಡಕ್ಕೆ ಹೆನ್ರಿಚ್ ಕ್ಲಾಸೆನ್ ಆಸರೆಯಾದರು. ಆಕರ್ಷಕ ಬ್ಯಾಟಿಂಗ್ ನಡೆಸಿದ ಕ್ಲಾಸೆನ್ 34 ಎಸೆತಗಳಲ್ಲಿ 4 ಸಿಕ್ಸರ್ ಒಳಗೊಂಡ 50 ರನ್ ಬಾರಿಸಿ ಸಂದೀಪ್ ಶರ್ಮಾ ಬೌಲಿಂಗ್‌ನಲ್ಲಿ ಕ್ಲೀನ್ ಬೌಲ್ಡ್ ಆಗಿ ಪೆವಿಲಿಯನ್ ಸೇರಿದರು. ಇನ್ನು ಕ್ಲಾಸೆನ್‌ಗೆ ಉತ್ತಮ ಸಾಥ್ ನೀಡಿದ ಇಂಪ್ಯಾಕ್ಟ್ ಆಟಗಾರ ಶಾಹಬಾಜ್ ಅಹಮದ್ 18 ಎಸೆತಗಳಲ್ಲಿ 18 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ರಾಜಸ್ಥಾನ ಪರ ಆವೇಶ್ ಖಾನ್, ಟ್ರೆಂಟ್ ಬೌಲ್ಟ್ ತಲಾ 3, ಸಂದೀಪ್ ಶರ್ಮಾ 2 ವಿಕೆಟ್ ಪಡೆದರು. ಶಾಹಬಾಜ್ ಅಹಮದ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ನಿಧನ

ಹೆಚ್.ಎನ್.ಹರೀಶ್‌ರಾಜೇ ಅರಸ್



ಮೈಸೂರು, ಮೇ 24– ಮೈಸೂರಿನ ಕುವೆಂಪುನಗರ, ಮೊದಲನೇ ಹಂತ, 4ನೇ ಕ್ರಾಸ್ ನಿವಾಸಿ ಹೆಚ್.ಎನ್.ಹರೀಶ್‌ರಾಜೇ ಅರಸ್(53) ಅವರು ಅನಾರೋಗ್ಯದಿಂದ ಶುಕ್ರವಾರ ಸಂಜೆ ನಿಧನರಾದರು.

ಇವರು ಪತ್ನಿ, ರೇಷ್ಮೆ ಇಲಾಖೆ ಉದ್ಯೋಗಿ ದೀಪ್ತಿ ಅರಸ್, ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟ ತಪ್ಪಲಿನಲ್ಲಿರುವ ಅರಸು ಜನಾಂಗದವರ ರುದ್ರಭೂಮಿಯಲ್ಲಿ ಶನಿವಾರ ಮಧ್ಯಾಹ್ನ ಅಂತ್ಯ ಸಂಸ್ಕಾರ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀರಂಗಪಟ್ಟಣದಲ್ಲಿ ಕಲುಷಿತ ನೀರು ಸರಬರಾಜು, ಜನರ ಆತಂಕ

ಕಪ್ಪು, ದುರ್ವಾಸನೆ ಬೀರುವ ನೀರು ಕುಡಿಯುತ್ತಿರುವ ಪಟ್ಟಣದ ಜನರು

ಮೈಸೂರು ದುರಂತ ಮರೆತು ಅಧಿಕಾರಿಗಳ ಬೇಜವಬ್ದಾರಿ ವರ್ತನೆ





ಕಾವೇರಿ ನದಿಗೆ ಮೈಸೂರಿನಿಂದ ಹರಿದು ಬರುತ್ತಿರುವ ಕಲುಷಿತ ನೀರು. ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್ ಅವರಿಂದ ಸ್ಥಳ ಪರಿಶೀಲನೆ.

ಶ್ರೀರಂಗಪಟ್ಟಣ, ಮೇ 24– ಮೈಸೂರಲ್ಲಿ ಕಲುಷಿತ ನೀರು ಸೇವಿಸಿ ಓರ್ವ ಸಾವನ್ನಪ್ಪಿ, ಹಲವರು ಅಸ್ವಸ್ಥಗೊಂಡಿರುವ ಘಟನೆ ಮಾಸುವ ಮುನ್ನವೇ ಶ್ರೀರಂಗಪಟ್ಟಣದಲ್ಲಿ ಕುಷಿತ ನೀರನ್ನು ಜನರಿಗೆ ಕುಡಿಯಲು ಸರಬರಾಜು ಮಾಡಲಾಗುತ್ತಿದೆ. ದುರ್ವಾಸನೆ ಸೇರಿದಂತೆ ಕಪ್ಪು ಬಣ್ಣದಿಂದ ಕೂಡಿದ ಕಲುಷಿತಗೊಂಡಿರುವ ಕಾವೇರಿ ನದಿ ನೀರನ್ನೇ ಸ್ಥಳೀಯ ಪುರಸಭೆ ಅಧಿಕಾರಿಗಳು ಪಟ್ಟಣದ ಜನರಿಗೆ ಕುಡಿಯಲು ಸರಬರಾಜು ಮಾಡುತ್ತಿದ್ದು. ಈ ನೀರನ್ನೇ ಕುಡಿದು ಜನರು ಬದುಕುವ ಪರಿಸ್ಥಿತಿ ನಿರ್ಮಾಣವಾಗಿದೆ.

ಮೈಸೂರು ತಾಲೂಕು ಕೆ.ಸಾಲುಂಡಿಯಲ್ಲಿ ಕಲುಷಿತ ನೀರು ಸೇವಿಸಿ ಯುವಕನೋರ್ವ ಸಾವನ್ನಪ್ಪಿ, ಹಲವರು ಅಸ್ವಸ್ಥಗೊಂಡರೂ ಇಲ್ಲಿನ ಅಧಿಕಾರಿಗಳು ತಲೆ ಕೆಡಿಸಿಕೊಳ್ಳದೆ ಈ ಕಲುಷಿತ ನೀರು ಪೂರೈಕೆ ಮಾಡುತ್ತಿರುವುದು ವಿಪರ್ಯಾಸದ ಸಂಗತಿ.

ಮೈಸೂರಿನಿಂದ ನದಿಯ ಕೆಳಭಾಗಕ್ಕೆ ಹರಿದು ಬರುವ ಕೊಳಚೆ ನೀರು, ಬಣ್ಣದ ಕಾರ್ಖಾನೆ ಹಾಗೂ ಕೈಗಾರಿಕಾ ಪ್ರದೇಶಗಳ ಕಲುಷಿತ ರಾಸಾಯನಿಕ ಮಿಶ್ರಿತ ನೀರು ನಾಲೆಯಂತೆಯೇ ನೊರೆ ತುಂಬಿ ಹರಿದು ಕಾವೇರಿ ನದಿ ಸೇರುತ್ತಿದೆ. ಇದೇ ನೀರನ್ನು ಪಟ್ಟಣ ಜನರಿಗೆ ಕುಡಿಯುವ ಸಲುವಾಗಿ ಪಂಪ್ ಮೂಲಕ ಸರಬರಾಜು ಮಾಡಲಾಗುತ್ತಿದೆ. ಇದರಿಂದ ಪಟ್ಟಣದ ಜನರಿಗೆ ರೋಗ ರುಜಿನಗಳು ಹೆಚ್ಚಾಗುವ ಸಾಧ್ಯತೆ ಇದೆ. ಪುರಸಭೆ ಅಧಿಕಾರಿಗಳು ಹಾಗೂ ಸ್ಥಳೀಯ ಜನಪ್ರತಿನಿಧಿಗಳ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪಟ್ಟಣದ ಸುತ್ತಲೂ ಹರಿಯುವ ಕಾವೇರಿ ಪರಿಶುದ್ಧವಾಗಿದ್ದರೂ ಮೈಸೂರಿನ ಕೆಸರೆ, ಕೆ.ಆರ್.ಮಿಲ್, ನಗುವನಹಳ್ಳಿ ಗ್ರಾಮದ ಕೊಲ್ಲಿ ಹಳ್ಳದ ಮೂಲಕ ಕಲುಷಿತ ನೀರು ಹರಿದು ಬಂದು ಚಂದಗಾಲು ಪಂಪ್ ಹೌಸ್ ಬಳಿ ಕಾವೇರಿ ನದಿ ನೀರಿಗೆ ಮಿಶ್ರಿತವಾಗುತ್ತಿದೆ. ಪಟ್ಟಣ ಹಾಗೂ ಗಂಜಾಂ ನಿವಾಸಿಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ನದಿಯಲ್ಲಿ ಬಾವಿ ನಿರ್ಮಿಸಿ ಪಂಪ್ ಹೌಸ್‌ನ ಜಾಕ್ವೆಲ್ ಮೂಲಕ ನೀರನ್ನು ನೇರವಾಗಿ ಪಂಪ್ ಮೂಲಕ ಪಟ್ಟಣ ಹಾಗೂ ಗಂಜಾಂನಲ್ಲಿರುವ ನೀರು ಸರಬರಾಜು ಕೇಂದ್ರಗಳಿಗೆ ಸರಬರಾಜು ಮಾಡಲಾಗುತ್ತಿದೆ. ಇದೇ ನೀರನ್ನೆ ಪಟ್ಟಣ ಪುರಸಭೆ ವತಿಯಿಂದ ಪ್ರತಿ ದಿನ ಪಟ್ಟಣದ ಜನರಿಗೆ ಕುಡಿಯಲು ಸರಬರಾಜು ಮಾಡಲಾಗುತ್ತಿದೆ.

ಕಾಣದ ಕಲುಷಿತ ನೀರು: ನದಿಯಲ್ಲಿ ನೀರು ಹೆಚ್ಚಾಗಿ ಹರಿಯುತ್ತಿದ್ದ ವೇಳೆ ಕಲುಷಿತ ನೀರು ನದಿಗೆ ಸೇರುತ್ತಿದ್ದುದು ಯಾರಿಗೂ ಕಾಣುತ್ತಿರಲಿಲ್ಲ. ಇದೀಗ ಬೇಸಿಗೆಯಿಂದಾಗಿ ನದಿಯಲ್ಲಿ ನೀರು ಇಳಿಮುಖ ವಾಗಿರುವುದರಿಂದ ಕೈಗಾರಿಕಾ ಪ್ರದೇಶದ ರಾಸಾಯನಿಕ ಮಿಶ್ರಿತ ಕಲುಷಿತವಾದ ನೀರು ಕಾವೇರಿ ನದಿಯಲ್ಲಿ ಸೇರ್ಪಡೆಗೊಳ್ಳುತ್ತಿ ರುವುದು ಸ್ಪಷ್ಟವಾಗಿ ಗೊತ್ತಾಗುತ್ತಿದೆ.

ಸ್ಥಳೀಯ ಅಧಿಕಾರಿಗಳ ವಿಫಲ: ಮೈಸೂರು ಭಾಗದಿಂದ ಹರಿದು ಬರುವ ಕಲುಷಿತ ನೀರನ್ನು ಶುದ್ಧೀಕರಿಸಿ ನೀರು ಸರಬರಾಜು ಮಾಡಬೇಕಾದ ಪುರಸಭೆ ಅಧಿಕಾರಿಗಳ ಬೇಜವಾಬ್ದಾರಿ ಕಾರ್ಯವೈಖರಿ ಎದ್ದು ಕಾಣುತ್ತಿದೆ. ಈ ನೀರನ್ನೇ ಗಂಜಾಂನ ಪಂಪ್ ಹೌಸ್‌ನಲ್ಲಿ ಕೇವಲ ಕ್ಲೋರಿನ್ ಹಾಕಿ ಕುಡಿಯಲು ಯೋಗ್ಯವಲ್ಲದ ನೀರನ್ನೇ ನೇರವಾಗಿ ಸರಬರಾಜು ಮಾಡಲಾಗುತ್ತಿದೆ. ಕಳೆದ ಮೂರು ದಿನಗಳಿಂದ ಮನೆಯಲ್ಲಿ ಶೇಖರಣೆಗೊಂಡ ನೀರು ಕಪ್ಪು ಬಣ್ಣಕ್ಕೆ ತಿರುಗಿ, ದುರ್ವಾಸನೆ ಬರುತ್ತಿದುದ್ದರಿಂದ ಜನರಿಗೆ ಇದು ಕಲುಷಿತ ನೀರು ಎಂದು ಮನವರಿಕೆಯಾಗಿದೆ.

ನಂತರ ಸ್ಥಳೀಯರು ಪುರಸಭೆ ಅಧಿಕಾರಿಗಳಿಗೆ ದೂರಿದ್ದಾರೆ. ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಸರಬರಾಜು ಮಾಡುವ ನೀರನ್ನು ಎರಡು ದಿನಗಳಿಂದ ಸ್ಥಗಿತಗೊಳಿ ಸಿದ್ದಾರೆ. ಪಟ್ಟಣದ ಸುತ್ತಲೂ ಕಾವೇರಿ ನದಿ ನೀರು ಹರಿಯುತ್ತಿದ್ದರು ಪಟ್ಟಣ ಹಾಗೂ ಗಂಜಾಂ ನಾಗರೀಕರು ಕುಡಿಯಲು ನೀರಿಲ್ಲದೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಮಂಡ್ಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶೇಕ್ ತನ್ವೀರ್ ಆಸಿಫ್, ಕಾವೇರಿ ನೀರಾವರಿ ನಿಗಮದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕಿಶೋರ್, ಮಂಡ್ಯದ ಕನನೀಸ ಮತ್ತು ಒಳಚರಂಡಿ ಮಂಡಳಿ ಅಧಿಕಾರಿ ಗಳು, ಶ್ರೀರಂಗಪಟ್ಟಣ ತಹಶೀಲ್ದಾರ್ ಪರುಶುರಾಮ್, ಸ್ಥಳೀಯ ಪುರಸಭೆ ಮುಖ್ಯಾಧಿಕಾರಿ ಎಂ.ರಾಜಣ್ಣ ಸೇರಿದಂತೆ ಇತರರು ಜೊತೆಯಲ್ಲಿದ್ದರು.

ಜಿಲ್ಲಾಧಿಕಾರಿಗಳ ಭೇಟಿ...

ವಿಷಯ ತಿಳಿದ ಜಿಲ್ಲಾಧಿಕಾರಿ ಡಾ.ಕುಮಾರ್ ಸೇರಿದಂತೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ನದಿಗೆ ಕಲುಷಿತ ನೀರು ಸೇರದಂತೆ ತಡೆಯುವಂತೆ ಮೈಸೂರು ಜಿಲ್ಲಾಧಿಕಾರಿಗಳು, ಮೈಸೂರು ಮಹಾನಗರಪಾಲಿಕೆ ಅಧಿಕಾರಿಗಳಿಗೆ ಪತ್ರ ಬರೆಯುವಂತೆ ಮಂಡ್ಯ ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚನೆ ನೀಡಿದರು. ಅಲ್ಲದೆ ಮೈಸೂರಿನಿಂದ ಬರುವ ಕೊಳಚೆ ನೀರು ಕಾವೇರಿ ನದಿಯಲ್ಲಿ ಮಿಶ್ರಿತವಾಗದಂತೆ ತಡೆಗೋಡೆಯನ್ನು ನಿರ್ಮಿಸಲು ಶೀಘ್ರ ಕಾಮಗಾರಿಯನ್ನು ಪ್ರಾರಂಭಿಸುವಂತೆ ನೀರು ಮತ್ತು ಒಳಚರಂಡಿ ಮಂಡಳಿಯ ಕಾರ್ಯಪಾಲಕ ಎಂಜಿನಿಯರ್ ಅವರಿಗೆ ಸ್ಥಳದಲ್ಲೇ ಸೂಚನೆ ನೀಡಿದರು. ಜೊತೆಗೆ ಈಗಾಗಲೆ ಹಣ ಸಹ ಬಿಡುಗಡೆಯಾಗಿರುವ ಕುರಿತು ಮಾಹಿತಿ ನೀಡಿದರು.

ಹೊಟ್ಟೆನೋವು ತಾಳಲಾರದೆ ಗೃಹಿಣಿ ಆತ್ಮಹತ್ಯೆ

ಕಿಕ್ಕೇರಿ: ಸಮೀಪದ ಹೆಗ್ಗಡಹಳ್ಳಿ ಗ್ರಾಮದ ಗೃಹಿಣಿಯೊಬ್ಬರು ಹೊಟ್ಟೆನೋವು ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣ ಗುರುವಾರ ರಾತ್ರಿ ಸಂಭವಿಸಿದೆ.

ಮೃತ ಮಹಿಳೆ ಗ್ರಾಮದ ಪ್ರಸನ್ನ ಅವರ ಪತ್ನಿ ಅಶ್ವಿನಿ(25). ಮೃತಳಿಗೆ ಪತಿ, ಪುತ್ರ ಇದ್ದಾರೆ. ಒಂದು ವರ್ಷದಿಂದ ಈಕೆಗೆ ಹೊಟ್ಟೆನೋವು ಆಗಿಂದಾಗ್ಗೆ ಕಾಣಿಸಿಕೊಳ್ಳುತ್ತಿತ್ತು ಎನ್ನಲಾಗಿದೆ. ಸಾಕಷ್ಟು ಕಡೆ ಚಿಕಿತ್ಸೆ ಪಡೆದರು ಗುಣಮುಖವಾಗದೆ ಸದಾ ಖಿನ್ನತೆಗೊಳಗಾಗಿದ್ದಳು. ಹೊಟ್ಟೆನೋವು ಬಾಧೆಗೆ ಬೇಸತ್ತು ಗುರುವಾರ ಸಂಜೆ ತಮ್ಮ ಮನೆಯಲ್ಲಿ ನೇಣು ಬಿಗಿದುಕೊಂಡು ಸಾವಿಗೆ ಯತ್ನಿಸಿದ್ದಾಳೆ. ಇದನ್ನು ನೋಡಿ ಮನೆಯಲ್ಲಿದ್ದ ಈಕೆ ಪತಿ ಅಸ್ವಸ್ಥೆಯಾಗಿದ್ದ ಈಕೆಯನ್ನು ಕುಣಿಕೆಯಿಂದ ಬಿಡಿಸಿ ತುರ್ತು ಚಿಕಿತ್ಸೆಗೆ ಕೆ.ಆರ್.ಪೇಟೆ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಿದ್ದಾರೆ. ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾಳೆ.

ಮೃತಳ ತಾಯಿ ಬೊಮ್ಮೇಗೌಡನ ಕೊಪ್ಪಲು ಗ್ರಾಮದ ಗೌರಮ್ಮ ಕಿಕ್ಕೇರಿ ಪೊಲೀಸರಿಗೆ ದೂರು ನೀಡಿದ್ದಾರೆ. ಕಿಕ್ಕೇರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಸಂಬಂಧಿಕರ ಬೆದರಿಕೆಗೆ ಮನನೊಂದು ರೈತ ನೇಣಿಗೆ ಶರಣು

ಕಿಕ್ಕೇರಿ, ಮೇ 24– ಆಸ್ತಿ ವಿಚಾರಕ್ಕಾಗಿ ಸಂಬಂಧಿಕರ ಬೆದರಿಕೆಗೆ ಮನನೊಂದ ರೈತನೊಬ್ಬ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕಿಕ್ಕೇರಿ ಹೋಬಳಿಯ ಕೋಡಿಮಾರನಹಳ್ಳಿ ಗ್ರಾಮದಲ್ಲಿ ಗುರುವಾರ ರಾತ್ರಿ ಸಂಭವಿಸಿದೆ.

ಗ್ರಾಮದ ಪುಟ್ಟೇಗೌಡರ ಮಗ ಕಾಳೇಗೌಡ(65) ಮೃತ ದುರ್ದೈವಿ. ಜಮೀನು ವಿಚಾರಕ್ಕೆ ವಾರದ ಹಿಂದೆ ಸಂಬಂಧಿಕರ ನಡುವೆ ಗಲಾಟೆ ಆಗಿತ್ತು ಈ ವಿಚಾರ ಕುರಿತು ಕಿಕ್ಕೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಗುರುವಾರ ಸಂಜೆ ಮೃತ ಕಾಳೇಗೌಡ ತನ್ನ ಜಮೀನುವಿನಿಂದ ನೀರು ತರಲು ಹೋಗಿದ್ದಾಗ ಇದೇ ಗ್ರಾಮದ ಈತನ ಸಂಬಂಧಿಗಳಾದ ಜಗದೀಶ್, ರಂಗೇಗೌಡ, ಶಿವಮ್ಮ, ಪೂರ್ಣಿಮಾ, ಪ್ರೀತಂ ಅವರು ಮಚ್ಚು, ದೊಣ್ಣೆ ಕಲ್ಲಿನಿಂದ ಹಲ್ಲೆ ಮಾಡುವುದಾಗಿ ಬೆದರಿಕೆ ಹಾಕಿ, ಇಷ್ಟೆಲ್ಲ ಗಲಾಟೆಯಾದರೂ ನಿನಗೆ ಭಯವಿಲ್ಲವೇ. ನೀನು ಆತ್ಮಹತ್ಯೆ ಮಾಡಿಕೊಂಡು ಸಾಯಿ ಎಂದು ಪ್ರಚೋದಿಸಿದ್ದಾರೆ ಎನ್ನಲಾಗಿದೆ.

ಪುಟ್ಟೇಗೌಡ ರಾತ್ರಿ ಚಿಂತೆ ಮಾಡಿ ಖಿನ್ನತೆಗೊಳಗಾಗಿ ಮನನೊಂದು ತಮ್ಮ ಮನೆಯ ಕೊಟ್ಟಿಗೆಯಲ್ಲಿ ನೇಣು ಬಿಗಿದುಕೊಂಡು ಸಾವಿಗೀಡಾಗಿದ್ದಾನೆ. ಮೃತ ವ್ಯಕ್ತಿ ಪುತ್ರಿ ಕೆ.ಕೆ.ರೂಪಾ ಕಿಕ್ಕೇರಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಆರೋಪಿ ಜಗದೀಶ್, ಪೂರ್ಣಿಮಾ ಅವರನ್ನು ಇನ್ಸ್‌ಪೆಕ್ಟರ್ ರೇವತಿ ಸಿಬ್ಬಂದಿಗಳೊಂದಿಗೆ ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ: ಸೂಪರ್ ಮಾರ್ಕೆಟ್ ಭಸ್ಮ

40 ಲಕ್ಷ ರೂ. ನಷ್ಟ ಎಂದು ಪೊಲೀಸರಿಗೆ ದೂರು



ಪಾಂಡವಪುರ:ಮೇ:24– ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಪಟ್ಟಣದ ರೈನ್‌ಬೋ ಸೂಪರ್ ಮಾರ್ಕೆಟ್ ಸಂಪೂರ್ಣವಾಗಿ ಸುಟ್ಟು ಭಸ್ಮವಾಗಿ ಲಕ್ಷಾಂತರ ರೂ. ನಷ್ಟವಾಗಿರುವ ಘಟನೆ ಶುಕ್ರವಾರ ಮುಂಜಾನೆ ನಡೆದಿದೆ. ತಾಲೂಕಿನ ಬನಘಟ್ಟ ನಿವಾಸಿ ಧನರಾಜ್ ಎಂಬುವರಿಗೆ ಸೇರಿದ ಸೂಪರ್ ಮಾರ್ಕೆಟ್. ಶುಕ್ರವಾರ ಮುಂಜಾನೆ ಕ್ಯಾಶ್ ಕೌಂಟರ್ ಬಳಿ ಫ್ರಿಜ್‌ನಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಉಂಟಾಗಿ ಕ್ಯಾಶ್ ಕೌಂಟರ್‌ಗೆ ಬೆಂಕಿ ಹೊತ್ತಿಕೊಂಡಿದೆ. ಬಳಿಕ ಸಂಪೂರ್ಣವಾಗಿ ಸೂಪರ್ ಮಾರ್ಕೆಟ್‌ಗೆ ಬೆಂಕಿ ತಗುಲಿ ಇಡೀ ಸೂಪರ್ ಮಾರ್ಕೆಟ್ ಸುಟ್ಟು ಕರಕಲಾಗಿದೆ. ಸೂಪರ್ ಮಾರ್ಕೆಟ್‌ಗೆ ಬೆಂಕಿ ತಗುಲಿರುವುದನ್ನು ಕಂಡು ಸ್ಥಳೀಯರು ಅಗ್ನಿಶಾಮಕ ದಳ ಹಾಗೂ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಿ ಮಿಸಿದ ಅಗ್ನಿ ಶಾಮಕ ದಳದ ಸಿಬ್ಬಂದಿಗಳು ಬೆಂಕಿಯನ್ನು ನಂಧಿಸುವಲ್ಲಿ ಯಶಸ್ವಿಯಾದರು. ಅಷ್ಟರಲ್ಲಿ ಬಹುತೇಕ ಅಂಗಡಿ ಸುಟ್ಟು ಕರಕಲಾಗಿತ್ತು. ಘಟನೆಯಿಂದ ಕ್ಯಾಶ್ ಕೌಂಟರ್‌ನಲ್ಲಿದ್ದ 2 ಲಕ್ಷ ನಗದು ಹಣ ಹಾಗೂ ದಿನಸಿ ಸಾಮಾಗ್ರಿಗಳು ಬೆಂಕಿಗೆ ಆಹುತಿಯಾಗಿದ್ದು ಸುಮಾರು 40 ಲಕ್ಷಕ್ಕೂ ಅಧಿಕ ನಷ್ಟ ಉಂಟಾಗಿದೆ ಎಂದು ಅಂಗಡಿ ಮಾಲೀಕ ಧನರಾಜ್ ಅವರು ಪಾಂಡವಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ತೆಂಡೇಕೆರೆ ಗ್ರಾಮದಲ್ಲಿ ದಲಿತ ಕುಟುಂಬಕ್ಕೆ ಸಾಮಾಜಿಕ ಬಹಿಷ್ಕಾರ



ಕೆ.ಆರ್.ಪೇಟೆ,ಮೇ.24: ತಾಲೂಕಿನ ತೆಂಡೇಕೆರೆ ಗ್ರಾಮದಲ್ಲಿ ದಲಿತ ಕುಟುಂಬವೊಂದಕ್ಕೆ ಸವರ್ಣೀಯರು ಸಾಮಾಜಿಕ ಬಹಿಷ್ಕಾರ ಹಾಕಿದ್ದು, ಬದುಕಲು ಅಗತ್ಯವಾಗಿ ಬೇಕಾದ ಕುಡಿಯುವ ನೀರು, ಬೀದಿ ದೀಪ, ರಸ್ತೆ ವ್ಯವಸ್ಥೆಯನ್ನು ಬಂದ್ ಮಾಡಿದ್ದು, ಗ್ರಾಮದ ಕೆಲವು ಜನರ ಒತ್ತಡದಿಂದ ಮೂಲ ಸೌಕರ್ಯಗಳನ್ನು ಒದಗಿಸದೇ ಅಮಾನವೀಯವಾಗಿ ನಡೆದುಕೊಳ್ಳುತ್ತಿರುವ ತೆಂಡೇಕೆರೆ ಗ್ರಾಮ ಪಂಚಾಯಿತಿ ಅಧಿಕಾರಿಗಳ ವಿರುದ್ಧ ಮೇಲಧಿಕಾರಿಗಳು ಹಾಗೂ ರಾಜ್ಯ ಸರ್ಕಾರವು ಸೂಕ್ತ ಕ್ರಮ ಕೈಗೊಂಡು ನಮಗೆ ಬದುಕಲು ಅಗತ್ಯ ಸೌಕರ್ಯಗಳನ್ನು ಒದಗಿಸಿಕೊಡಬೇಕು ಎಂದು ತೆಂಡೇಕೆರೆ ಗ್ರಾಮದ ದಲಿತ ಕುಟುಂಬವೊಂದರ ಸದಸ್ಯರು ರಾಜ್ಯ ಎಸ್.ಸಿ–ಎಸ್.ಟಿ ಆಯೋಗಕ್ಕೆ ಪತ್ರ ಬರೆದು ಮನವಿ ಮಾಡಿದ್ದಾರೆ.

ತಾಲೂಕಿನ ತೆಂಡೇಕೆರೆ ಗ್ರಾಮದಲ್ಲಿ ತಮಗಾಗುತ್ತಿರುವ ಸಮಸ್ಯೆಗಳು ಹಾಗೂ ನೋವನ್ನು ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗಕ್ಕೆ ಬರೆದಿರುವ ಪತ್ರವನ್ನು ಪತ್ರಕರ್ತರಿಗೆ ಬಿಡುಗಡೆ ಮಾಡಿ ಮಾತನಾಡಿದ ತೆಂಡೇಕೆರೆ ಗ್ರಾಮದ ಸಿ.ರಾಮ ಸ್ವಾಮಿ, ಭಾರತಿ ರಾಮಸ್ವಾಮಿ ದಂಪತಿಗಳ ಮಕ್ಕಳಾದ ಆರ್.ಅಮುದವೇಣಿ ಮತ್ತು ಆರ್.ಪದ್ಮಾವತಿ ಅವರುಗಳು ತೆಂಡೇಕೆರೆ ಗ್ರಾಮದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ನಾವು ನಮಗೆ ಸೇರಿದ ಸ್ವಂತ ನಿವೇಶನದಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದೇವೆ. ಆದರೆ ಅಕ್ಕಪಕ್ಕದವರು ನಮ್ಮ ಏಳಿಗೆಯನ್ನು ಸಹಿಸದೇ, ಗ್ರಾಮದ ಮಧ್ಯೆ ಒಳ್ಳೆಯ ಜಾಗದಲ್ಲಿ ದಲಿತರು ಮನೆ ಕಟ್ಟಿಕೊಂಡಿದ್ದಾರಲ್ಲ ಎಂಬ ಕಾರಣಕ್ಕಾಗಿ ವಿನಾಕಾರಣ ನಮಗೆ ತೊಂದರೆ ಕೊಡುತ್ತಿದ್ದಾರೆ ಎಂದರು.

ನಮ್ಮ ಮನೆಗೆ ಹೋಗಲು ಇರುವ ಸರ್ಕಾರಿ ರಸ್ತೆಗೆ ಅಡ್ಡಲಾಗಿ ಕಲ್ಲುದಿಂಡುಗಳನ್ನು ಟ್ರ್ಯಾಕ್ಟರ್ ಮೂಲಕ ತಂದು ಹಾಕಿದ್ದಾರೆ. ಇದರಿಂದ ಮನೆಗೆ ಹೋಗಲು ತೀವ್ರ ತೊಂದರೆಯಾಗುತ್ತಿದೆ. ಜೊತೆಗೆ ನಮ್ಮ ಮನೆಗೆ ಜಲಜೀವನ್ ಮಿಷನ್ ಯೋಜನೆ ವತಿಯಿಂದ ಹಾಕಲಾಗಿದ್ದ ಕುಡಿಯುವ ನೀರಿನ ಪೈಪ್‌ಲೈನ್ ಅನ್ನು ಒಡೆದು ಹಾಕಿ ನೀರು ಮನೆಗೆ ಬಾರದಂತೆ ಮಾಡಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಹಿರಿಯ ಅಧಿಕಾರಿಗಳು ಗಮನ ಹರಿಸಿ ನ್ಯಾಯ ಕೊಡಿಸುವಂತೆ ಮನವಿ ಮಾಡಿದ್ದಾರೆ.



ಒಂದನೇ ಪುಟದಿಂದ

ಜಿಲ್ಲೆಯಾದ್ಯಂತ ನೀರಿನ ಪರೀಕ್ಷೆ

ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿ ಆವರಣದಲ್ಲಿರುವ ಜಿಲ್ಲಾ ಪ್ರಯೋಗಾಲಯಕ್ಕೆ ಸಲ್ಲಿಸುತ್ತಿದ್ದಾರೆ. ಅದೇ ರೀತಿ ಆರೋಗ್ಯ ಇಲಾಖೆ ಅಧಿಕಾರಿಗಳ ನೇತೃತ್ವದಲ್ಲಿ ಜಿಲ್ಲೆಯಾದ್ಯಂತ ಗ್ರಾಮಗಳಿಗೆ ಪೂರೈಸುತ್ತಿರುವ ನೀರಿನ ಸ್ಯಾಂಪಲ್ ಅನ್ನು ಸಂಗ್ರಹಿಸಲಾಗುತ್ತಿದೆ. ತಾಲೂಕು ವೈದ್ಯಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಇಲಾಖೆಯ ಹೆಲ್ತ್ ಇನ್ಸ್‌ಪೆಕ್ಟರ್‌ಗಳು ಗ್ರಾಮಗಳಿಗೆ ತೆರಳಿ ನಲ್ಲಿ ನೀರು, ಓವರ್‌ಹೆಡ್ ಟ್ಯಾಂಕ್ ನೀರು, ಬೋರ್‌ವೆಲ್ ನೀರಿನ ಸ್ಯಾಂಪಲ್ ಸಂಗ್ರಹಿಸಿ ಲ್ಯಾಬೊರೇಟರಿಗೆ ಕಳುಹಿಸುತ್ತಿದ್ದಾರೆ. ನೀರಿನ ಸ್ಯಾಂಪಲ್‌ಗಳನ್ನು ಪರೀಕ್ಷಿಸಿದ ಬಳಿಕ ಒಂದು ವೇಳೆ ಕಲುಷಿತಗೊಂಡಿದೆ ಎಂದು ದೃಢಪಟ್ಟರೆ, ಅಂತಹ ಬಡಾವಣೆ, ಗ್ರಾಮಗಳಿಗೆ ನೀರು ಪೂರೈಕೆಯಾಗುತ್ತಿರುವ ಜಲಮೂಲಕ್ಕೆ ಕಲುಷಿತ ನೀರು ಸೇರುತ್ತಿರುವುದನ್ನು ಪತ್ತೆ ಮಾಡಿ ಅದನ್ನು ನಿವಾರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಪಿ.ಸಿ. ಕುಮಾರಸ್ವಾಮಿ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಸಾಮಾನ್ಯವಾಗಿ ನಿಯಮಾನುಸಾರ ಕುಡಿಯುವ ನೀರಿನ ಸ್ಯಾಂಪಲ್ ಅನ್ನು ಕಾಲ ಕಾಲಕ್ಕೆ ಲ್ಯಾಬೊರೇಟರಿಯಲ್ಲಿ ಪರೀಕ್ಷಿಸಿ ಕುಡಿಯಲು ಯೋಗ್ಯ ಎಂದು ದೃಢಪಟ್ಟ ನಂತರವೇ ನೀರು ಪೂರೈಸಲಾಗುತ್ತದೆ ಎಂದ ಅವರು, ಇದೀಗ ಕಾಲರಾಗೆ ಓರ್ವ ವ್ಯಕ್ತಿ ಬಲಿಯಾಗಿರುವುದರಿಂದ ಮೈಸೂರು ನಗರ ಸೇರಿದಂತೆ ಜಿಲ್ಲಾದ್ಯಂತ ಎಲ್ಲೆಡೆ ರ್‍ಯಾಂಡಮ್ ಆಗಿ ನೀರಿನ ಸ್ಯಾಂಪಲ್ ಸಂಗ್ರಹಿಸಿ ಪರೀಕ್ಷೆ ಮಾಡುತ್ತಿದ್ದೇವೆ ಎಂದರು.

ಬಿದರಗೂಡು ಪಂಪಿಂಗ್ ಸ್ಟೇಷನ್‌ನಲ್ಲಿ ನೀರು ಪರೀಕ್ಷೆ

ಕೆ.ಸಾಲುಂಡಿ ಪ್ರಕರಣದ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ಇಂದು ಕಬಿನಿ ನೀರು ಪೂರೈಸುವ ಬಿದರಗೂಡು ಪಂಪಿಂಗ್ ಸ್ಟೇಷನ್‌ಗೆ ಭೇಟಿ ನೀಡಿ ಪರಿಶೀಲಿಸಿದರು. ಕಬಿನಿ ನದಿಯಿಂದ ಮೈಸೂರು ನಗರದ ದಕ್ಷಿಣ ಭಾಗಕ್ಕೆ ಕುಡಿಯುವ ನೀರು ಪೂರೈಸುವ ಪಂಪಿಂಗ್ ಸ್ಟೇಷನ್‌ನಲ್ಲಿ ನೀರಿನ ಪರೀಕ್ಷೆ, ಫಿಲ್ಟರ್ ಬೆಡ್, ಕ್ಲೋರಿನೇಷನ್ ಪ್ರಕ್ರಿಯೆಗಳು ಸಮರ್ಪಕವಾಗಿ ನಡೆಯುತ್ತಿದೆಯೇ ಎಂಬುದನ್ನು ಪರಿಶೀಲಿಸಿದ ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಸಿಂಧೂ, ಮಳೆಯಿಂದಾಗಿ ನೀರಿನಲ್ಲಿ ಮಣ್ಣಿನ ಮಿಶ್ರಣವಾಗುತ್ತಿರುವುದರಿಂದ ಅದನ್ನು ಸಮರ್ಪಕವಾಗಿ ಫಿಲ್ಟರ್ ಮಾಡಬೇಕು, ನಿತ್ಯ ನಿಗದಿತ ಪ್ರಮಾಣದಲ್ಲಿ ಕ್ಲೋರಿನೇಷನ್ ಪ್ರಕ್ರಿಯೆ ಪೂರ್ಣಗೊಳಿಸುವಂತೆ ಅಲ್ಲಿನ ಸಿಬ್ಬಂದಿಗಳಿಗೆ ಸೂಚನೆ ನೀಡಿದರು. ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಾದ ಅಶ್ವಿನ್, ನಾಗರಾಜ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಾದ ಧನುಷ್, ಮುಸ್ತಫಾ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ಇಂದು 6ನೇ ಹಂತದ ಲೋಕಸಭಾ ಮತದಾನ

ಹಂತದಲ್ಲಿ ಮತದಾನ ನಡೆಯಲಿದೆ. ಭಾರತೀಯ ಹವಾಮಾನ ಇಲಾಖೆಯು ಮತದಾನ ನಡೆಯುವ ಕ್ಷೇತ್ರಗಳಲ್ಲಿ ರೀಮಲ್ ಚಂಡಮಾರುತದ ಯಾವುದೇ ಪ್ರತಿಕೂಲ ಪರಿಣಾಮ ಬೀರುವುದಿಲ್ಲ ಎಂದು ಹೇಳಿರುವುದಾಗಿ ಚುನಾವಣಾ ಆಯೋಗ ಇಂದು ಪ್ರಕಟಣೆಯಲ್ಲಿ ತಿಳಿಸಿದೆ. ರಾಷ್ಟ್ರ ರಾಜಧಾನಿ ದೆಹಲಿ, ಒಡಿಶಾದ ಕೆಲವು ಲೋಕಸಭೆ ಮತ್ತು ವಿಧಾನಸಭೆ ಸ್ಥಾನಗಳ ಜೊತೆಗೆ ಪಶ್ಚಿಮ ಬಂಗಾಳದ ಕೆಲವು ಲೋಕಸಭಾ ಕ್ಷೇತ್ರಗಳಿಗೂ ಆರನೇ ಹಂತದಲ್ಲಿ ಮತದಾನ ನಡೆಯಲಿದೆ.

5.84 ಕೋಟಿ ಪುರುಷರು, 5.29 ಕೋಟಿ ಮಹಿಳೆಯರು ಮತ್ತು 5,120 ತೃತೀಯಲಿಂಗಿ ಮತದಾರರು ಸೇರಿದಂತೆ ಒಟ್ಟು 11.13 ಕೋಟಿ ಮತದಾರರು ಆರನೇ ಹಂತದಲ್ಲಿ ಮತ ಚಲಾಯಿಸಲು ಅರ್ಹರಾಗಿದ್ದಾರೆ. ದೆಹಲಿ, ಗುರುಗ್ರಾಮ್ ಮತ್ತು ಫರಿದಾಬಾದ್ ಸೇರಿದಂತೆ ನಗರ ಕೇಂದ್ರಗಳಲ್ಲಿ ಶನಿವಾರ ಮತದಾನ ಮಾಡಲು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ಮೂಲಕ ನಗರವಾಸಿಗಳ ನಿರಾಸಕ್ತಿ ಪ್ರವೃತ್ತಿಯನ್ನು ಬ್ರೇಕ್ ಮಾಡುವಂತೆ ಚುನಾವಣಾ ಆಯೋಗ ಮತದಾರರಿಗೆ ಮನವಿ ಮಾಡಿದೆ.

ಉಳಿದ 57 ಸ್ಥಾನಗಳಿಗೆ ಜೂನ್ 1 ರಂದು ಕೊನೆಯ ಹಂತದ ಮತದಾನ ನಡೆಯಲಿದ್ದು, ಜೂನ್ 4 ರಂದು ಮತ ಎಣಿಕೆ ನಡೆಯಲಿದೆ.

ರಾಜ್ಯದಲ್ಲಿ ಡ್ರಗ್ಸ್ ದಂಧೆಗೆ ಬ್ರೇಕ್

ಸಮರ್ಥವಾದ ನಾಯಕತ್ವ ಇದೆ. ಒಳ್ಳೆ ಆಡಳಿತ ನೀಡುವುದಾಗಿ ಜನರಿಗೆ ಭರವಸೆ ನೀಡಿದ್ದೇವೆ. ಅದರಂತೆ ನಡೆದುಕೊಳ್ಳುತ್ತೇವೆ ಎಂದರು. ಎಚ್.ಡಿ.ದೇವೆಗೌಡರು ಪ್ರಜ್ವಲ್‌ಗೆ ಪತ್ರ ಬರೆದಿದ್ದಾರೆ ಎಂಬುದು ಗೊತ್ತಾಗಿದೆ. ಅದು ಅವರ ಕುಟುಂಬದ ಆಂತರಿಕ ವಿಚಾರ. ಪ್ರಜ್ವಲ್ ರೇವಣ್ಣ ಸಾರ್ವಜನಿಕ ದೃಷ್ಟಿಯಿಂದ ದೇವೇಗೌಡ ಅವರ ಪತ್ರಕ್ಕೆ ಗೌರವ ಕೊಟ್ಟು ದೇಶಕ್ಕೆ ವಾಪಸ್ ಆಗಬೇಕು ಎಂದು ಅಭಿಪ್ರಾಯಪಟ್ಟರು.

ಪ್ರಜ್ವಲ್ ಎಲ್ಲಿದ್ದಾನೆ ಎಂಬುದು ಡಿ.ಕೆ.ಶಿವಕುಮಾರ್ ಅವರಿಗೆ ಗೊತ್ತು ಎಂಬ ಜೆಡಿಎಸ್ ಟ್ವೀಟ್‌ಗಳಿಗೆ ಉತ್ತರ ಕೊಡುವುದೇ ನನ್ನ ಕೆಲಸವಲ್ಲ. ಕಾನೂನಿನ ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕು ಅದನ್ನು ಮಾಡುತ್ತೇವೆ, ಅದರಲ್ಲಿ ತಪ್ಪಿದ್ದರೆ ಹೇಳಲಿ. ಎಸ್‌ಐಟಿ ತನಿಖೆಯಲ್ಲಿ ದೋಷಗಳಿದ್ದರೆ ಹೇಳಲಿ. ಸರಿಪಡಿಸುವ ಕೆಲಸ ಮಾಡುತ್ತೇನೆ. ಸುಮ್ಮನೆ ಅವರೊಂದು ಟ್ವೀಟ್. ಇವರೊಂದು ಟ್ವೀಟ್ ಮಾಡುವುದಕ್ಕೆಲ್ಲ ಉತ್ತರ ಕೊಡಲು ಆಗುವುದಿಲ್ಲ.

ಸೆರೆ ಹಿಡಿದು ಬೇರೆಡೆ ಬಿಟ್ಟುಬಂದರೂ ಸ್ವಸ್ಥಾನಕ್ಕೆ ವಾಪಸ್ಸಾದ ಪುಂಡಾನೆ 'ದಕ್ಷ'

• 4 ದಿನದಲ್ಲಿ 100 ಕಿ.ಮೀ. ಕ್ರಮಿಸಿ ಸ್ವಸ್ಥಳ ತಲುಪಿದ 'ದಕ್ಷ' • ಈ ಹಿಂದೆ 2022ರಲ್ಲಿ 'ಕುಶ'; 2023ರಲ್ಲಿ 'ದ್ರೋಣ' ಸಹ ಸ್ವಸ್ಥಾನಕ್ಕೆ ಬಂದ ದಾಖಲೆ ಇವೆ

ಸಿದ್ದಾಪುರ, ಮೇ 24– ಜನ–ಜಾನುವಾರುಗಳ ಮೇಲೆ ದಾಳಿ ನಡೆಸುತ್ತಾ, ಕೊನೆಗೆ ಮಹಿಳೆಯನ್ನು ಬಲಿ ಪಡೆದಿದ್ದ ಪುಂಡಾನೆಯನ್ನು ಸೆರೆಹಿಡಿದು ದೂರದ ಕಾಡಿಗಟ್ಟಿದರೂ ಮರಳಿ ಸ್ವಸ್ಥಾನಕ್ಕೆ ಬಂದು, ಕೊಡಗಿನ ಕಾಫಿ ತೋಟಗಳ ಕಾರ್ಮಿಕರು ಮತ್ತು ಬೆಳೆಗಾರರಲ್ಲಿ ಆತಂಕವನ್ನುಂಟು ಮಾಡಿದೆ.

ನಾಲ್ಕು ದಿನಗಳಲ್ಲಿ 100 ಕಿ.ಮೀ. ಸಾಗಿ ಬಂದು ತನ್ನ ಮೂಲಸ್ಥಾನದಲ್ಲಿ ಠಿಕಾಣಿ ಹೂಡಿರುವ ಈ ಪುಂಡಾನೆ 'ದಕ್ಷ', ಅರಣ್ಯ ಇಲಾಖೆಗೇ ಸವಾಲೆಸೆದಿದೆ. ವಿರಾಜಪೇಟೆ ತಾಲೂಕಿನ ಸಿದ್ದಾಪುರ ಸಮೀಪದ ಕರಡಿಗೋಡು ಗ್ರಾಮದ ಕಾಫಿ ತೋಟದಲ್ಲಿ ಆರು ಸಾಕಾನೆಗಳ ಸಹಕಾರದೊಂದಿಗೆ ನೂರಕ್ಕೂ ಹೆಚ್ಚು ಅರಣ್ಯ ಸಿಬ್ಬಂದಿ ಹರಸಾಹಸಪಟ್ಟು ಈ ಆನೆ ಸೆರೆ ಹಿಡಿದು ಕತ್ತಿಗೆ ರೇಡಿಯೋ ಕಾಲರ್ ಅಳವಡಿಸಿ, 'ದಕ್ಷ' ಹೆಸರು ನಾಮಕರಣ ಮಾಡಿ, ಮೈಸೂರು ಜಿಲ್ಲೆಯ ಎಚ್.ಡಿ. ಕೋಟೆ ತಾಲೂಕಿನ ಅಂತರ ಸಂತೆ ವ್ಯಾಪ್ತಿಯ ಅರಣ್ಯಕ್ಕೆ ಬಿಟ್ಟು ಬಂದಿದ್ದರು.

ಅದು ನಾಲ್ಕು ದಿನಗಳಲ್ಲಿ ಸುಮಾರು 100 ಕಿ.ಮೀ. ಸಾಗಿ ಬಂದು ಕೊಡಗಿನ ತನ್ನ ಮೂಲನೆಲೆ ತಲುಪಿದೆ. ಚೆನ್ನಂಗಿ, ಬಾಡಗ, ಬಾಣಂಗಾಲ, ಮಾಲ್ದಾರೆ ವ್ಯಾಪ್ತಿಯ ಕಾಫಿ ತೋಟಗಳಲ್ಲಿ ಸುತ್ತಾಡುತ್ತಿರುವುದು ರೇಡಿಯೋ ಕಾಲರ್ ಮ್ಯಾಪ್ ಮೂಲಕ ಅರಣ್ಯ ಇಲಾಖೆಯ ಲೊಕೇಷನ್‌ನಲ್ಲಿ ಪತ್ತೆಯಾಗಿದೆ.

> ▶ ಕಾಡಾನೆ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟುವುದನ್ನು ಬಿಟ್ಟು ಕಾಟಾಚಾರಕ್ಕೆ ಆನೆ ಸೆರೆ ಹಿಡಿದು ಸ್ಥಳಾಂತರಿಸುವುದು. ಅವು ಮತ್ತೆ ಕಾಫಿ ತೋಟಕ್ಕೆ ಬರುತ್ತಿರುವುದು, ಇದೊಂದು ಸರ್ಕಾರ ಹಾಗೂ ಅಧಿಕಾರಿಗಳ ಕುತಂತ್ರವಾಗಿದೆ. ಕೃಷಿ ಫಸಲು ನಾಶ ಮಾಡುವ ಜೊತೆಗೆ ಕಾರ್ಮಿಕರು, ಬೆಳೆಗಾರರು ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ರೈತರ, ಕಾರ್ಮಿಕರ ತಾಳ್ಮೆಯನ್ನು ಪರೀಕ್ಷಿಸಬೇಡಿ. ಮನುಷ್ಯರ ಜೀವಗಳ ಜೊತೆ ಚೆಲ್ಲಾಟವಾಡಬೇಡಿ. ಕಾಡುಪ್ರಾಣಿಗಳ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟದಿದ್ದಲ್ಲಿ ಬೃಹತ್ ಪ್ರತಿಭಟನೆ ಮಾಡಬೇಕಾಗುತ್ತದೆ.
>
> -ಮನು ಸೋಮಯ್ಯ, ಕೊಡಗು ಜಿಲ್ಲಾ ರೈತ ಸಂಘದ ಅಧ್ಯಕ್ಷ
>
> ▶ ಸೆರೆ ಹಿಡಿದು ಅಂತರಸಂತೆ ಅರಣ್ಯಕ್ಕೆ ಬಿಟ್ಟು ಬಂದ ಆನೆ ಚೆನ್ನಂಗಿ ವ್ಯಾಪ್ತಿಯಲ್ಲಿ ಮತ್ತೆ ಕಾಣಿಸಿಕೊಂಡಿದ್ದು, ಸಿಬ್ಬಂದಿ ನಿಗಾ ವಹಿಸಿದ್ದಾರೆ. ಇದರ ಬಗ್ಗೆ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಲಾಗಿದ್ದು, ಅವರ ನಿರ್ದೇಶನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.
>
> -ಜಗನ್ನಾಥ್, ವಿರಾಜಪೇಟೆ ಡಿಎಫ್‌ಓ

ಮೇ 15ರಂದು ಸೆರೆಸಿಕ್ಕ ಈ ಪುಂಡಾನೆ ಹಲವು ವರ್ಷಗಳಿಂದ ಹಾಡಹಗಲಲ್ಲೇ ದಿಢೀರ್ ಪ್ರತ್ಯಕ್ಷವಾಗಿ ಗ್ರಾಮದ ಮಹಿಳೆಯನ್ನು ಬಲಿ ತೆಗೆದುಕೊಂಡಿತ್ತು. ಸುತ್ತಮುತ್ತಲ ಕಾಫಿ ತೋಟಗಳಲ್ಲಿ ಬೀಡು ಬಿಟ್ಟು ಅಪಾರ ಪ್ರಮಾಣದ ಕೃಷಿ ಫಸಲು ನಾಶ ಮಾಡುವ ಮೂಲಕ ಕಾರ್ಮಿಕರು, ಬೆಳೆಗಾರರಲ್ಲಿ ಆತಂಕವನ್ನುಂಟು ಮಾಡಿತ್ತು. ಉಪಟಳ ನೀಡುತ್ತಿದ್ದ ಈ ಪುಂಡಾನೆಯನ್ನು ಸೆರೆ ಹಿಡಿಯಬೇಕೆಂದು ಗ್ರಾಮಸ್ಥರು ಆಗ್ರಹಪಡಿಸಿದ್ದರು. ಮತ್ತಿಗೋಡು ಹಾಗೂ ದುಬಾರೆ ಶಿಬಿರದ ಅಭಿಮನ್ಯು, ಭೀಮಾ, ಮಹೇಂದ್ರ, ಹರ್ಷ, ಧನಂಜಯ, ಅಶ್ವತ್ಥಾಮ ಸಾಕಾನೆಗಳೊಂದಿಗೆ ಅರಣ್ಯ ಸಿಬ್ಬಂದಿ ಪುಂಡಾನೆ ಸೆರೆ ಹಿಡಿಯಲು ಸಿದ್ದಾಪುರ ಸಮೀಪದ ಎಮ್ಮೆಗುಂಡಿ ಕಾಫಿ ತೋಟದಲ್ಲಿ ಸಜ್ಜಾಗಿದ್ದರು.

ಆದರೆ, ಕಾಫಿ ತೋಟದಿಂದ ಕಾಲ್ಕಿತ್ತ ಪುಂಡಾನೆ ಸಿದ್ದಾಪುರ, ಘಟ್ಟದಳ, ಕರಡಿಗೋಡು, ಮಾರ್ಗವಾಗಿ ಪೇರಿಕಿತ್ತು ಕೊನೆಗೆ ಚಿಕ್ಕನಹಳ್ಳಿಯ ತೋಟದಲ್ಲಿ ಕಾಣಿಸಿಕೊಂಡಿತ್ತು. ಸುಮಾರು 10 ಕಿ.ಮೀ. ಕಾಫಿ ತೋಟದ ಕಡಿದಾದ ರಸ್ತೆಯಲ್ಲೇ ಹಿಂಬಾಲಿಸಿದ ಅರಣ್ಯ ಸಿಬ್ಬಂದಿ ಅರವಳಿಕೆ ಚುಚ್ಚುಮದ್ದು ನೀಡಿ, ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದರು. ನಂತರ ಆನೆಯನ್ನು ಹೆಚ್.ಡಿ. ಕೋಟೆ ಅಂತರಸಂತೆ ಅರಣ್ಯಕ್ಕೆ ಬಿಡಲಾಗಿತ್ತು.

ಆದರೆ 'ದಕ್ಷ' ಅಲ್ಲಿಂದ ನಾಗರಹೊಳೆ, ವೀರನಹೊಸಳ್ಳಿ, ಕಲ್ಲಳ್ಳ, ಆನೆಚೌಕೂರು ಮಾರ್ಗ ಸಾಗಿಬಂದು ಮತ್ತೆ ಚೆನ್ನಂಗಿ ಅರಣ್ಯ ತಲುಪಿದೆ. ಚೆನ್ನಂಗಿ ಶಾಲೆ ಬಳಿ ರೇಡಿಯೋ ಕಾಲರ್‌ನೊಂದಿಗೆ ಪತ್ತೆಯಾದ ಕಾಡಾನೆಯನ್ನು ಕಂಡ ಸ್ಥಳೀಯರು 4 ದಿನಗಳ ಹಿಂದೆ ಸೆರೆಹಿಡಿಯಲಾಗಿದ್ದ ಪುಂಡಾನೆ ಇದೇ ಎಂದು ಗುರುತಿಸಿ, ಆತಂಕಗೊಂಡಿ ದ್ದಾರೆ. ಇತ್ತ ಅರಣ್ಯ ಇಲಾಖೆಯ ರೇಡಿಯೋ ಕಾಲರ್ ಮ್ಯಾಪ್‌ನಲ್ಲೂ ಆನೆ ಮರಳಿ ಬಂದಿರುವುದು ಪತ್ತೆಯಾಗಿದೆ. ಇದೀಗ ಅರಣ್ಯ ಸಿಬ್ಬಂದಿ ಆನೆಯ ಚಲನವಲನ ಗಮನಿಸುತ್ತಿದೆ. ಆದರೆ ಪುಂಡಾನೆ ಅರಣ್ಯ ಇಲಾಖೆಗೆ ಸವಾಲೆಸೆದಿದೆ. ಈ ಆನೆಯಿಂದ ಮತ್ತಷ್ಟು ಸಮಸ್ಯೆ ಎದುರಾಗುವ ಆತಂಕ ಸೃಷ್ಟಿಯಾಗಿದೆ.

ಕಾಡಾನೆಗಳು ವಾಪಸ್ ಸ್ವಸ್ಥಾನಕ್ಕೆ ಬರುವುದು ಹೊಸದೇನೂ ಅಲ್ಲ. ಈ ಹಿಂದೆ, 2022ರಲ್ಲಿ 32 ವರ್ಷದ 'ಕುಶ' ಎಂಬ ಆನೆಯನ್ನು ಸೆರೆ ಹಿಡಿದು ಹೀಗೆ ಬಂಡೀಪುರ ಹುಲಿ ಮೀಸಲು ಅರಣ್ಯಕ್ಕೆ ಸ್ಥಳಾಂತರಿಸಲಾಗಿತ್ತು. ಆದರೆ, ಅದು 150 ಕಿ.ಮೀ. ಸಾಗಿ ವಾಪಸ್ ಸ್ವಸ್ಥಾನ ದುಬಾರೆ ಆನೆ ಶಿಬಿರಕ್ಕೆ ಬಂದಿತ್ತು.

ನಂತರ 2023ರಲ್ಲಿ ಅಮ್ಮತಿ ಸುತ್ತಮುತ್ತಲ ಕಾಫಿ ತೋಟಗಳಲ್ಲಿ ಬೀಡು ಬಿಟ್ಟು ಕಾರ್ಮಿಕರು, ಬೆಳೆಗಾರರ ಮೇಲೆ ದಾಳಿ ಮಾಡುತ್ತಿದ್ದ ಪುಂಡಾನೆ 'ದ್ರೋಣ'ನನ್ನು ಸೆರೆ ಹಿಡಿದು ರೇಡಿಯೋ ಕಾಲರ್ ಅಳವಡಿಸಿ ಅಂತರಸಂತೆ ಅರಣ್ಯ ದಲ್ಲಿ ಬಿಡಲಾಗಿತ್ತು. 18 ದಿನಗಳ ನಂತರ 100 ಕಿ.ಮೀ. ಕ್ರಮಿಸಿ ಅದು ಮತ್ತೆ ವಾಪಸ್ ಬಂದು ಇದೀಗ ವಿರಾಜಪೇಟೆ ಸುತ್ತಮುತ್ತಲ ಕಾಫಿ ತೋಟದಲ್ಲಿ ಬೀಡುಬಿಟ್ಟಿದೆ.

ಅದು ಮನುಷ್ಯನೇ ಆಗಲಿ, ಪ್ರಾಣಿಯೇ ಆಗಲಿ ಮೂಲ ನೆಲೆಯನ್ನು ತೊರೆದು ಬೇರೆಡೆ ನೆಲೆ ಕಂಡುಕೊಳ್ಳುವುದು ಬಲು ಅಪರೂಪ. ಬಲವಂತದಿಂದ ಹೊರಹಾಕಿದರೆ ಒಂದೋ ಅವುಗಳ ಅಂತ್ಯವಾಗುತ್ತದೆ. ಇಲ್ಲವೇ ಅವು ಸ್ವಸ್ಥಾನಕ್ಕೆ ಮರಳಿ ಪುನಃ ನೆಲೆ ಕಂಡುಕೊಳ್ಳುತ್ತವೆ. ಈ ಒಂದು ಮಹತ್ವದ ವಿಚಾರವನ್ನು ಆಧರಿಸಿ ಮುಂದೊಂದು ದಿನ ಆನೆ ಮತ್ತು ಮನುಷ್ಯನ ಒಡನಾಟವನ್ನು ಕಣ್ಣಿಗೆ ಕಟ್ಟುವ 'ಎಲೆಫೆಂಟ್ ವಿಶ್‌ಪರರ್ಸ್' ಸಾಕ್ಷ್ಯಚಿತ್ರದಂತೆ ಆನೆಗಳ ಸ್ಥಳಾಂತರ ಹಾಗೂ ಅವುಗಳ ಸ್ವಸ್ಥಾನ ಸರ್ಕಸ್ ಕುರಿತು ಚಿತ್ರಗಳು ಬರಬಹುದು.!



ಮೇ15ರಂದು ಚಿಕ್ಕನಹಳ್ಳಿಯ ತೋಟದಲ್ಲಿ ಸಾಕಾನೆ ನೆರವಿನಿಂದ 'ದಕ್ಷ'ನ ಸೆರೆ ಹಿಡಿಯಲಾಗಿತ್ತು



ಚಿಕ್ಕನಹಳ್ಳಿಯ ತೋಟದಲ್ಲಿ ಕಾಡಾನೆ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿ.

ಕೆಆರ್‌ಎಸ್ ನೀರಿನ ಮಟ್ಟ




ಗರಿಷ್ಠ ಮಟ್ಟ	124.80 ಅಡಿ
ಶುಕ್ರವಾರ	81.80 ಅಡಿ
ಒಳಹರಿವು	2509 ಕ್ಯೂಸೆಕ್
ಹೊರಹರಿವು	525 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಶುಕ್ರವಾರ	2823.80 ಅಡಿ
ಒಳ ಹರಿವು	460 ಕ್ಯೂಸೆಕ್
ಹೊರ ಹರಿವು	200 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಶುಕ್ರವಾರ	2260 ಅಡಿ
ಒಳ ಹರಿವು	2300 ಕ್ಯೂಸೆಕ್
ಹೊರ ಹರಿವು	300 ಕ್ಯೂಸೆಕ್

ಮೈಸೂರು ಮಿತ್ರ ಶನಿವಾರ 25 ಮೇ 2024

ಒಂದನೇ ಪುಟದಿಂದ

ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ

ಕಾನೂನು ನಿಯಮದ ಪ್ರಕಾರ ನಡೆಸಲಾಗುವುದು ಎಂದು ಸಿದ್ದರಾಮಯ್ಯ ತಿಳಿಸಿದರು. ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ಆಯ್ಕೆ ಮಾಡುವ ಆಕಾಂಕ್ಷಿಗಳಲ್ಲಿ ನಿಮ್ಮ ಪುತ್ರ ಡಾ.ಯತೀಂದ್ರ ಇದ್ದಾರೆಯೇ ಎಂಬ ಪ್ರಶ್ನೆಗೆ, ನಾನು ಕೋಲಾರದಿಂದ ಸ್ಪರ್ಧೆ ಮಾಡಲು ತೀರ್ಮಾನ ಮಾಡಿದ್ದೆ. ಆದರೆ ಕೋಲಾರ ಬಿಟ್ಟು ನಿಮ್ಮ ಸ್ವಕ್ಷೇತ್ರ ವರುಣದಲ್ಲೆ ಸ್ಪರ್ಧೆ ಮಾಡಿ ಎಂದು ಹೈಕಮಾಂಡ್ ಸೂಚನೆ ನೀಡಿತು ಎಂದರು. ಆ ಸಂದರ್ಭದಲ್ಲಿ ಡಾ.ಯತೀಂದ್ರ ವರುಣ ಕ್ಷೇತ್ರದ ಹಾಲಿ ಶಾಸಕರಾಗಿದ್ದರು. ಈ ಹಿನ್ನೆಲೆಯಲ್ಲಿ ನಿಮ್ಮ ಸ್ಥಾನವನ್ನು ಬಿಟ್ಟು ಕೊಡಿ, ಮುಂದಿನ ದಿನದಲ್ಲಿ ನಿಮ್ಮನ್ನು ವಿಧಾನ ಪರಿಷತ್ ಸದಸ್ಯರಾಗಿ ಮಾಡಲಾಗುವುದು ಎಂದು ಕಾಂಗ್ರೆಸ್ ಹೈಕಮಾಂಡ್ ಭರವಸೆ ನೀಡಿತ್ತು. ಆದರೆ ಹೈಕಮಾಂಡ್ ಈಗ ಏನು ತೀರ್ಮಾನ ಮಾಡುತ್ತದೆಯೋ ತಿಳಿದಿಲ್ಲ ಎಂದು ಸಿದ್ದರಾಮಯ್ಯ ಹೇಳಿದರು.

ಮೈಸೂರು ಜಿಲ್ಲೆಯ ಕೈಗಾರಿಕೆಗಳಿಂದ ಕಾವೇರಿ ಮಲೀನವಾಗುತ್ತಿದೆ ಎಂಬ ಮಂಡ್ಯ ಜಿಲ್ಲೆಯವರ ಆರೋಪದ ಬಗ್ಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಬಹಳಷ್ಟು ಕೈಗಾರಿಕೆಗಳು ನಿರ್ಮಾಣವಾಗಿವೆ. ಇದರಿಂದ ನದಿ ನೀರು ಮಲೀನ ಆಗುವ ಸಾಧ್ಯತೆ ಇದೆ ಎಂದು ಹೇಳಿದರು.

ಆದರೆ ಕೈಗಾರಿಕೆಗಳಿಂದ ಕಾವೇರಿ ನದಿ ನೀರು ಮಲೀನವಾಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ಯಾವ ಕಠಿಣ ಕ್ರಮ ಕೈಗೊಳ್ಳಲಿದೆ ಎಂಬ ಬಗ್ಗೆ ಸಿದ್ದರಾಮಯ್ಯ ಏನನ್ನು ಹೇಳದೆ ಸ್ಥಳದಿಂದ ನಿರ್ಗಮಿಸಿದರು.

ಬೆಣ್ಣೆ ದೋಸೆ ಸವಿದ ಸಿದ್ದರಾಮಯ್ಯ

ಬಂದಿದ್ದ ವೇಳೆಯೂ ಹೆಚ್.ಡಿ.ಕೋಟೆಯ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್‌ನಲ್ಲಿ ಮೂರು ದಿನ ವಾಸ್ತವ್ಯ ಹೂಡಿದ್ದರು. ಲೋಕಸಭಾ ಚುನಾವಣೆ ನಂತರ ಊಟಿಗೆ ಹೋಗಿ, ಅಲ್ಲಿ ಎರಡು ದಿನ ವಿಶ್ರಾಂತಿಗೆ ಪಡೆದಿದ್ದರು. ಇವತ್ತು ಮೈಸೂರಿನಲ್ಲಿ ಮೈಲಾರಿ ಹೋಟೆಲ್‌ಗೆ ಹೋಗಿ ಉಪಹಾರ ಸೇವಿಸಿದ್ದಾರೆ.

ಸಿದ್ದರಾಮಯ್ಯ ಅವರಿಗೆ ದೋಸೆ ಅಂದರೆ ಅಚ್ಚು ಮೆಚ್ಚಿನ ಉಪಹಾರ. ಬೆಂಗಳೂರಿನಲ್ಲಿ ಇರುವಾಗಲೂ ಆಗಾಗ್ಗೆ ಜನಾರ್ಧನ್ ಹೋಟೆಲ್‌ಗೆ ಹೋಗಿ ಮಸಾಲೆ ದೋಸೆ ಸವಿಯುತ್ತಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಮೈಲಾರಿ ಹೋಟೆಲ್‌ನಲ್ಲಿ ದೋಸೆ ತಿಂದು ಬಹಳ ದಿನವಾಗಿತ್ತು. ಹಾಗೂ ದೋಸೆ ತಿನ್ನೋಣ ಅಂತ ನಿನ್ನೆಯೇ ಪ್ಲಾನ್ ಮಾಡಿದ್ದೆ. ಅದರಂತೆ ಇಂದು ದೋಸೆ ಸವಿದು ಬಂದಿದ್ದೇನೆ ಎಂದರು.



ಸುಖಾ ಸುಮ್ಮನೆ ಡಿ.ಕೆ.ಶಿವಕುಮಾರ್ ಹೆಸರು ಎಳೆದು ತರುತ್ತಿದ್ದಾರೆ

ಪೆನ್‌ಡ್ರೈವ್ ಪ್ರಕರಣದಲ್ಲಿ ತಮ್ಮ ಅಣ್ಣನ ಮಗ ಪ್ರಜ್ವಲ್ ಸಿಲುಕಿರುವ ಕಾರಣ ವಿಷಯಾಂತರ ಮಾಡಲು ಹೆಚ್.ಡಿ. ಕುಮಾರಸ್ವಾಮಿ ಡಿ.ಕೆ.ಶಿವಕುಮಾರ್ ಹೆಸರು ಎಳೆದು ತರುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣದಲ್ಲಿ ಬಿಡುಗಡೆಯಾಗಿರುವ ಆಡಿಯೋದಲ್ಲಿ ಡಿ.ಕೆ.ಶಿವಕುಮಾರ್ ಮಾತನಾಡಿರುವ ಕಾರಣ ಅವರನ್ನು ಎಸ್‌ಐಟಿ ವಿಚಾರಣೆ ಮಾಡಬೇಕೆಂಬ ಹೆಚ್.ಡಿ.ಕುಮಾರಸ್ವಾಮಿ ಆಗ್ರಹಕ್ಕೆ ತಿರುಗೇಟು ನೀಡುವ ಮೂಲಕ ಡಿ.ಕೆ.ಶಿವಕುಮಾರ್ ಪರ ಬ್ಯಾಟ್ ಬೀಸಿದರು. ಪ್ರಜ್ವಲ್ ವಿರುದ್ಧ ರೇಪ್, ಲೈಂಗಿಕ ಕಿರುಕುಳದಂತಹ ಗಂಭೀರ ಆರೋಪಗಳಿವೆ. ಆದ ಕಾರಣ ಕುಮಾರಸ್ವಾಮಿ ವಿಷಯಾಂತರ ಮಾಡಲು ಡಿ.ಕೆ.ಶಿವಕುಮಾರ್ ಹೆಸರನ್ನು ಸುಖಾ ಸುಮ್ಮನೆ ಎಳೆದು ತರುತ್ತಿದ್ದಾರೆ ಎಂದು ಆಪಾದಿಸಿದರು. ಪ್ರಜ್ವಲ್‌ನನ್ನು ನಾನು ಎಂದೂ ಅಪರಾಧಿ ಅಂತ ಹೇಳಿಲ್ಲ. ಆರೋಪಿ ಅಂತಾನೆ ನಾನು ಕೂಡ ಹೇಳುತ್ತಿದ್ದೇನೆ. ಈ ಹಿನ್ನೆಲೆಯಲ್ಲಿ ಕಾನೂನಿಗೆ ಎಲ್ಲರೂ ಗೌರವ ಕೊಡಬೇಕು ಎಂದು ಹೇಳಿದರು.

ಎಸ್‌ಐಟಿ ಈ ತನಕ ನಡೆಸಿರುವ ಎಲ್ಲಾ ತನಿಖೆ ಹಳ್ಳ ಹಿಡಿದಿರುವ ಕಾರಣ ಪ್ರಜ್ವಲ್ ಪ್ರಕರಣ ಕೂಡ ಹಳ್ಳ ಹಿಡಿಯುತ್ತದೆ ಎಂಬ ಕುಮಾರಸ್ವಾಮಿ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಎಸ್‌ಐಟಿಯಲ್ಲಿ ಇರುವವರು ಪೊಲೀಸರೆ. ಆದರೆ ತನಿಖೆ ಬಗ್ಗೆ ಹೆಚ್ಚು ಗಮನ ಹಾಗೂ ಮಹತ್ವ ನೀಡುವ ಹಿನ್ನೆಲೆಯಲ್ಲಿ ಎಸ್‌ಐಟಿ ರಚನೆ ಮಾಡಲಾಗಿದೆ. ಅವರು ಚುರುಕಿನಿಂದ ತನಿಖೆ ನಡೆಸುತ್ತಾರೆ ಎಂದು ತಿಳಿಸಿದರು. ಎಸ್‌ಐಟಿ ತನಿಖೆ ಬಗ್ಗೆ ನನಗೆ ಸಂಪೂರ್ಣ ವಿಶ್ವಾಸವಿದೆ. ಈ ತನಕ ಎಸ್‌ಐಟಿ ನಡೆಸಿರುವ ತನಿಖೆ ತಾರ್ಕಿಕ ಅಂತ್ಯ ಕಂಡಿಲ್ಲದಿರಬಹುದು. ಆದರೆ ಈ ಪ್ರಕರಣದಲ್ಲಿ ಹಾಗೆ ಆಗುವುದಿಲ್ಲ. ಎಸ್‌ಐಟಿಯವರು ಸಮರ್ಥವಾಗಿ ತನಿಖೆ ನಡೆಸುತ್ತಾರೆ ಎಂದು ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ವಿದೇಶದಲ್ಲಿರುವ ಪ್ರಜ್ವಲ್ ರಾಜತಾಂತ್ರಿಕ ಪಾಸ್ ಪೋರ್ಟ್ ರದ್ದು ಮಾಡುವಂತೆ ಪ್ರಧಾನಮಂತ್ರಿ ನರೇಂದ್ರ ಮೋದಿಗೆ ಒಂದು ಬಾರಿ ಪತ್ರ ಬರೆದಿದ್ದೆ. ಆದರೆ ಅವರಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಎರಡನೆ ಬಾರಿ ಪತ್ರ ಬರೆದಿದ್ದೇನೆ. ಒಬ್ಬ ಆಡಳಿತಾರೂಢ ಸರ್ಕಾರದ ಮುಖ್ಯಮಂತ್ರಿ ಪತ್ರ ಬರೆದಾಗ ಪ್ರಧಾನಮಂತ್ರಿಗಳು ಗಂಭೀರವಾಗಿ ಪರಿಗಣಿಸಬೇಕು ಎಂದು ಹೇಳಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಕಚೇರಿಗೆ ಯಾರೇ ಪತ್ರ ಬರೆದರೂ ತಕ್ಷಣ ಪತ್ರಿಕ್ರಿಯೆ ಬಂದೇ ಬರುತ್ತದೆ ಎಂಬುದು ತಪ್ಪು ಅಭಿಪ್ರಾಯ. ಆಗಿದ್ದರೆ ನನ್ನ ಪತ್ರಕ್ಕೆ ಈಗಾಗಲೇ ಉತ್ತರ ಕೊಡಬೇಕಿತ್ತಲ್ಲವೆ ಎಂದು ಪ್ರಶ್ನಿಸಿದರು.

ಹಾಗೆಂದ ಮಾತ್ರಕ್ಕೆ ನರೇಂದ್ರ ಮೋದಿ ಪತ್ರಗಳಿಗೆ ಉತ್ತರ ನೀಡಲು ಆಯ್ಕೆ ಮಾಡುತ್ತಾರೆ ಎಂಬ ಆರೋಪ ನಾನು ಮಾಡುವುದಿಲ್ಲ. ನನ್ನ ಪತ್ರಕ್ಕೆ ಉತ್ತರ ಕೊಟ್ಟಿಲ್ಲ ಎಂದಷ್ಟೆ ಹೇಳುತ್ತೇನೆ ಎಂದರು. ಒಬ್ಬ ಮುಖ್ಯಮಂತ್ರಿ ಬರೆದ ಪತ್ರಕ್ಕೆ ಏಕೆ ಉತ್ತರ ಕೊಟ್ಟಿಲ್ಲ ಎಂದು ಮಾಧ್ಯಮದವರು ಕೇಂದ್ರ ಕಾನೂನು ಸಚಿವ ಪ್ರಹ್ಲಾದ್ ಜೋಷಿ ಅವರನ್ನೆ ಕೇಳಬೇಕು ಎಂದು ಸಿದ್ದರಾಮಯ್ಯ ಸಲಹೆ ನೀಡಿದರು.

ಪ್ರಜ್ವಲ್ ವಿದೇಶಕ್ಕೆ ಹೋಗುವುದು ಹೆಚ್.ಡಿ.ದೇವೇಗೌಡರಿಗೆ ಗೊತ್ತಿರಲಿಲ್ಲವೆ

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹಾಗೂ ಅವರ ಕುಟುಂಬದವರಿಗೆ ಗೊತ್ತಿಲ್ಲದೆ ಪ್ರಜ್ವಲ್ ವಿದೇಶಕ್ಕೆ ಹೋಗಿದ್ದಾನಾ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು. ಕೂಡಲೇ ಪೊಲೀಸರ ಮುಂದೆ ಶರಣಾಗದಿದ್ದರೆ ಪ್ರಜ್ವಲ್‌ನನ್ನು ಕುಟುಂಬದಿಂದ ಹೊರ ಹಾಕುವುದಾಗಿ ಹೆಚ್.ಡಿ.ದೇವೇಗೌಡರು ನೀಡಿರುವ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಪ್ರಜ್ವಲ್ ವಿಚಾರ ಅವರ ಕುಟುಂಬಕ್ಕೆ ಗೊತ್ತಿದೆ. ಅವನು ವಿದೇಶಕ್ಕೆ ಹೋಗುವ ವಿಚಾರ ಅವರ ಕುಟುಂಬಕ್ಕೆ ಗೊತ್ತಿದೆ ಎಂದು ಸಂಶಯ ವ್ಯಕ್ತಪಡಿಸಿದರು. ಕರ್ನಾಟಕದಲ್ಲಿ ಇರುವಾಗ ಕೂಡ ಪ್ರಜ್ವಲ್ ನನ್ನ ಸಂಪರ್ಕದಲ್ಲಿ ಇರಲಿಲ್ಲ ಎಂದು ಹೆಚ್.ಡಿ.ಕುಮಾರಸ್ವಾಮಿ ಈಗ ಹೇಳುತ್ತಾರೆ. ಆದರೆ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಪ್ರಜ್ವಲ್ ನನ್ನ ಮಗ ಎಂದು ಕರೆದಿದ್ದರು. ಅವರ ಈ ಹೇಳಿಕೆಯಿಂದ ಪ್ರಜ್ವಲ್ ಅವರ ಸಂಪರ್ಕದಲ್ಲಿ ಇದ್ದ ಎಂಬುದು ಸ್ಪಷ್ಟವಲ್ಲವೆ ಎಂದು ಮರು ಪ್ರಶ್ನಿಸಿದರು.

ವಿಧಾನ ಪರಿಷತ್‌ಗೆ ತೀವ್ರಗೊಂಡ ಲಾಬಿ: ಸಿದ್ದರಾಮಯ್ಯ ಮೈಸೂರು ಮನೆ ಈಗ 'ಪವರ್ ಹೌಸ್'

ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ಚುನಾವಣೆ ನಡೆಯುತ್ತಿರುವ ಹಿನ್ನೆಲೆ ಆಕಾಂಕ್ಷಿಗಳ ತೀವ್ರ ಲಾಬಿ ಕಾರಣ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೈಸೂರು ಮನೆ... ಪವರ್ ಹೌಸ್ ಆಗಿದೆ. ವಿಧಾನ ಪರಿಷತ್‌ಗೆ ಆಯ್ಕೆಯಾಗಲು ಕಾಂಗ್ರೆಸ್‌ನಲ್ಲಿ ಭಾರೀ ಲಾಬಿ ನಡೆಯುತ್ತಿದೆ. ಸಿದ್ದರಾಮಯ್ಯ ಬೆಂಗಳೂರಿನಿಂದ ಮೈಸೂರಿಗೆ ಬಂದಿದ್ದರೂ ಆಕಾಂಕ್ಷಿಗಳು ಅವರ ಬೆನ್ನು ಬಿಡಲಿಲ್ಲ.

ಮೈಸೂರಿನ ರಾಮಕೃಷ್ಣನಗರದ ಸಿದ್ದರಾಮಯ್ಯ ಮನೆಗೆ ಇಂದು ಬೆಂಗಳೂರು ಮಾಜಿ ಮೇಯರ್ ರಮೇಶ್, ಮಾಜಿ ವಿಧಾನ ಪರಿಷತ್ ಸದಸ್ಯ ಶರಣಪ್ಪ ಭೇಟಿ ನೀಡಿ ತಮ್ಮನ್ನು ವಿಧಾನ ಪರಿಷತ್‌ಗೆ ಪರಿಗಣಿಸುವಂತೆ ಮನವಿ ಮಾಡಿದರು.

ಇದೇ ವೇಳೆ ಮೈಸೂರು ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಹೆಚ್.ಸಿ.ಬಸವರಾಜು ಅವರನ್ನು ವಿಧಾನಪರಿಷತ್‌ಗೆ ಆಯ್ಕೆ ಮಾಡುವಂತೆ ಅವರ ನೂರಾರು ಬೆಂಬಲಿಗರು ಸಿದ್ದರಾಮಯ್ಯನವರ ಮನೆ ಮುಂದೆ ಜಮಾಯಿಸಿದ್ದರು.

ಸಿದ್ದರಾಮಯ್ಯ ಮನೆಯಿಂದ ಹೊರಗೆ ಬರುತ್ತಿದ್ದಂತೆ 'ಮೈಸೂರು ಹುಲಿ' ಎಂದು ಜೈಕಾರ ಹಾಕಿ, ಹೆಚ್.ಸಿ.ಬಸವರಾಜು ಅವರನ್ನು ಎಂಎಲ್‌ಸಿ ಮಾಡುವಂತೆ ಸಿದ್ದರಾಮಯ್ಯರಲ್ಲಿ ಮನವಿ ಮಾಡಿದರು.

ಮೈಸೂರಿನಲ್ಲಿ ಸಿದ್ದರಾಮಯ್ಯ ದಿನ ಪೂರ್ತಿ ವಿಶ್ರಾಂತಿ

ನಿನ್ನೆಯಿಂದ ಮೈಸೂರಿನಲ್ಲೇ ವಾಸ್ತವ್ಯ ಹೂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ದಿನ ಪೂರ್ತಿ ವಿಶ್ರಾಂತಿ ಪಡೆದರು. ಇಂದು ಬೆಳಿಗ್ಗೆ ನಜರ್‌ಬಾದ್‌ನ ಮೈಲಾರಿ ಹೋಟೆಲ್‌ನಲ್ಲಿ ಉಪಾಹಾರ ಸೇವಿಸಿ ರಾಮಕೃಷ್ಣನಗರದ ಮನೆಗೆ ಬಂದ ಸಿದ್ದರಾಮಯ್ಯ ರಾತ್ರಿವರೆಗೈ ಮನೆ ಬಿಟ್ಟು ಕದಲಲಿಲ್ಲ.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಪಶು ಸಂಗೋಪನಾ ಸಚಿವ ವೆಂಕಟೇಶ್ ಜೊತೆ ಸ್ವಲ್ಪ ಸಮಯ ಮಾತುಕತೆ ನಡೆಸಿದರು.

ಇದಾದ ನಂತರ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ರಹಸ್ಯ ಮಾತುಕತೆ ನಡೆಸಿದರು. ತರುವಾಯ ಯಾರನ್ನು ಭೇಟಿ ಮಾಡದ ಸಿದ್ದರಾಮಯ್ಯ ವಿಶ್ರಾಂತಿ ಪಡೆದರು.

ಖಗೋಳಶಾಸ್ತ್ರಜ್ಞ ಶ್ರೀನಿವಾಸ್ ಆರ್.ಕುಲಕರ್ಣಿಗೆ ಪ್ರತಿಷ್ಠಿತ 'ಶಾ' ಪುರಸ್ಕಾರ

ಇವರು ದಾನಿಗಳೂ ಆದ, ಇನ್ಫೋಸಿಸ್ ಫೌಂಡೇಷನ್‌ನ ಡಾ.ಸುಧಾಮೂರ್ತಿಯವರ ಸಹೋದರ

ಬೆಂಗಳೂರು, ಮೇ 24– ರಾಜ್ಯಸಭೆ ಸದಸ್ಯೆ, ಇನ್ಫೋಸಿಸ್ ಫೌಂಡೇಷನ್‌ನ ಡಾ. ಸುಧಾಮೂರ್ತಿ ಅವರ ಸಹೋದರರಾದ ಖಗೋಳಶಾಸ್ತ್ರಜ್ಞ ಶ್ರೀನಿವಾಸ್ ಆರ್.ಕುಲಕರ್ಣಿ ಅವರು ಪ್ರತಿಷ್ಠಿತ ಅಂತಾರಾಷ್ಟ್ರೀಯ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

ಅಮೆರಿಕದಲ್ಲಿ ಖಗೋಳ ಶಾಸ್ತ್ರದ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವ ಇವರಿಗೆ ಖಗೋಳಶಾಸ್ತ್ರ ವಿಭಾಗದ ಸಾಧಕರಿಗೆ ಕೊಡಮಾಡುವ 'ಶಾ(SHA) ಪುರಸ್ಕಾರ' ಘೋಷಿಸಲಾಗಿದೆ. 2024ನೇ ಸಾಲಿನ 'ಶಾ ಪ್ರಶಸ್ತಿ ವಿಜೇತರ ಪಟ್ಟಿ' ಕಳೆದ ಮಂಗಳವಾರ ಪ್ರಕಟವಾಗಿದ್ದು, ಈ ಪೈಕಿ ಶ್ರೀನಿವಾಸ್ ಆರ್.ಕುಲಕರ್ಣಿ ಅಗ್ರಗಣ್ಯರಾಗಿದ್ದಾರೆ. ಇವರೊಂದಿಗೆ ವೈದ್ಯಕೀಯ ವಿಭಾಗದಲ್ಲಿ ಅಮೆರಿಕ



ಶ್ರೀನಿವಾಸ್ ಆರ್.ಕುಲಕರ್ಣಿ

ದವರೇ ಆದ ಸ್ವೀ ಲೇ ಥೇನ್ ಹಾಗೂ ಸ್ಟುಅರ್ಟ್ ಆರ್ಕಿನ್ ಅವರಿಗೂ ಪ್ರತಿಷ್ಠಿತ 'ಶಾ ಪುರಸ್ಕಾರ' ಲಭಿಸಿದೆ.

ಕುಲಕರ್ಣಿ ಅವರ ಸಾಧನೆ: ಶ್ರೀನಿವಾಸ್ ಆರ್.ಕುಲಕರ್ಣಿ ಅವರು ಖಗೋಳ ಶಾಸ್ತ್ರದಲ್ಲಿ ಹಲವು ಮಹತ್ವದ ಸಂಶೋಧನೆಗಳನ್ನು ಮಾಡಿ, ಪ್ರಸಿದ್ಧರಾಗಿದ್ದಾರೆ. ಇವರು ಪದವಿ ವಿದ್ಯಾರ್ಥಿಯಾಗಿದ್ದಾಗಲೇ ಮೊದಲ 'ಮಿಲಿಸೆಕೆಂಡ್ ಪಲ್ಸರ್' ಕಂಡು ಹಿಡಿದಿದ್ದರು. 1987ರಲ್ಲಿ ಮೊದಲ ಗ್ಲೋಬ್ಯುಲರ್ ಕ್ಲಸ್ಟರ್ ಪಲ್ಸರ್ ಆವಿಷ್ಕಾರದಲ್ಲಿ ಪ್ರಮುಖ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದರು. ಗಾಮಾ–ರೇ ಬರ್ಸ್ಟ್, ಸೂಪರ್ ನೋವಾ ಹಾಗೂ ಹಲವು ಮಾರ್ಪಡುವ ಮತ್ತು ಸಂಚರಿಸುವ ಬಾಹ್ಯಾಕಾಶ ವಸ್ತುಗಳ ಕುರಿತಾಗಿ ಸಂಶೋಧನೆ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಕುಲಕರ್ಣಿ ಅವರ ಸಂಶೋಧನೆಗಳ ಮೂಲಕ ಮಾನವ ಜನಾಂಗ ಬಾಹ್ಯಾಕಾಶದ ಬಗ್ಗೆ ತನ್ನ ತಿಳುವಳಿಕೆಯನ್ನು ಮತ್ತಷ್ಟು ಹೆಚ್ಚಿಸಿಕೊಂಡಿದೆ ಎಂದು 'ಶಾ ಪುರಸ್ಕಾರ ಪ್ರತಿಷ್ಠಾನ' ಶ್ಲಾಘನೆ ವ್ಯಕ್ತಪಡಿಸಿದೆ.

ಕುಲಕರ್ಣಿ ಅವರು 1992ರಲ್ಲಿ ಎನ್‌ಎಸ್‌ಎಫ್‌ನ ಅಲನ್ ಟಿ.ವಾಟರ್‌ಮ್ಯಾನ್ ಪ್ರಶಸ್ತಿ, 1991ರಲ್ಲಿ ಅಮೆರಿಕನ್ ಆಸ್ಟ್ರೋನಾಮಿಕಲ್ ಸೊಸೈಟಿಯಿಂದ ಹೆಲೆನ್ ಬಿ.ವಾರ್ನರ್ ಪ್ರಶಸ್ತಿ, 2002ರಲ್ಲಿ ಜಾನ್ಸ್ಕಿ ಪ್ರಶಸ್ತಿ, 2017ರಲ್ಲಿ ಡಾನ್ ಡೇವಿಡ್ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿ–ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. 2015ರಲ್ಲಿ ನೆದರ್‌ಲೆಂಡ್ಸ್‌ನ ರಾಡ್‌ಬೌಡ್ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿ ಇವರ ಸಾಧನೆಯನ್ನು ಪ್ರಶಂಸಿಸಿದೆ.

ಕರ್ನಾಟಕದ ಬುನಾದಿ: ಶ್ರೀನಿವಾಸ್ ಆರ್.ಕುಲಕರ್ಣಿ ಅವರು ಭಾರತೀಯರು, ಅದರಲ್ಲೂ ಕನ್ನಡಿಗರು. ಕರ್ನಾಟಕದ ಗಡಿಯಲ್ಲಿರುವ ಮಹಾರಾಷ್ಟ್ರದ ಕುರುಂದ್ವಾಡ್ ಎಂಬ ಪುಟ್ಟ ಪಟ್ಟಣದಲ್ಲಿ 1955ರಲ್ಲಿ ಜನಿಸಿದ್ದಾರೆ. ಹುಟ್ಟೂರು ಮಹಾರಾಷ್ಟ್ರಕ್ಕೆ ಸೇರಿದ್ದರೂ ಅವರು ಬೆಳೆದು, ಪ್ರವರ್ಧಮಾನಕ್ಕೆ ಬಂದಿದ್ದು ಕರ್ನಾಟಕದ ಹುಬ್ಬಳ್ಳಿಯಲ್ಲಿ. ಇಲ್ಲಿನ ಕೇಂದ್ರೀಯ ವಿದ್ಯಾಲಯದಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಪಡೆದ ಶ್ರೀನಿವಾಸ್ ಆರ್.ಕುಲಕರ್ಣಿ, ದಿಲ್ಲಿಯ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಎಂಎಸ್ ವ್ಯಾಸಂಗ ಮಾಡಿದ್ದಾರೆ. ಬಳಿಕ 1983ರಲ್ಲಿ ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಪಿಹೆಚ್.ಡಿ ಪಡೆದರು. ಇದೀಗ ಅವರು ಕ್ಯಾಲಿಫೋರ್ನಿಯಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಖಗೋಳ ಶಾಸ್ತ್ರದ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹಲವಾರು ವಿದ್ಯಾರ್ಥಿಗಳ ಸಂಶೋಧನೆಗೆ ಮಾರ್ಗದರ್ಶಕರೂ ಆಗಿದ್ದಾರೆ.

ಭೌಗೋಳಿಕತೆಗೆ ಅನುಗುಣವಾಗಿ ಯೋಜನೆ ರೂಪಿಸಿದರೆ ಜನರಿಗೆ ತಲುಪುತ್ತವೆ

ಭೂಗೋಳಶಾಸ್ತ್ರ ಪ್ರಾಧ್ಯಾಪಕ ಡಾ.ಬಿ.ಚಂದ್ರಶೇಖರ್ ಅಭಿಮತ



ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘ (ಎಂಯುಎಲ್ ಐಎಸ್‌ಎಸ್‌ಎ) ದ ವತಿಯಿಂದ ಆಯೋಜಿಸಿದ್ದ 'ಭೌಗೋಳಿಕ ಚಿಂತನೆಗಳು' ವಿಷಯ ಕುರಿತ ಉಪನ್ಯಾಸ ಕಾರ್ಯಕ್ರಮವನ್ನು ಮೈಸೂರು ವಿವಿ ಭೂಗೋಳಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ಬಿ.ಚಂದ್ರಶೇಖರ್ ಉದ್ಘಾಟಿಸಿದರು.

ಮೈಸೂರು, ಮೇ 24(ಎಸ್‌ಪಿಎನ್)– ಭೌಗೋಳಿಕತೆಗೆ ಅನುಗುಣವಾಗಿ ಕಾನೂನು ಮತ್ತು ಯೋಜನೆಗಳನ್ನು ರೂಪಿಸಿದಾಗ ಮಾತ್ರ ಅಂತಹ ಯೋಜನೆಗಳು ಜನರನ್ನು ತಲುಪಲು ಸಾಧ್ಯ ಎಂದು ಮೈಸೂರು ವಿವಿ ಭೂಗೋಳಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಬಿ.ಚಂದ್ರಶೇಖರ್ ಅಭಿಪ್ರಾಯಪಟ್ಟರು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಡಾ.ಎಸ್.ಆರ್.ರಂಗನಾಥನ್ ಸಭಾಂಗಣದಲ್ಲಿ ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘ (ಎಂಯುಎಲ್ ಐಎಸ್‌ಎಸ್‌ಎ)ದ ವತಿಯಿಂದ ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ 'ಭೌಗೋಳಿಕ ಚಿಂತನೆಗಳು' ವಿಷಯ ಕುರಿತು ಮಾತನಾಡಿದರು.

ದೇಶದ ಅಭಿವೃದ್ಧಿಗೆ ಯಾವುದೇ ಯೋಜನೆಗಳನ್ನು ಜಾರಿಗೆ ತರುವಾಗ ಆಯಾಯ ಪ್ರದೇಶಗಳ ಭೌಗೋಳಿಕ, ಪರಿಸರ ಚಿಂತನೆಗಳಿಗೆ ಅನುಗುಣವಾಗಿ ಜಾರಿಗೆ ತರಬೇಕು. ಆಗ ಮಾತ್ರ ಅಂತಹ ಯೋಜನೆಗಳು ಜನಪರ ಯೋಜನೆಗಳಾಗಿ ಪರಿವರ್ತಿತವಾಗುತ್ತವೆ ಎಂದರು.

ರಾಜ್ಯದಲ್ಲಿ ಪ್ರತಿ ಹತ್ತು ಕಿಮಿಗೆ ಕನ್ನಡ ಮಾತನಾಡುವವರ ಶೈಲಿಯಲ್ಲಿ ಬದಲಾಗುತ್ತದೆ. ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ, ಕರಾವಳಿ ಕರ್ನಾಟಕ ಹಾಗೂ ಬಯಲು ಸೀಮೆ ಕರ್ನಾಟಕದಲ್ಲಿ ಕನ್ನಡ ಭಾಷೆ ಮಾತನಾಡುವ ಶೈಲಿ ಬದಲಾವಣೆ ಅಂಶಗಳನ್ನು ಗುರುತಿಸಬಹುದು. ಇದು ಭೌಗೋಳಿಕ ಚರ್ಚೆಗೆ ಯೋಗ್ಯವಾಗಿದೆ ಎಂದರು.

ಆಯಾಯ ಪ್ರದೇಶದ ಭೌಗೋಳಿಕ ಅಂಶಗಳನ್ನು ಗುರುತಿಸಬೇಕಾದರೆ ಸ್ಥಳ, ಅಲ್ಲಿನ ಜನರು, ಪರಿಸರ ಕುರಿತು ಮೊದಲು ಅಧ್ಯಯನ ಮಾಡಬೇಕು. ಯಾವುದೇ ಸ್ಥಳಗಳನ್ನು ಪರಿಚಯಿಸುವಾಗ ಅಲ್ಲಿನ ಜನರ ಆಚರಣೆಗಳನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನ ಮಾಡಬೇಕು. ಜನರೇ ಇಲ್ಲದಿದ್ದರೆ ಅಂತಹ ಪ್ರದೇಶಗಳನ್ನು ಗುರುತಿಸಲು ಸಾಧ್ಯವಿಲ್ಲ. ಅಲ್ಲದೆ, ಮೈಸೂರನ್ನು ಜಾಗತಿಕ ಮಟ್ಟದಲ್ಲಿ ಗುರುತಿಸಬೇಕಾದರೆ, ಇಲ್ಲಿನ ಪರಿಸರ, ಹಿಂದಿನ ರಾಜರ ಆಳ್ವಿಕೆ, ಮಹಿಷನ ಆಳ್ವಿಕೆ, ಧಾರ್ಮಿಕ ಆಚರಣೆ ಸೇರಿದಂತೆ ಭೌಗೋಳಿಕ ಅಂಶಗಳನ್ನು ಅಧ್ಯಯನಕ್ಕೆ ಪೂರಕವಾಗಿ ಗಮನಿಸಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಒಂದು ಸ್ಥಳವನ್ನು ಭೌಗೋಳಿಕವಾಗಿ ಗುರುತಿಸಬೇಕಾದರೆ, ಆ ಪ್ರದೇಶದ ಪರಿಸರ, ಆಹಾರ ಪದ್ಧತಿ, ಐತಿಹಾಸಿಕ ಲಕ್ಷಣಗಳನ್ನು ಗುರುತಿಸುವುದು ಮುಖ್ಯವಾಗುತ್ತವೆ. ಭೌಗೋಳಿಕ ವ್ಯವಸ್ಥೆಯಲ್ಲೂ ಉಪ ವ್ಯವಸ್ಥೆಗಳಿರುತ್ತವೆ. ಒಂದು ಸಮುದಾಯದಲ್ಲಿ ಉಪಪಂಗಡಗಳಿದ್ದಂತೆ ಪರಿಸರದಲ್ಲೂ ಉಪ ವ್ಯವಸ್ಥೆಗಳನ್ನು ಕಾಣಬಹುದು. ಭೂಮಿ ಮೇಲಿನ ಜೀವಿ ಮತ್ತು ವಸ್ತುಗಳು ಸ್ವತಂತ್ರವಾಗಿ ಒಂದನ್ನೊಂದು ಅವಲಂಭಿಸಿರುತ್ತವೆ ಎಂದರು.

ಈ ವೇಳೆ ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಪ್ರೊ.ಎಂ.ಚಂದ್ರಶೇಖರ್, ಶಿಕ್ಷಣ ಸಲಹೆಗಾರರಾದ ಡಾ.ಬಿ.ನಿವೇದಿತಾ, ಕಾರ್ಯದರ್ಶಿಗಳಾದ ಸಿ.ವಿ.ಮನೋಜ್ ಕುಮಾರ್, ಡಿ.ಗೀತಾ, ಕೆ.ಎಂ.ಪ್ರಿಯಾಂಕ, ಎ.ವಿ.ವೀರೇಂದ್ರ, ಜಿ.ಎನ್.ಪ್ರಮೋದ್ ಚಕ್ರವರ್ತಿ, ಜಿ.ಎನ್.ಪ್ರಿಯಾ, ಎನ್. ರಕ್ಷಿತಾ, ಎ.ಪಿ.ನಿಸರ್ಗ ಉಪಸ್ಥಿತರಿದ್ದರು.



ಮೈಸೂರು ವಿವಿ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ನಡೆದ 2023–24 ನೇ ಸಾಲಿನ ಮೈಸೂರು ಅಂತರ ವಲಯಗಳ ಪುರುಷರ ಸಾಫ್ಟ್‌ಬಾಲ್ ಪಂದ್ಯಾವಳಿಯಲ್ಲಿ ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ವಿದ್ಯಾರ್ಥಿಗಳ ತಂಡ ಕೆ.ಎಲ್. ಸಚಿನ್ ನಾಯಕತ್ವದಲ್ಲಿ ದ್ವಿತೀಯ ಸ್ಥಾನ ಗಳಿಸಿದೆ. ವಿಜೇತ ಕ್ರೀಡಾಪಟುಗಳೊಂದಿಗೆ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ, ಪ್ರಾಂಶುಪಾಲ ಡಾ.ಎಂ.ಪ್ರಭು, ದೈಹಿಕ ಶಿಕ್ಷಣ ನಿರ್ದೇಶಕರಾದ ಎಂ.ಕಾರ್ತಿಕ್, ಸಿ.ಎಸ್. ನಿರಂಜನ್ ಹಾಗೂ ಬೋಧಕ–ಬೋಧಕೇತರರು ಇದ್ದಾರೆ.

ಅಪರಿಚಿತ ಶವ ಪತ್ತೆ

ಮೈಸೂರು, ಮೇ 24– ತಾಲೂಕಿನ ದೊಡ್ಡಮಾರಗೌಡನ(ಡಿಎಂಜಿ) ಹಳ್ಳಿ ಗೇಟ್ ಬಳಿ ಕಳೆದ ತಿಂಗಳು ಅಪರಿಚಿತನ ಶವ ಪತ್ತೆಯಾಗಿದ್ದು, ವಾರಸುದಾರರಿದ್ದಲ್ಲಿ ಸಂಪರ್ಕಿಸುವಂತೆ ಇಲವಾಲ ಠಾಣೆ ಪೊಲೀಸರು ಮನವಿ ಮಾಡಿದ್ದಾರೆ. ಡಿಎಂಜಿ ಹಳ್ಳಿ ಗೇಟ್ ಬಳಿ ಏ.21ರಂದು ಸುಮಾರು 55 ವರ್ಷದ ಅಪರಿಚಿತನ ಶವ ಪತ್ತೆಯಾಗಿತ್ತು. ಆಹಾರವಿಲ್ಲದೆ ಹಾಗೂ ಯಾವುದೋ ಕಾಯಿಲೆಯಿಂದ ಬಳಲಿ ಸಾವನ್ನಪ್ಪಿದ್ದ. ಸುಮಾರು 5.7 ಅಡಿಯ ದೃಢ ಕಾಯದವನಾದ ಆತ ತುಂಬುತೋಳಿನ ಹರಿಶಿನ ಬಣ್ಣದ ಶರ್ಟ್, ಮಾಸಲು ಪಾಚಿ ಬಣ್ಣದ ಪ್ಯಾಂಟ್ ಧರಿಸಿದ್ದ. ಈ ಬಗ್ಗೆ ಮಾಹಿತಿಗೆ ಇಲವಾಲ ಪೊಲೀಸ್ ಠಾಣೆ(0821–2402222) ಅಥವಾ ಮೈಸೂರು ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ(2444800) ಸಂಪರ್ಕಿಸುವಂತೆ ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಿರಿಯರ ಮೆದುಳಿನ ಆರೋಗ್ಯ ಸುಧಾರಣೆಗೆ ನಾಳೆ ಮೈಸೂರು ಮಣಿಪಾಲ್ ಆಸ್ಪತ್ರೆಯಿಂದ ಸ್ಪೆಲ್ ಬೀ ಸ್ಪರ್ಧೆ

ಮೈಸೂರು, ಮೇ 23– ಪ್ರಸ್ತುತ, ಭಾರತವು 60 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನವರಲ್ಲಿ ಮರೆಗುಳಿತನ ಮತ್ತು ಕ್ಷೀಣಿಸುತ್ತಿರುವ ಅರಿವಿನ ತೊಂದರೆಯಂತಹ ಗಂಭೀರ ಲಕ್ಷಣಗಳುಳ್ಳ ಡಿಮೆನ್ಷಿಯಾ (Dementia) ನಂತಹ ಮೆದುಳಿಗೆ ಸಂಬಂಧಿಸಿದ ನ್ಯೂರೋ ಡಿಜೆನೆರೇಟಿವ್ ಕಾಯಿಲೆಗಳ ಪ್ರಕರಣಗಳಲ್ಲಿ ಆತಂಕಕಾರಿ ಏರಿಕೆಗೆ ಸಾಕ್ಷಿಯಾಗಿದೆ. ಇತ್ತೀಚಿನ ಅಧ್ಯಯನಗಳು 60 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಸುಮಾರು 7.4% (ಸುಮಾರು 8.8 ಮಿಲಿಯನ್) ಜನರು ಮರೆಗುಳಿತನ ಮತ್ತು ಕ್ಷೀಣಿಸುತ್ತಿರುವ ಅರಿವಿನ ತೊಂದರೆ ಹೊಂದಿದ್ದಾರೆ. ಮರೆಗುಳಿತನ ಮತ್ತು ಕ್ಷೀಣಿಸುತ್ತಿರುವ ಅರಿವಿನ ತೊಂದರೆ ತಡೆಗಟ್ಟಲು ಅಥವಾ ಅದರ ಪ್ರಭಾವವನ್ನು ನಿಧಾನಗೊಳಿಸಲು ಮಾನಸಿಕ (ಮೆದುಳಿನ) ಚಟುವಟಿಕೆಗಳು, ವಿಶೇಷವಾಗಿ ಶಬ್ದಕೋಶ ಮತ್ತು ಪದಬಂಧ ಆಟಗಳು ಬಹಳ ಮುಖ್ಯವೆಂದು ಅನೇಕ ವೈಜ್ಞಾನಿಕ ಅಧ್ಯಯನಗಳು ಸೂಚಿಸುತ್ತವೆ.

ಈ ಪುರಾವೆಗಳ ಆಧಾರದ ಮೇಲೆ, ಮೈಸೂರಿನ ಮಣಿಪಾಲ್ ಆಸ್ಪತ್ರೆಯು ಮೇ 26ರಂದು ಹಿರಿಯ ನಾಗರಿಕರಿಗಾಗಿ ಸ್ಪೆಲ್ ಬೀ ಸ್ಪರ್ಧೆಯ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮವು ವಯಸ್ಸಾದವರ ಆರೋಗ್ಯವನ್ನು ಉತ್ತೇಜಿಸಲು ಮತ್ತು ಅವರ ಮನಸ್ಸನ್ನು ಕ್ರಿಯಾಶೀಲವಾಗಿರಿಸಲು ಆಸ್ಪತ್ರೆಯ ಸುಧಾರಣಾ ಕ್ರಮವಾಗಿದೆ. ಭಾಗವಹಿಸುವ ಪ್ರತಿಯೊಬ್ಬರಿಗೂ ಉತ್ತೇಜಕ ಅನುಭವವನ್ನು ನೀಡಲಿರುವ ಈ ಸ್ಪೆಲ್ ಬೀ ಸ್ಪರ್ಧೆಯು ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ನಡೆಯಲಿದೆ. ಕಾರ್ಯಕ್ರಮದಲ್ಲಿ ಡಾ. ವೇಣುಗೋಪಾಲ ಕೃಷ್ಣ ಕೆ.ಎಸ್ – ಸೀನಿಯರ್ ಕನ್ಸಲ್ಟೆಂಟ್, ನ್ಯೂರೊಲೊಜಿ, ಡಾ. ಮಕ್ಸೂದ್ ಅಹಮದ್ ಎ.ಆರ್ – ಸೀನಿಯರ್ ಕನ್ಸಲ್ಟೆಂಟ್, ನ್ಯೂರೋಸರ್ಜರಿ, ಡಾ. ಉಪೇಂದ್ರ ಶೆಣೈ – ವೈದ್ಯಕೀಯ ಸೇವೆಗಳ ಮುಖ್ಯಸ್ಥ ಮತ್ತು ಪ್ರಮೋದ್ ಕುಂದರ್, ಆಸ್ಪತ್ರೆ ನಿರ್ದೇಶಕರು, ಮಣಿಪಾಲ ಆಸ್ಪತ್ರೆ ಮೈಸೂರು ಸೇರಿದಂತೆ ವೈದ್ಯಕೀಯ ವೃತ್ತಿಪರರು ಮತ್ತು ಆಸ್ಪತ್ರೆಯ ಅಧಿಕಾರಿಗಳು ಭಾಗವಹಿಸಲಿದ್ದಾರೆ.

ವಿವಾಹ ವಾರ್ಷಿಕೋತ್ಸವದಲ್ಲಿ ಬಾಲಕನ ಚಿಕಿತ್ಸೆಗೆ ನೆರವಾದ ಆದರ್ಶ ದಂಪತಿ!



ನಿವೃತ್ತ ಶಿಕ್ಷಕ ರಾಜೇಂದ್ರ ಹಾಗೂ ನಾಗಿನಿ ದಂಪತಿ ಡಯಾಲಿಸಿಸ್ ಮಾಡಿಸಿಕೊಳ್ಳುತ್ತಿರುವ ಬಾಲಕನಿಗೆ ಆರ್ಥಿಕ ನೆರವು ನೀಡಿದರು.

ಮೈಸೂರು, ಮೇ 24(ಎಸ್‌ಬಿಡಿ)– ವಿವಾಹ ವಾರ್ಷಿಕೋತ್ಸವ ಆಚರಣೆಗೆ ವ್ಯಯಿಸುತ್ತಿದ್ದ ಹಣವನ್ನು ಬಾಲಕನೊಬ್ಬನ ಚಿಕಿತ್ಸೆಗೆ ನೀಡುವ ಮೂಲಕ ನಿವೃತ್ತ ಶಿಕ್ಷಕರೊಬ್ಬರು ಸಾರ್ಥಕತೆ ಮೆರೆದಿದ್ದಾರೆ.

ಮೂಲತಃ ಚಾಮರಾಜನಗರ ತಾಲೂಕು, ಹೆಬ್ಬಸೂರು ಗ್ರಾಮದವರಾದ ಮೈಸೂರು ಶಿಕ್ಷರ ಬಡಾವಣೆ ನಿವಾಸಿ ರಾಜೇಂದ್ರ ಹಾಗೂ ಟಿ.ಎಸ್.ನಾಗಿನಿ ದಂಪತಿ ಡಯಾಲಿಸಿಸ್ ಮಾಡಿಸಿಕೊಳ್ಳುತ್ತಿರುವ 14 ವರ್ಷದ ಬಾಲಕನಿಗೆ 5 ಸಾವಿರ ರೂ. ನೆರವು ನೀಡಿ, ತಮ್ಮ ವಿವಾಹ ವಾರ್ಷಿಕೋತ್ಸವನ್ನು ಅರ್ಥಪೂರ್ಣವಾಗಿ ಆಚರಿಸಿಕೊಂಡಿದ್ದಾರೆ. ಇದೇ ವೇಳೆ ರಾಜೇಂದ್ರ ಅವರ ಸಹೋದ್ಯೋಗಿಯಾಗಿದ್ದ ನಿವೃತ್ತ ಶಿಕ್ಷಿ ಅನ್ನಪೂರ್ಣ ಅವರು ನೀಡಿದ್ದ 5 ಸಾವಿರ ರೂ. ನೆರವನ್ನು ಹಸ್ತಾಂತರಿಸಿದ್ದಾರೆ.

ಮಧುಮೇಹದಿಂದ ನಂಜನಗೂಡು ತಾಲೂಕು, ಕೂಗಲೂರು ಗ್ರಾಮದ ಬಡಕುಟುಂಬದ ಸಚ್ಚಿದಾನಂದನ ಎರಡು ಕಿಡ್ನಿ ವೈಫಲ್ಯಗೊಂಡಿದ್ದು, ಕಳೆದ ನಾಲ್ಕು ತಿಂಗಳಿಂದ ಡಯಾಲಿಸಿಸ್ ಮಾಡಿಸಿಕೊಳ್ಳುತ್ತಿರುವ ಬಗ್ಗೆ ವಾಟ್ಸಾಪ್ ಮೂಲಕ ತಿಳಿದ ರಾಜೇಂದ್ರ, ಅವರನ್ನು ಸಂಪರ್ಕಿಸಿ ಮೈಸೂರು ಪತ್ರಕರ್ತರ ಭವನದ ಬಳಿ ಸಚ್ಚಿದಾನಂದ ಕುಟುಂದವರಿಗೆ ಆರ್ಥಿಕ ನೆರವು ನೀಡಿದ್ದಾರೆ. ಈ ಮೂಲಕ ಇತರರಿಗೆ ಮಾದರಿಯಾಗಿದ್ದಾರೆ.

ಮೂರು ದಿನಗಳ ಮಾವು, ಹಲಸು ಮಾರಾಟ ಮೇಳಕ್ಕೆ ಚಾಲನೆ

ಗ್ರಾಹಕರನ್ನು ಆಕರ್ಷಿಸುತ್ತಿರುವ ಮಾವಿನ ಆಕಾರದ ಸೆಲ್ಫೀ ಬೂತ್

ಮೈಸೂರು, ಮೇ 24(ಜಿಎ)–ಮೈಸೂರಿನ ನಜರ್‌ಬಾದ್‌ನಲ್ಲಿರುವ ಕುಪ್ಪಣ್ಣ ಉದ್ಯಾನವನದಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಆಯೋಜಿಸಿರುವ ಮೂರು ದಿನಗಳ(ಮೇ 24 ರಿಂದ 26ರವರೆಗೆ) ಮಾವು ಮತ್ತು ಹಲಸು ಮಾರಾಟ ಮೇಳಕ್ಕೆ ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ತೋಟಗಾರಿಕೆ ಇಲಾಖೆಯಿಂದ ಆಯೋಜಿಸಿರುವ ಮೂರು ದಿನಗಳ ಮಾವು ಮತ್ತು ಹಲಸಿನ ಮೇಳ ರೈತರು ಮತ್ತು ಗ್ರಾಹಕರಿಗೂ ಸಹಕಾರಿಯಾಗಲಿದೆ. ಈ ಬಾರಿ ಕಡಿಮೆ ಪ್ರಮಾಣದಲ್ಲಿ ಮಳೆ ಆಗಿರುವುದರಿಂದ ಮಾವಿನ ಇಳುವರಿ ಕಡಿಮೆಯಾಗಿದ್ದು, ಇದರಿಂದ ಮಾರುಕಟ್ಟೆಗೆ ಮಾವು ಕಡಿಮೆ ಪ್ರಮಾಣದಲ್ಲಿ ಬಂದಿದೆ. ರೈತರಿಂದ ನೇರವಾಗಿ ಗ್ರಾಹಕರು ಖರೀದಿಸಲಿ ಎಂಬ ಕಾರಣಕ್ಕೆ ಈ ಮೇಳ ಆಯೋಜಿಸಲಾಗಿದ್ದು, ಮಾರುಕಟ್ಟೆಯಲ್ಲಿ ಮಾವು ಖರೀದಿ ಮಾಡಲು ಹಿಂಜರಿಯುವ ಗ್ರಾಹಕರು ಇಲ್ಲಿಗೆ ಬಂದು ಕೊಳ್ಳಬಹುದಾಗಿದೆ ಎಂದರು.

ಸೆಲ್ಫೀ ಬೂತ್: ಮೈಸೂರು, ಮಂಡ್ಯ, ಚಾಮರಾಜನಗರ ಹಾಸನ ಸೇರಿದಂತೆ ವಿವಿಧ ಜಿಲ್ಲೆಗಳ ರೈತರಿಗೂ ಅವಕಾಶ ನೀಡಲಾಗಿದ್ದು, 30 ಮಳಿಗೆಗಳನ್ನು ನಿರ್ಮಿಸಲಾಗಿದೆ. ಮಳೆ ಬಂದರು ಮೇಳಕ್ಕೆ ಯಾವುದೇ ಅಡಚಣೆ ಯಾಗದಂತೆ ಸಿದ್ಧತೆ ಮಾಡಲಾಗಿದೆ. ಗ್ರಾಹಕರ ಮನಸೆಳೆಯಲು ಮಾವಿನ ಆಕಾರದ ಸೆಲ್ಫೀ ಬೂತ್ ಮಾಡಿರುವುದು ಆಕರ್ಷಣೆಯಾಗಿತ್ತು ಇದು ಗ್ರಾಹಕರನ್ನು ಆಕರ್ಷಿಸುತ್ತಿತ್ತು. ಗ್ರಾಹಕರು ಅದರ ಮುಂದೆ ನಿಂತು ಸೆಲ್ಫಿ ಕ್ಲಿಕಿಸಿಕೊಳ್ಳುತ್ತಿದ್ದರು.



ಮೈಸೂರಿನ ನಜರ್‌ಬಾದ್‌ನಲ್ಲಿರುವ ಕುಪ್ಪಣ್ಣ ಉದ್ಯಾನವನದಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಆಯೋಜಿಸಿರುವ ಮೂರು ದಿನಗಳ ಮಾವು ಮತ್ತು ಹಲಸು ಮಾರಾಟ ಮೇಳಕ್ಕೆ ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಶುಕ್ರವಾರ ಚಾಲನೆ ನೀಡಿದರು.

ಮಾವಿನ ದರ(ಕೆಜಿಗೆ) : ಬಾದಾಮಿ 125 ರೂ., ರಸಪುರಿ 100 ರೂ., ಮಲ್ಲಿಕಾ 130., ಸಿಂಧೂರಾ 70ರೂ., ತೋತಾಪುರಿ 40 ರೂ., ಮಲಗೋವ 170 ರೂ., ಬಾಗನಪಲ್ಲಿ 70 ರೂ., ಹಿಮಾಪಸಂದ್ 240 ರೂ., ವಾಲಜ 70 ರೂ., ಕೇಸರ್ 130 ರೂ., ದಶೇರಿ 130 ರೂ., ಸಕ್ಕರಗುತ್ತಿ 160 ರೂ. ಗಳಿದ್ದು, ಹಲಸಿನಲ್ಲಿ ಸರ್ವಋತು ಹಲಸು ಮತ್ತು ಚಂದ್ರ ಹಲಸು ಈ ಎರಡು ತಳಿಗಳು ಲಭ್ಯವಿದ್ದು, ಇವುಗಳು 40 ರೂ.ಗೆ ಮಾರಾಟ ಮಾಡಲಾಗುತ್ತಿದೆ. ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತ್ ಸಿಇಓ ಕೆ.ಎಂ.ಗಾಯಿತ್ರಿ, ತೋಗಾರಿಕೆ ಇಲಾಖೆ ಉಪ ನಿರ್ದೇಶಕ ಮಂಜುನಾಥ್ ಅಂಗಡಿ ಸೇರಿದಂತೆ ಮತ್ತಿತರರಿ ಉಪಸ್ಥಿತರಿದ್ದರು.

ನೀರಿನ ಶುದ್ದೀಕರಣದ ಬಗ್ಗೆ ಗಮನಹರಿಸಲು ಸೂಚನೆ

ಕೆ.ಸಾಲುಂಡಿ ಕಲುಷಿತ ನೀರಿನ ಪ್ರಕರಣ ಕುರಿತು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಪ್ರತಿಕ್ರಿಯಿಸಿ, ಒಂದು ಬೋರ್‌ವೆಲ್‌ಗೆ ಚರಂಡಿ ನೀರು ಮಿಶ್ರವಾಗಿ ಈ ರೀತಿ ಸಮಸ್ಯೆಯಾಗಿದೆ. ವಾಡಿಕೆಯಂತೆ 4 ಮಿಮಿ ಮಳೆಯಾಗುತ್ತಿತ್ತು. ಆದರೆ ಅಂದು 40 ಮಿಮಿ ಮಳೆ ಸುರಿದ ಕಾರಣ ಚರಂಡಿ ನೀರು ಬೋರ್‌ವೆಲ್‌ಗೆ ಸೇರಿ ಈ ಪ್ರಕರಣ ನಡೆದಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಗ್ರಾಮದಲ್ಲಿ 120 ಜನರ ಸ್ಯಾಂಪಲ್ ಪಡೆದು ಪರೀಕ್ಷಿಸಲಾಗಿದೆ. ಹಾಗೇ ಆಯುಕ್ತರಿಗೆ ಮತ್ತು ಪಿಡಿಓಗಳಿಗೆ ನೀರಿನ ಶುದ್ದೀಕರಣದ ಬಗ್ಗೆ ಗಮನಹರಿಸುವಂತೆ ಸೂಚಿಸಲಾಗಿದೆ ಎಂದರು.

ನಿರಂತರವಾಗಿ ಭೇದಿಯಾಗಿ ನಿರ್ಜಲೀಕರಣವಾದರೆ ತಕ್ಷಣ ವೈದ್ಯರನ್ನು ಸಂಪರ್ಕಿಸಿ ಸೂಕ್ತ ಚಿಕಿತ್ಸೆ ಪಡದುಕೊಳ್ಳಿ ಖಾಸಗಿ ಆಸ್ಪತ್ರೆಯಲ್ಲಿ ಸಾಧ್ಯವಾಗದಿದ್ದರೆ, ಯಾವುದಾರೂ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡದುಕೊಳ್ಳಬಹುದಾಗಿದೆ. ಈ ಕುರಿತು ತಾಲೂಕು ವೈದ್ಯಾಧಿಕಾರಿಗಳಿಗೂ ಸೂಚನೆ ನೀಡಿದ್ದೇನೆ. ಸಾರ್ವಜನಿಕರು ಮನೆಗಳಲ್ಲಿ ಕಾಯಿಸಿದ ನೀರನ್ನು ಸೇವಿಸಿ ಜೊತೆಗೆ ಸಾರ್ವಜನಿಕ ಸ್ಥಳಗಳಲ್ಲಿ ಶುಚಿತ್ವ ಕಾಪಾಡುವವರ ಬಳಿ ತಿಂಡಿ–ತಿನಿಸು ತಿನ್ನಿ ಎಂದು ಸಲಹೆ ನೀಡಿದರು.

ಹಿರಿಯರು ಅಭ್ಯರ್ಥಿಯಾಗಿದ್ದರೆ ನಾನು ಸ್ಪರ್ಧಿಸುತ್ತಿರಲಿಲ್ಲ

ನೈರುತ್ಯ ಪದವೀಧರ ಕ್ಷೇತ್ರದ ಬಿಜೆಪಿ ಬಂಡಾಯ ಅಭ್ಯರ್ಥಿ ಕೆ.ರಘುಪತಿ ಭಟ್ ಸ್ಪಷ್ಟನೆ



ಮಡಿಕೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಕೆ.ರಘುಪತಿ ಭಟ್ ಮಾತನಾಡಿದರು.

ಮಡಿಕೇರಿ, ಮೇ 24–ಬಿಜೆಪಿ ತನ್ನ ಸಿದ್ಧಾಂತವನ್ನು ಪಾಲಿಸುತ್ತಿಲ್ಲ. ಕಾರ್ಯಕರ್ತರ ಅಭಿಪ್ರಾಯಕ್ಕೆ ಮನ್ನಣೆ ನೀಡುತ್ತಿಲ್ಲ. ಪಕ್ಷಕ್ಕಾಗಿ ದುಡಿದ ಯಾರೇ ಹಿರಿಯರನ್ನು ಅಭ್ಯರ್ಥಿಯನ್ನಾಗಿ ಮಾಡಿದ್ದರೆ ನಾನು ಸ್ಪರ್ಧಿಸುತ್ತಿರಲಿಲ್ಲ ಎಂದು ವಿಧಾನ ಪರಿಷತ್‌ನ ನೈರುತ್ಯ ಪದವೀಧರ ಕ್ಷೇತ್ರದ ಬಿಜೆಪಿ ಬಂಡಾಯ ಅಭ್ಯರ್ಥಿ ಹಾಗೂ ಉಡುಪಿ ಮಾಜಿ ಶಾಸಕ ಕೆ.ರಘುಪತಿ ಭಟ್ ಸ್ಪಷ್ಟಪಡಿಸಿದರು.

ನಗರದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉಡುಪಿ ವಿಧಾನಸಭಾ ಕ್ಷೇತ್ರದಲ್ಲಿ ಎರಡು ಬಾರಿ ನನಗೆ ಟಿಕೆಟ್ ಕೈತಪ್ಪಿದೆ. ಲೋಕಸಭಾ ಚುನಾವಣೆಯಲ್ಲೂ ಸ್ಪರ್ಧಿಸಲು ನನಗೆ ಅವಕಾಶ ದೊರೆಯಲಿಲ್ಲ. ಈ ಕಾರಣದಿಂದ ಕಾರ್ಯಕರ್ತರ ಅಭಿಪ್ರಾಯ ಮತ್ತು ಒತ್ತಡಕ್ಕೆ ಮಣಿದು ನೈರುತ್ಯ ಪದವೀಧರ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದೇನೆ. ರಾಜಕಾರಣಿಯಾದ ನನಗೆ ಜನಸೇವೆಗೆ ಈ ಸ್ಪರ್ಧೆ ಅನಿವಾರ್ಯವಾಗಿದೆ ಎಂದು ತಿಳಿಸಿದರು.

ಮೂರು ಬಾರಿ ಟಿಕೆಟ್ ತಪ್ಪಿದೆ. ನನಗೆ ಯಾರು, ಯಾಕೆ? ಟಿಕೆಟ್ ತಪ್ಪಿಸಿದ್ದಾರೆ ಎಂದು ನನಗೆ ಇಲ್ಲಿಯವರೆಗೂ ಗೊತ್ತಿಲ್ಲ. ಬಿಜೆಪಿ ಪಕ್ಷವೇ ನನಗೆ ಸರ್ವೋಚ್ಚ. ಪಕ್ಷದ ನೋಟಿಸ್ ಕೈಸೇರಿದ ತಕ್ಷಣ ಸರಿಯಾದ ಉತ್ತರ ನೀಡುತ್ತೇನೆ. ಶಿಸ್ತು ಸಮಿತಿಯ ವಿಚಾರಣೆಗೆ ಹಾಜರಾಗಿ ಕಾರ್ಯಕರ್ತರಿಗೆ ಆಗಿರುವ ನೋವನ್ನು ವಿವರಿಸುತ್ತೇನೆ. ಪಕ್ಷಕ್ಕಾಗಿ ಅನೇಕ ವರ್ಷಗಳಿಂದ ದುಡಿದ ಪ್ರಾಮಾಣಿಕ ಕಾರ್ಯಕರ್ತರಿಗೆ ಸ್ಪರ್ಧಿಸಲು ಅವಕಾಶ ನೀಡಿದ್ದರೆ, ನಾನು ಸ್ಪರ್ಧಿಸುತ್ತಿರಲಿಲ್ಲ. ಕೇವಲ ಒಂದೂವರೆ ವರ್ಷದ ಹಿಂದೆ ಬಿಜೆಪಿಗೆ ಬಂದು ಸೇರಿದವರಿಗೆ ಟಿಕೆಟ್ ನೀಡಿರುವ ಬಗ್ಗೆ ಕಾರ್ಯಕರ್ತರಿಗೂ ನೋವಿದೆ. ನಾನು ಗೆದ್ದು ಬಂದ ನಂತರ ವಿಧಾನಪರಿಷತ್‌ನ ಬಿಜೆಪಿ ಸದಸ್ಯನಾಗಿಯೇ ಉಳಿಯಲಿದ್ದೇನೆ ಎಂದರು.

ನಾನು ರಾಷ್ಟ್ರೀಯತೆ ಮತ್ತು ಹಿಂದುತ್ವದ ಪರವಾಗಿರುವವನೇ ಹೊರತು, ಯಾವುದೇ ಧರ್ಮದ ವಿರೋಧಿಯಲ್ಲ. ಶಿಕ್ಷಣ ಸಂಸ್ಥೆಗಳಲ್ಲಿ ಸಮವಸ್ತ್ರದ ಪರವಾಗಿ ಹಿಜಾಬ್ ವಿರುದ್ಧ ಹೋರಾಟ ನಡೆಸಿದ್ದೇನೆ. ಪರಿವಾರದ ಪರ ಕೆಲಸ ಮಾಡುವವರಿಗೆ ಬಿಜೆಪಿ ಟಿಕೆಟ್ ತಪ್ಪುತ್ತಿರುವುದು ಗಮನಕ್ಕೆ ಬಂದಿದೆ. ಕೆ.ಎಸ್.ಈಶ್ವರಪ್ಪ, ಅನಂತ ಕುಮಾರ್ ಹೆಗಡೆ, ಪ್ರತಾಪ್ ಸಿಂಹ, ನಾನು ಸೇರಿದಂತೆ ಇನ್ನೂ ಕೆಲವರಿಗೆ ಟಿಕೆಟ್ ಸಿಕ್ಕಿಲ್ಲ. ಇದಕ್ಕೆ ಕಾರಣ ಏನು ಎನ್ನುವುದನ್ನು ತಿಳಿದುಕೊಳ್ಳಬೇಕಾಗಿದೆ ಎಂದು ಹೇಳಿದರು.

ಉಡುಪಿ ವಿಧಾನಸಭಾ ಕ್ಷೇತ್ರದಿಂದ ಮೂರು ಬಾರಿ ಆಯ್ಕೆಯಾಗಿ ಕ್ಷೇತ್ರವನ್ನು ಅಭಿವೃದ್ಧಿಪಡಿಸಿದ ತೃಪ್ತಿ ನನಗಿದೆ. ರಾಷ್ಟ್ರ ಮಟ್ಟದಲ್ಲಿ ನನ್ನ ಅಭಿವೃದ್ಧಿ ಕಾರ್ಯಗಳು ಗಮನ ಸೆಳೆದಿವೆ. ಈ ಅಭಿವೃದ್ಧಿ ಕಾರ್ಯಗಳೇ ನೈರುತ್ಯ ಪದವೀಧರ ಕ್ಷೇತ್ರದಲ್ಲಿ ನನಗೆ ಗೆಲುವು ತಂದುಕೊಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಕಳೆದ ಬಾರಿಯೂ ವಿಧಾನಸಭೆ ಚುನಾವಣೆಯಲ್ಲಿ ಅತಿ ಹೆಚ್ಚು ಮತಗಳಿಂದ ಗೆಲ್ಲುವ ಎಲ್ಲಾ ಅವಕಾಶಗಳಿದ್ದರೂ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಪಕ್ಷ ಸೂಚಿಸಿದ ಅಭ್ಯರ್ಥಿಯ ಪರವಾಗಿ ಕೆಲಸ ಮಾಡಿ, ಅವರ ಗೆಲುವಿಗಾಗಿ ಶ್ರಮಿಸಿದ್ದೇನೆ ಎಂದರು.

ಹಿಂದಿನಿಂದಲೂ ಶಿಕ್ಷಣ ಕ್ಷೇತ್ರ ನನ್ನ ಆಸಕ್ತಿಯ ವಿಷಯ ಆಗಿರುವ ಕಾರಣಕ್ಕೆ ಮೊದಲ ಬಾರಿ ಶಾಸಕನಾದಾಗಲೇ 'ಸಾಧಕ ಶಿಕ್ಷಕ ಪ್ರಶಸ್ತಿ' ಆರಂಭಿಸಿ ಅಂಕಗಳ ಆಧಾರದ ಮೇಲೆ ಸಾಧನೆಗೈದ ಶಾಲೆಗಳನ್ನು ಗುರುತಿಸಿ, ನೂರಾರು ಶಿಕ್ಷಕರನ್ನು ನಗದು ಪುರಸ್ಕಾರದ ಮೂಲಕ ಗೌರವಿಸಿದ ತೃಪ್ತಿ ನನಗಿದೆ. ಅಲ್ಲದೆ, 2006ರಲ್ಲಿ ನಾನು ಆರಂಭಿಸಿದ ಯಕ್ಷ ಶಿಕ್ಷಣ ಟ್ರಸ್ಟ್ ಮೂಲಕ ಕ್ಷೇತ್ರದ ಎಲ್ಲಾ ಪ್ರೌಢಶಾಲೆಗಳಲ್ಲಿ ಯಕ್ಷ ಗಾನ ತರಬೇತಿ ಆರಂಭಿಸಿದ್ದೇನೆ. ವರ್ಷಕ್ಕೆ 1500ಕ್ಕೂ ಹೆಚ್ಚು ಜಿಲ್ಲಾ ಹಾಗೂ ಹೊರ ಜಿಲ್ಲೆಯ ಮಕ್ಕಳು ಟ್ರಸ್ಟ್ ಮೂಲಕ ಯಕ್ಷ ಗಾನ ತರಬೇತಿ ಪಡೆಯುತ್ತಿರುವುದು ನಮಗೆ ಹೆಮ್ಮೆ ಎನಿಸಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಎಂ.ಸಿ.ನಾಣಯ್ಯ, ನಾಪೋಕ್ಲುವಿನ ಅಪ್ಪಣ್ಣ, ಉಡುಪಿಯ ವಸಂತ್ ಗಿಳಿಯಾರ್, ಶರತ್‌ಶೆಟ್ಟಿ ಮತ್ತು ನಿಖಿಲ್ ನಾಯಕ್ ಹಾಜರಿದ್ದರು.

ಪೂರಕ ಉದ್ಯಮ ವಲಯ ಸೃಷ್ಟಿಗೆ ಕ್ರಮ

ನೈರುತ್ಯ ಪದವೀಧರ ಕ್ಷೇತ್ರದಿಂದ ನಾನು ಉಮೇದುವಾರಿಕೆ ಸಲ್ಲಿಸಿದ್ದು, ಪದವೀಧರರಿಗೆ ಪದವಿ ನಂತರ ಕಾಡುವ ಉದ್ಯೋಗಕ್ಕೆ ನೆಟ್‌ವರ್ಕ್ ಡಾಟಾ ಬೇಸ್‌ಗಳ ಸ್ಥಾಪನೆ, ಸರ್ಕಾರಿ ಹುದ್ದೆಗಳ ಪರೀಕ್ಷೆ ನಡೆದ ಕಾಲಮಿತಿಯಲ್ಲಿ ಫಲಿತಾಂಶಗಳ ಪ್ರಕಟ ಹಾಗೂ ಶೀಘ್ರ ನೇಮಕಾತಿಗಾಗಿ ಒತ್ತಾಯ. ಅಲ್ಲದೇ, ಪದವೀಧರರಿಗೆ ಸ್ವಉದ್ಯೋಗಕ್ಕಾಗಿ ಸಾಲ ಸೇರಿದಂತೆ ಮುಂತಾದವುಗಳ ಸರ್ಕಾರಿ ಸೌಲಭ್ಯಗಳಿಗೆ ಸಿಂಗಲ್ ವಿಂಡೋ ಸ್ಥಾಪಿಸಲಾಗುವುದು, ಪದವೀಧರರಿಗೆ ಕನಿಷ್ಠ ಒಂದು ಕೌಶಲ್ಯ ತರಬೇತಿ, ಸ್ಥಳೀಯ ಜಿಲ್ಲೆಗಳಲ್ಲಿ ಉದ್ಯಮ ಬಯಸುವ ಪದವೀಧರರಿಗೆ ಪೂರಕ ಉದ್ಯಮ ವಲಯದ ಸೃಷ್ಟಿಗೆ ಕ್ರಮಕ್ಕಾಗಿ ಸರ್ಕಾರದ ಮಟ್ಟದಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದು ಭರವಸೆ ನೀಡಿದರು.

ಮಾವು, ಹಲಸು ಮೇಳಕ್ಕೆ ಜಿಲ್ಲಾಧಿಕಾರಿ ಚಾಲನೆ



ಮಾವು ಮೇಳದಲ್ಲಿ ಜಿಲ್ಲಾಧಿಕಾರಿ ವೆಂಕಟ್‌ರಾಜಾ ಮಾವಿನ ಹಣ್ಣುಗಳನ್ನು ವೀಕ್ಷಿಸಿದರು.

ಮಡಿಕೇರಿ, ಮೇ 24–ತೋಟಗಾರಿಕೆ ಇಲಾಖೆಯ ಅಂಗ ಸಂಸ್ಥೆಯಾದ ಕೊಡಗು ಜಿಲ್ಲಾ ಹಾಪ್‌ಕಾಮ್ಸ್ ವತಿಯಿಂದ ನಗರದ ಅಂಚೆ ಕಚೇರಿ ಎದುರಿನ ಹೈಟೆಕ್ ಮಾರಾಟ ಮಳಿಗೆ ಆವರಣದಲ್ಲಿ ಮೇ 26ರವರೆಗೆ ನಡೆಯುವ ಮಾವು ಮತ್ತು ಹಲಸು ಮೇಳಕ್ಕೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಶುಕ್ರವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಜಿಲ್ಲಾಧಿಕಾರಿ, ಮಲ್ಲಿಕಾ, ಸಿಂಧೂರ, ಬಾದಾಮಿ, ರಸಪುರಿ, ತೋತಾಪುರಿ ಸೇರಿದಂತೆ ವಿವಿಧ ರೀತಿಯ ಮಾವು ಮತ್ತು ಹಲಸು ಮಾರಾಟಕ್ಕೆ ಇಡಲಾಗಿದೆ. ಮಾವು ಮತ್ತು ಹಲಸು ಪ್ರಿಯರಿಗೆ ಆರೋಗ್ಯದಾಯಕ ಹಣ್ಣುಗಳನ್ನು ಕೊಳ್ಳಲು ಸೂಕ್ತ ವ್ಯವಸ್ಥೆ ಕಲ್ಪಿಸುವುದು ಮೇಳದ ಉದ್ದೇಶವಾಗಿದೆ ಎಂದು ತಿಳಿಸಿದರು. ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಎಚ್.ಆರ್.ಯೋಗೇಶ್ ಮಾತನಾಡಿ, ಮೇಳದಲ್ಲಿ ನೈಸರ್ಗಿಕವಾಗಿ ಮಾಗಿಸಿದ ಕಾರ್ಬೈಡ್ ಮುಕ್ತ ಹಣ್ಣುಗಳನ್ನು ರೈತರಿಂದ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲಾಗುವುದು. ಮಾವು, ಹಲಸು, ಸಪೋಟ, ನಿಂಬೆ, ಸೀಬೆ ಮತ್ತಿತರ ಗಿಡಗಳನ್ನು ಮಾರಾಟಕ್ಕೆ ಇಡಲಾಗಿದೆ ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷ ಬಿದ್ದಾಟಂಡ ರಮೇಶ್ ಚಂಗಪ್ಪ, ಉಪಾಧ್ಯಕ್ಷ ಮಲ್ಲಂಡ ಮಧುದೇವಯ್ಯ, ನಿರ್ದೇಶಕರಾದ ನಾಗೇಶ್ ಕುಂದಲ್ಪಾಡಿ, ಕಾಂಗೀರ ಸತೀಶ್, ಬಿ.ಎ.ಹರೀಶ್, ಎಸ್.ಪಿ.ಪೊನ್ನಪ್ಪ, ಬೇಬಿ ಪೂವಯ್ಯ, ಲೀಲಾ ಮೇದಪ್ಪ, ಎಂ.ಮನೋಹರ್, ಪೂವಪ್ಪ ನಾಯಕ, ಉಮೇಶ್‌ರಾಜ ಅರಸ್, ಸುಧೀರ್, ಹಾಪ್‌ಕಾಮ್ಸ್ ಸಿಇಓ ರೇಷ್ಮಾ ಗಿರೀಶ್, ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಮುತ್ತಪ್ಪ ಇತರರು ಇದ್ದರು.

ಫಹೀಮ್ ತಂಡಕ್ಕೆ ಪ್ರಥಮ ಬಹುಮಾನ



ವಿರಾಜಪೇಟೆ, ಮೇ 24–ಸ್ಟುಡೆಂಟ್ಸ್ ಇಸ್ಲಾಮಿಕ್ ಆರ್ಗನೈಸೇಷನ್ ಆಫ್ ಇಂಡಿಯಾ (ಎಸ್‌ಐಓ) ವತಿಯಿಂದ ಅಸೋಸಿಯೇಷನ್ಸ್ ಮೇಕಿಂಗ್ ಅಭಿಯಾನದ ಅಂಗವಾಗಿ 15 ರಿಂದ 18 ವರ್ಷದೊಳಗಿನ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಫುಟ್‌ಬಾಲ್ ಪಂದ್ಯಾವಳಿಯಲ್ಲಿ ಫಹೀಮ್ ನೇತೃತ್ವದ ತಂಡ ಪ್ರಥಮ ಬಹುಮಾನ ಗಳಿಸಿದೆ.

ಪಟ್ಟಣದ ಬ್ರೈಟ್ ಕ್ಯಾಂಪಸ್ ಮೈದಾನದಲ್ಲಿ ನಡೆದ ಫೈನಲ್ ಪಂದ್ಯಾವಳಿಯಲ್ಲಿ ಸಫ್ವಾನ್ ನೇತೃತ್ವದ ತಂಡ ದ್ವಿತೀಯ ಸ್ಥಾನ ಗಳಿಸಿತು. ಎಸ್‌ಐಓ ರಾಜ್ಯ ಕಾರ್ಯದರ್ಶಿ ಮುಝಾಹಿರ್ ದಿಕ್ಲೂಚಿ ಬಹುಮಾನ ವಿತರಿಸಿದರು. ಜಮಾಅತೆ ಇಸ್ಲಾಮಿ ಹಿಂದ್ ಜಿಲ್ಲಾ ಸಂಚಾಲಕ ಪಿ.ಕೆ.ಅಬ್ದುಲ್ ರೆಹೆಮಾನ್, ಜಿಲ್ಲಾ ಸಮಿತಿ ಸದಸ್ಯ ಇ.ಎಂ.ಅಬ್ದುಲ್ ಖಾದರ್, ಎಸ್‌ಐಓ ಜಿಲ್ಲಾ ಹೊಣೆಗಾರರಾದ ರಿಝ್ವಾನ್, ನಿಝಾಮ್ ಉಮರ್, ದೈಹಿಕ ಶಿಕ್ಷಣ ಶಿಕ್ಷಕ ಮುಝಮ್ಮಿಲ್, ಲುಕ್ಮಾನ್ ಇದ್ದರು.

ಕೊಳಕೇರಿಯಲ್ಲಿ ಮನೆ ತಡೆಗೋಡೆ ಕುಸಿತ



ಕೊಳಕೇರಿ ಗ್ರಾಮದ ರಿತೇಶ್ ಅವರ ಮನೆಯ ತಡೆಗೋಡೆ ಕುಸಿದಿರುವುದು.

ನಾಪೋಕ್ಲು, ಮೇ 24– ನಾಪೋಕ್ಲು ಹೋಬಳಿ ವ್ಯಾಪ್ತಿಯ ಕೊಳಕೇರಿ ಗ್ರಾಮದಲ್ಲಿ ಗುರುವಾರ ರಾತ್ರಿ ಧಾರಾಕಾರ ಮಳೆ ಸುರಿದಿದ್ದರಿಂದ ಮನೆಯ ತಡೆಗೋಡೆ ಕುಸಿದು ಬಿದ್ದಿದೆ. ಗ್ರಾಮದ ರಿತೇಶ್ ಅವರ ಮನೆಯ ಮುಂದಿನ ತಡೆಗೋಡೆ ಕುಸಿದಿದ್ದು, ಇದರಿಂದ ಅಪಾರ ನಷ್ಟ ಉಂಟಾಗಿದೆ. ನಾಪೋಕ್ಲು ವ್ಯಾಪ್ತಿಯಲ್ಲಿ ಗುರುವಾರ ರಾತ್ರಿ 2 ಇಂಚಿಗೂ ಹೆಚ್ಚು ಮಳೆಯಾಗಿದೆ. ಸ್ಥಳಕ್ಕೆ ಕಂದಾಯ ಪರಿವೀಕ್ಷಕ ರವಿಕುಮಾರ್, ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಕುಲ್ಲೇಟಿರ ಹೇಮಾ ಅರುಣ್, ಸದಸ್ಯ ಕೆ.ವೈ ಅಶ್ರಫ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು.



ದೇವರಪುರ ಗ್ರಾಮದಲ್ಲಿ ಕುಂಡೆ ಹಬ್ಬ

ಗೋಣಿಕೊಪ್ಪ, ಮೇ 24–ದೇವರಪುರ ಗ್ರಾಮದ ಅಯ್ಯಪ್ಪ ದೇವಸ್ಥಾನ ಆವರಣದಲ್ಲಿ ಭಕ್ತರು ವಿಶೇಷ ವೇಷ ಭೂಷಣ ಧರಿಸಿ, ಕುಂಡೆ ಹಬ್ಬ ಆಚರಿಸಿದರು.

ವನ ದೇವಿಗಾಗಿ ಒಂದು ದಿನ ಉಪವಾಸದ ಪಟ್ಟಣಿ ಆಚರಣೆ, ಅಯ್ಯಪ್ಪ ದೇವನಿಗೆ ಕುದುರೆ, ಬೋಟೆಕಾರನಿಗೆ ಮಣ್ಣಿನಿಂದ ತಯಾರಿಸಿದ ನಾಯಿ, ಭದ್ರಕಾಳಿಗೆ ಪ್ರಸಾದ ಅರ್ಪಿಸಲಾಯಿತು. ವಿವಿಧ ವೇಷ ಭೂಷಣ ತೊಟ್ಟ ಸಾವಿರಾರು ಭಕ್ತರು, ಡೋಲು ಬಡಿದು ವನ ದೇವರಾದ ಅಯ್ಯಪ್ಪ, ಭದ್ರಕಾಳಿ ಹಾಗೂ ಬೋಟೆಕಾರ ದೇವನನ್ನು ಪ್ರಾರ್ಥಿಸಿ ಹಬ್ಬ ಆಚರಿಸಿದರು. ಹಬ್ಬ ಮುಗಿಯುವವರೆಗೆ ಪ್ರಾಣಿ ಹಿಂಸೆ ಮಾಡದಂತೆ, ಮಾಂಸ ಆಹಾರ ತ್ಯಜಿಸಿ, ಗಿಡ–ಮರ ಕಡಿಯದಂತೆ ಹಬ್ಬ ಆಚರಿಸಲಾಗುವುದು. ವೇಷಧಾರಿ ಭಕ್ತರು ಅಂಬಲಕ್ಕೆ ಆಗಮಿಸಿ ಭಂಡಾರ ಪೆಟ್ಟಿಗೆ, ಮೊಗದೊಂದಿಗೆ ಮೊದಲು ಅಯ್ಯಪ್ಪ ದೇವಸ್ಥಾನಕ್ಕೆ ಆಗಮಿಸಿದರು. ನಂತರ ಭದ್ರಕಾಳಿ ದೇವರ ಮೊಗಕ್ಕೆ ಪೂಜೆ ಸಲ್ಲಿಸಿದರು.

ದೇವರಪುರದಲ್ಲಿ ಕುಂಡೆ ಹಬ್ಬ ಅಂಗವಾಗಿ ಭಕ್ತರು ವಿಶೇಷ ವೇಷ ಭೂಷಣ ಧರಿಸಿ, ನೃತ್ಯ ಪ್ರದರ್ಶಿಸಿದರು.

ಬೆಸಗೂರಿನಲ್ಲಿ ಮಗುಚಿ ಬಿದ್ದ ಅಕ್ಕಿ ಲಾರಿ



ಮಡಿಕೇರಿ, ಮೇ 24– ಚಾಲಕನ ನಿಯಂತ್ರಣ ತಪ್ಪಿ ಅಕ್ಕಿ ಸಾಗಿಸುತ್ತಿದ್ದ ಲಾರಿ ಮಗುಚಿ ಬಿದ್ದ ಘಟನೆ ಪೊನ್ನಂಪೇಟೆ ತಾಲೂಕಿನ ಬೆಸಗೂರು ಗ್ರಾಮದಲ್ಲಿ ಶುಕ್ರವಾರ ನಡೆದಿದೆ.

ಆಂಧ್ರಪ್ರದೇಶದಿಂದ ಮೈಸೂರು, ಹುಣಸೂರು, ಪೊನ್ನಂಪೇಟೆ ಮಾರ್ಗವಾಗಿ ಕೇರಳಕ್ಕೆ 16 ಚಕ್ರದ ಲಾರಿಯಲ್ಲಿ ಅಕ್ಕಿ ಸಾಗಿಸಲಾಗುತ್ತಿತ್ತು. ಬೆಸಗೂರು ಗ್ರಾಮದ ಕಿರಿದಾದ ರಸ್ತೆಯಲ್ಲಿ ಎದುರಿಗೆ ಆಟೋ ಬಂದಿದೆ. ಈ ವೇಳೆ ಆಟೋಗೆ ದಾರಿ ಬಿಡಲು ಹೋಗಿ ಚಾಲಕನ ನಿಯಂತ್ರಣ ತಪ್ಪಿ ಲಾರಿ ಪೊನ್ನಿಮಾಡ ಪೂಣಚ್ಚ ಅವರ ತೋಟದ ಬೇಲಿ ಮೇಲೆ ಮಗುಚಿ ಬಿದ್ದಿದೆ. ಅದೃಷ್ಟವಶಾತ್ ಲಾರಿ ಚಾಲಕ ಮತ್ತು ಕ್ಲೀನರ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಲಾರಿಯಲ್ಲಿದ್ದ 36 ಟನ್ ಅಕ್ಕಿ ಮೂಟೆಗಳನ್ನು ಬೇರೊಂದು ಲಾರಿಯಲ್ಲಿ ತುಂಬಿ ಕೇರಳಕ್ಕೆ ಕಳುಹಿಸಲಾಯಿತು.

ಮಾನಸಿಕ ರೋಗಿಗಳಿಗೆ ಪ್ರೀತಿ, ವಿಶ್ವಾಸ ಅಗತ್ಯ

ಜಿಲ್ಲಾ ನ್ಯಾಯಾಧೀಶೆ ಬಿ.ಎಸ್.ಭಾರತಿ ಸಲಹೆ



ಚಾ.ನಗರದ ಹಳೇ ಕೆಡಿಪಿ ಸಭಾಂಗಣದಲ್ಲಿ ನಡೆದ ವಿಶ್ವ ಸ್ಕೀಜೋಫ್ರೀನಿಯಾ ದಿನಾಚರಣೆಯನ್ನು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಅಧ್ಯಕ್ಷೆ ಬಿ.ಎಎಸ್.ಭಾರತಿ ಉದ್ಘಾಟಿಸಿದರು.

ಚಾಮರಾಜನಗರ, ಮೇ 24– ಮಾನಸಿಕ ರೋಗಿಗಳಿಗೆ ಮನೋಚೈತನ್ಯ ತುಂಬಿ ಸಮಾಜಮುಖಿಯಾಗಿಸಲು ಸಮುದಾಯ, ಕುಟುಂಬದ ಪ್ರೀತಿ, ವಿಶ್ವಾಸ, ಆರೈಕೆ ಅವಶ್ಯವಾಗಿದೆ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಅಧ್ಯಕ್ಷೆ ಬಿ.ಎಎಸ್.ಭಾರತಿ ಸಲಹೆ ನೀಡಿದರು.

ನಗರದ ಹಳೇ ಕೆಡಿಪಿ ಸಭಾಂಗಣದಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ ಹಾಗೂ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 'ವಿಶ್ವ ಸ್ಕೀಜೋಫ್ರೀನಿಯಾ (ಚಿತ್ತ ವಿಕಲತೆ) ದಿನಾಚರಣೆ'ಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಭ್ರಮೆ, ಭ್ರಾಂತಿಗೆ ಒಳಗಾಗಿದ್ದ ಮಾನಸಿಕ ರೋಗಿಗಳನ್ನು ಹಿಂದೆ ಸಮಾಜಕ್ಕೆ ಕಳಂಕವೆಂದು ಭಾವಿಸಿ ಮನೆಯಲ್ಲಿ ಕೂಡಿಹಾಕುವ ಪರಿಸ್ಥಿತಿ ಇತ್ತು. ಈಗ ಎಲ್ಲವೂ ಬದಲಾಗಿದೆ. ರೋಗಿಗಳು ಸಂಪೂರ್ಣವಾಗಿ ಗುಣಮುಖರಾಗಲು ಕೇವಲ ಆರು ತಿಂಗಳು ಉತ್ತಮ ಔಷಧ ಬಳಸಿದರೆ ಸಾಕು. ಆಶಾ ಕಾರ್ಯಕರ್ತೆಯರು ಮನೆಗಳಿಗೆ ಭೇಟಿ ನೀಡಿ, ರೋಗಿಗಳನ್ನು ಗುರುತಿಸಿ ಹತ್ತಿರದ ಆರೋಗ್ಯ ಕೇಂದ್ರಗಳಲ್ಲಿ ಅಗತ್ಯ ಚಿಕಿತ್ಸೆ ಕೊಡಿಸಲು ನೆರವಾಗಬೇಕು ಎಂದು ತಿಳಿಸಿದರು.

ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿ ಡಾ.ಚಂದ್ರಶೇಖರ್ ಮಾತನಾಡಿ, ಮಾನಸಿಕ ಆರೋಗ್ಯ ಪ್ರತಿಯೊಬ್ಬರಿಗೂ ಮುಖ್ಯ. ಸ್ಕೀಜೋಫ್ರೀನಿಯಾ ಮೆದುಳಿನ ಕಾಯಿಲೆಯಾಗಿದ್ದು, ಇದು ವ್ಯಕ್ತಿಯ ಯೋಚನೆ, ವರ್ತನೆ ಹಾಗೂ ನಡವಳಿಕೆಯ ಮೇಲೆ ಗಂಭೀರ ಪರಿಣಾಮ ಬೀರಿ ಮಾನಸಿಕ ಅಸ್ವಸ್ಥತೆ ಉಂಟು ಮಾಡುತ್ತದೆ. ಕಾಯಿಲೆ ಬಗ್ಗೆ ಅರಿವು ಮೂಡಿಸಲು ಪ್ರತಿವರ್ಷ ಮೇ 24ರಂದು ವಿಶ್ವ ಸ್ಕೀಜೋಫ್ರೀನಿಯಾ ದಿನವನ್ನು ಹಮ್ಮಿಕೊಳ್ಳಲಾಗುತ್ತದೆ. ಮಾನಸಿಕ ರೋಗಿಗಳ ಉಚಿತ ಚಿಕಿತ್ಸೆಗಾಗಿ ಎಲ್ಲಾ ತಾಲೂಕು ಆಸ್ಪತ್ರೆಗಳಲ್ಲಿ ಮನೋ ಚೈತನ್ಯ ಕ್ಲಿನಿಕ್ ತೆರೆಯಲಾಗಿದೆ ಎಂದರು.

ಜಿಲ್ಲಾಸ್ಪತ್ರೆಯ ಮನೋವೈದ್ಯ ಡಾ.ರಾಜೇಶ್ ಮಾತನಾಡಿ, ಸ್ಕೀಜೋಫ್ರೀನಿಯಾ ವ್ಯಕ್ತಿಯು ಪಂಚೇಂದ್ರಿಯಗಳ ಮೂಲಕ ಸುತ್ತಲಿನ ಪರಿಸರವನ್ನು ಅರ್ಥ ಮಾಡಿಕೊಳ್ಳುವ ಸಂವೇದನೆಯಲ್ಲಿ ಏರುಪೇರಾಗಲಿದೆ. ಅಸ್ಪಷ್ಟ ಆಲೋಚನೆಗಳು, ಭಾವನೆಗಳು, ಅಸಹಜ, ವಿಚಿತ್ರ ಅನುಭವಗಳನ್ನು ವ್ಯಕ್ತಪಡಿಸುವಿಕೆ ಹಾಗೂ ಸಂಶಯ ಪ್ರವೃತ್ತಿ ಈ ಕಾಯಿಲೆಯ ಲಕ್ಷಣಗಳಾಗಿವೆ. ಉತ್ತಮ ಚಿಕಿತ್ಸೆಯಿಂದ ಕಾಯಿಲೆಯನ್ನು ಸಂಪೂರ್ಣವಾಗಿ ಗುಣಪಡಿಸಬಹುದಾಗಿದೆ ಎಂದು ತಿಳಿಸಿದರು.

ಅಬಕಾರಿ ಉಪ ಆಯುಕ್ತ ನಾಗಶಯನ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಚಿದಂಬರ ಮಾತನಾಡಿದರು. ಕುಟುಂಬ ಕಲ್ಯಾಣಾಧಿಕಾರಿ ಡಾ.ಅಂಕಪ್ಪ ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ರವಿಕುಮಾರ್, ಆರೋಗ್ಯ ಮತ್ತು ಶಿಕ್ಷಣಾಧಿಕಾರಿ ದೊರೆಸ್ವಾಮಿ ನಾಯಕ್, ತಾಲೂಕು ಆರೋಗ್ಯಾಧಿಕಾರಿ ಡಾ.ಶ್ರೀನಿವಾಸ್, ಜಿಲ್ಲಾ ಸರ್ಕಾರಿ ನರ್ಸಿಂಗ್ ಶಾಲೆಯ ಪ್ರಾಂಶುಪಾಲ ಖುದರತ್, ಆಶಾ ಕಾರ್ಯಕರ್ತೆಯರು, ನರ್ಸಿಂಗ್ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಇದ್ದರು.

ಜಿಲ್ಲೆಯಲ್ಲಿ ಮಳೆಗೆ ಅಪಾರ ಹಾನಿ

• ಅಮಚವಾಡಿಯಲ್ಲಿ ಮನೆ ಕುಸಿತ • ದೊಡ್ಡಬೆಟ್ಟ ಗ್ರಾಮದಲ್ಲಿ ಎಮ್ಮೆ ಸಾವು



ಚಾಮರಾಜನಗರ ತಾಲೂಕಿನ ಅಮಚವಾಡಿ ಗ್ರಾಮದ ಮನೆ ಛಾವಣಿ ಕುಸಿದಿರುವುದು.



ಚಾಮರಾಜನಗರದ ಬಿ.ರಾಚಯ್ಯ ಜೋಡಿ ರಸ್ತೆ ಜಲಾವೃತಗೊಂಡಿರುವುದು.

ಚಾಮರಾಜನಗರ, ಮೇ 24–ಜಿಲ್ಲೆಯಲ್ಲಿ ಮಳೆ ಆರ್ಭಟ ಮುಂದುವರೆದಿದ್ದು, ಗುರುವಾರ ರಾತ್ರಿ ಹಾಗೂ ಶುಕ್ರವಾರ ಸಂಜೆ ಸುರಿದ ಭಾರಿ ಮಳೆಗೆ ಅಪಾರ ಪ್ರಮಾಣದ ಹಾನಿ ಸಂಭವಿಸಿದೆ.

ಚಾಮರಾಜನಗರ, ಕೊಳ್ಳೇಗಾಲ, ಯಳಂದೂರು, ಗುಂಡ್ಲುಪೇಟೆ, ಹನೂರು ತಾಲೂಕು ವ್ಯಾಪ್ತಿಯಲ್ಲಿ ಧಾರಾಕಾರ ಮಳೆಯಾಗಿದ್ದು, ಸಾಕಷ್ಟು ಹಾನಿ ಸಂಭವಿಸಿರುವ ಬಗ್ಗೆ ವರದಿಯಾಗಿದೆ. ಹಲವು ದಿನಗಳಿಂದ ಬಿಡುವಿಲ್ಲದೆ ಜಿಲ್ಲಾದ್ಯಂತ ಮಳೆ ಸುರಿಯುತ್ತಿದೆ. ಈ ನಡುವೆ ಗುರುವಾರ ಹಾಗೂ ಶುಕ್ರವಾರವೂ ಬಿರುಸಿನ ಮಳೆಯಾಗಿದೆ. ಇದರಿಂದ ಚಾಮರಾಜನಗರ ತಾಲೂಕಿನ ಅಮಚವಾಡಿ ಗ್ರಾಮದ ಲಕ್ಷ್ಮೀ ಅವರ ಮನೆ ಕುಸಿದಿದ್ದು, ಮನೆಯಲ್ಲಿದ್ದ ಸಾಮಗ್ರಿಗಳಿಗೆ ಹಾನಿಯಾಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಅಲ್ಲದೇ, ಹಲವೆಡೆ ಮನೆಗಳ ಛಾವಣಿಗೆ ಹಾನಿಯಾಗಿದೆ.

ಕೊಳ್ಳೇಗಾಲ ತಾಲೂಕಿನ ಹೊಸಹಂಪಾಪುರ ಗ್ರಾಮದಲ್ಲಿ ಮನೆ ಕುಸಿದಿದ್ದು, ಮನೆಯೊಳಗಿದ್ದ ವೃದ್ಧ ದಂಪತಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅಲ್ಲದೇ, ಹನೂರು ತಾಲೂಕಿನ ದೊಡ್ಡಬೆಟ್ಟ ಗ್ರಾಮದಲ್ಲಿ ಕೊಟ್ಟಿಗೆ ಕುಸಿದು ಎಮ್ಮೆ ಮೃತಪಟ್ಟಿದೆ. ಉಳಿದಂತೆ ರೈತರು ಜಮೀನುಗಳಲ್ಲಿ ಬಿತ್ತನೆ ಮಾಡಿದ್ದ ಅನೇಕ ಬೆಳೆಗಳು ನೀರಿನಲ್ಲಿ ಕೊಚ್ಚಿ ಹೋಗಿದ್ದು, ಇದರಿಂದ ಕೃಷಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಶಾಲಾ ಮೈದಾನ, ಜಮೀನುಗಳು ಜಲಾವೃತಗೊಂಡು ಸಾಕಷ್ಟು ಅವಾಂತರ ಸೃಷ್ಟಿಸಿದೆ.

ಬಂಡೀಪುರ ವ್ಯಾಪ್ತಿ ಸುರಿದ ಭಾರಿ ಮಳೆಗೆ ಗುಂಡ್ಲುಪೇಟೆ ತಾಲೂಕಿನ ಬೇರಂಬಾಡಿ ಕೆರೆ ಕೋಡಿ ಬಿದ್ದಿದೆ. ಪೂರ್ವ ಮುಂಗಾರು ಮಳೆಗೆ ಕೆರೆ ಕೋಡಿ ಬಿದ್ದಿರುವುದು ಈ ಭಾಗದ ಜನರು, ರೈತರಲ್ಲಿ ಸಂತಸ ಮೂಡಿಸಿದೆ. ಅಲ್ಲದೇ ರಾತ್ರಿಯಿಡೀ ಸುರಿದ ಮಳೆಗೆ ಜಿಲ್ಲೆಯ ಹಲವು ಕಡೆಗಳಲ್ಲಿ ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಸಿದೆ. ಇನ್ನೂ ಕೆಲವೆಡೆ ಮರಗಳು, ವಿದ್ಯುತ್ ಕಂಬಗಳು ಧರೆಗುರುಳಿವೆ.

ಗ್ರಾಮೀಣ ಪ್ರದೇಶಗಳಲ್ಲಿನ ಕೆರೆ, ಕಟ್ಟೆಗಳು ಭರ್ತಿಯಾಗಿವೆ. ರಸ್ತೆಗಳು ಕೆಸರುಮಯವಾಗಿ ಮಾರ್ಪಾಡು ಹೊಂದಿವೆ. ಧಾರಾಕಾರ ಮಳೆಗೆ ಜಿಲ್ಲೆಯ ಸುವರ್ಣಾವತಿ, ಚಿಕ್ಕಹೊಳೆ, ಗುಂಡಾಲ್ ಜಲಾಶಯಗಳಿಗೆ ಹೆಚ್ಚಿನ ನೀರು ಹರಿದು ಬರುತ್ತಿದ್ದು, ಅಂತರ್ಜಲ ವೃದ್ಧಿಯಾಗುತ್ತಿದೆ.

ಅರಣ್ಯ ಪ್ರದೇಶಗಳಲ್ಲೂ ಉತ್ತಮ ಮಳೆ

ಜಿಲ್ಲೆಯ ಬಂಡೀಪುರ, ಬಿಆರ್‌ಟಿ, ಮಲೆಮಹದೇಶ್ವರ ಬೆಟ್ಟ ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಗಿದ್ದು, ನೀರಿಲ್ಲದೇ ಭಣಗುಡುತ್ತಿದ್ದ ಕೆರೆ, ಕಟ್ಟೆಗಳು ತುಂಬುವ ಹಂತದಲ್ಲಿವೆ. ಬರಗಾಲದಿಂದ ನೀರು, ಮೇವಿಗೆ ತತ್ತರಿಸಿ ಹೋಗಿದ್ದ ಕಾಡುಪ್ರಾಣಿಗಳಿಗೆ ಮಳೆಯಿಂದ ಅನುಕೂಲವಾಗಿದೆ. ಕಳೆದ ಕೆಲ ದಿನಗಳಿಂದಲೂ ಸುರಿಯುತ್ತಿರುವ ಮಳೆಯಿಂದ ಅರಣ್ಯದಲ್ಲಿ ಮೇವು ಚಿಗುರ ತೊಡಗಿದ್ದು, ಪ್ರಾಣಿಗಳಿಗೆ ಉದ್ಭವಿಸಿದ್ದ ನೀರು, ಮೇವಿನ ಕೊರತೆ ನೀಗಿದೆ.

ದ್ವಿಚಕ್ರ ಸವಾರರ ಪರದಾಟ: ನಾಲ್ಕೈದು ದಿನಗಳಿಂದ ಮಧ್ಯಾಹ್ನದ ವೇಳೆಗೆ ಬಿರುಸಿನ ಮಳೆಯಾಗುತ್ತಿರುವುದರಿಂದ ದ್ವಿಚಕ್ರ ವಾಹನ ಸವಾರರು ಪರದಾಡುವಂತಾಗಿದೆ. ಅಲ್ಲದೇ, ರಸ್ತೆಯಲ್ಲಿನ ಹಳ್ಳಕೊಳ್ಳಗಳಲ್ಲಿ ನೀರು ನಿಂತ ಸಂಚಾರ ದುಸ್ತರವಾಗಿದೆ.

ಕೆಜೆಪಿ ಅಭ್ಯರ್ಥಿ ಗೆಲ್ಲಿಸಲು ಮನವಿ



ಸುದ್ದಿಗೋಷ್ಠಿಯಲ್ಲಿ ಕೆಜೆಪಿ ರಾಜ್ಯ ಕಾರ್ಯಾಧ್ಯಕ್ಷ ಕದಂಬ ನಾ.ಅಂಬರೀಶ್ ಮಾತನಾಡಿದರು.

ಚಾಮರಾಜನಗರ, ಮೇ 24– ವಿಧಾನಪರಿಷತ್‌ನ ದಕ್ಷಿಣ ಶಿಕ್ಷಕರ ಕ್ಷೇತ್ರದ ಕರ್ನಾಟಕ ಜನತಾ ಪಕ್ಷದ ಅಭ್ಯರ್ಥಿ ಎಂ.ನಾಗೇಂದ್ರ ಬಾಬು ಅವರಿಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡಿ ಗೆಲ್ಲಿಸಬೇಕು ಎಂದು ಪಕ್ಷದ ರಾಜ್ಯ ಕಾರ್ಯಾಧ್ಯಕ್ಷ ಕದಂಬ ನಾ.ಅಂಬರೀಶ್ ಮನವಿ ಮಾಡಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಜೆಪಿ ಅಭ್ಯರ್ಥಿ ನಾಗೇಂದ್ರಬಾಬು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಪರಾಭವಗೊಂಡಿದ್ದರು. ಬೆಂಗಳೂರಿನ ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಪ್ರೌಢಶಾಲಾ ಶಿಕ್ಷಕ, ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ಪಕ್ಷ ಅವರನ್ನು ಕಣಕ್ಕಿಳಿಸಿದೆ. ಕ್ಷೇತ್ರದಲ್ಲಿ ಅವರಿಗೆ ಉತ್ತಮ ವಾತಾವರಣ ವ್ಯಕ್ತವಾಗುತ್ತಿದೆ ಎಂದರು.

ಶಿಕ್ಷಕರ ಸೇವೆಗೆ ಅವಕಾಶ ಕೊಡಿ: ಕೆಜೆಪಿ ಅಭ್ಯರ್ಥಿ ಎಂ.ನಾಗೇಂದ್ರ ಬಾಬು ಮಾತನಾಡಿ, ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ಜೂ.3ರಂದು ನಡೆಯಲಿರುವ ಚುನಾವಣೆಯಲ್ಲಿ ಪ್ರಥಮ ಪ್ರಾಶಸ್ತ್ಯ ಮತ ನೀಡುವ ಮೂಲಕ ಶಿಕ್ಷಕರು ತಮ್ಮ ಸೇವೆ ಮಾಡಲು ನನಗೊಂದು ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ನಂಜುಂಡನಾಯಕ, ಶಂಭುನಾಯಕ, ಬಿ.ಪ್ರಭುಸ್ವಾಮಿ ಹಾಜರಿದ್ದರು.

ಆಸ್ಪತ್ರೆಯಲ್ಲಿ ಅಪರಿಚಿತ ಸಾವು



ಚಾಮರಾಜನಗರ, ಮೇ 24–ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಅಸ್ವಸ್ಥನಾಗಿದ್ದ ಅಪರಿಚಿತ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ.

ಬಸ್ ನಿಲ್ದಾಣದ ಬಳಿ ಅಸ್ವಸ್ಥನಾಗಿ ಬಿದ್ದಿದ್ದ ಸುಮಾರು 30 ರಿಂದ 40 ವರ್ಷದ ಅಪರಿಚಿತನನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ.

ಚಹರೆ: ಮೃತ ವ್ಯಕ್ತಿ 5.4 ಅಡಿ ಎತ್ತರವಿದ್ದು, ಎಣ್ಣೆಗೆಂಪು ಬಣ್ಣ ಹೊಂದಿದ್ದು, ಗಡ್ಡ, ಮೀಸೆ ಬಿಟ್ಟಿರುತ್ತಾನೆ. ಎದೆಯ ಎಡಭಾಗದಲ್ಲಿ ಕಪ್ಪು ಕಾರಳ್ಳು ಗುರುತು ಇದೆ. ನೀಲಿ ಬಣ್ಣದ ತುಂಬು ತೋಳಿನ ಅಂಗಿ ಮತ್ತು ಮಾಸಲು ಬಣ್ಣದ ಪ್ಯಾಂಟ್ ಧರಿಸಿದ್ದಾನೆ. ವಾರಸುದಾರರು ಇದ್ದಲ್ಲಿ ಚಾಮರಾಜನಗರ ಪೊಲೀಸ್ ಠಾಣೆ ಸಂಪರ್ಕಿಸಬಹುದು.


ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಮೇ 24–ಸೆಸ್ಕ್‌ನ ದೊಡ್ಡರಾಯಪೇಟೆ, ಪಣ್ಯದಹುಂಡಿ ವಿದ್ಯುತ್ ಉಪಕೇಂದ್ರದ ಫೀಡರ್‌ಗಳಲ್ಲಿ ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮೇ 26ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ಚಾಮರಾಜನಗರ ಸೇರಿದಂತೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.



ಸೋಮವಾರಪೇಟೆ, ಮೂಡ್ಲುಪುರ, ಗಾಳೀಪುರ, ಅಂಬೇಡ್ಕರ್ ಬಡಾವಣೆ, ಸತ್ತಿ ರಸ್ತೆ, ಯಡಪುರ (ಜಿಲ್ಲಾಸ್ಪತ್ರೆ), ಮಲ್ಲಯ್ಯನಪುರ, ವರದರಾಜಪುರ, ಕೆಹೆಚ್‌ಬಿ ಕಾಲೋನಿ, ರೈಲ್ವೆ ಬಡಾವಣೆ, ಉಪ್ಪಾರ ಬೀದಿ, ನಂಜನಗೂಡು ರಸ್ತೆ, ಪೊಲೀಸ್ ಕ್ವಾರ್ಟರ್ಸ್, ಜಿಲ್ಲಾಧಿಕಾರಿ ಕಚೇರಿ, ಭ್ರಮರಾಂಭ ಬಡಾವಣೆ, ರಾಮಸಮುದ್ರ, ಕರಿನಂಜನಪುರ, ಶಂಕರಪುರ, ಬಿ.ರಾಚಯ್ಯ ಜೋಡಿರಸ್ತೆ, ಕೋರ್ಟ್ ರಸ್ತೆ ಮತ್ತು ಮಾದಾಪುರ, ಮಂಗಲ, ಕಾಡಹಳ್ಳಿ, ಮಸಗಾಪುರ, ಕಿರಗಸೂರು, ಹಂಡ್ರಕಳ್ಳಿ ಮೋಳೆ, ಮಂಗಲ ಹೊಸೂರು, ಕಣ್ಣೇಗಾಲ, ಸಿಂಗನಪುರ, ಭೋಗಾಪುರ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಚಾಮರಾಜನಗರ ಉಪವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮದ್ದೇವಲ ಮಹರ್ಷಿ ಜಯಂತಿ...



ಕೊಳ್ಳೇಗಾಲದಲ್ಲಿ ದೇವಾಂಗ ಸಮುದಾಯದವರು ಮದ್ದೇವಲ ಮಹರ್ಷಿ ಜಯಂತಿ ಆಚರಿಸಿದರು. ದೇವಾಂಗಪೇಟೆ ಮುಖಂಡರಾದ ಚಿಂತು ಪರಮೇಶ್, ಸುರೇಶ್.ಕೆ.ಎನ್, ಶಿವಕುಮಾರ್. ಪಿ.ಎನ್.ಲಕ್ಷ್ಮಣ್, ನಾಗರಾಜು, ನಾರಾಯಣಸ್ವಾಮಿ, ಮಹದೇವ, ಡಿ.ಜಿ.ಸುರೇಶ್, ಶಾಂತಮೂರ್ತಿ, ಚೌಡೇಶ್ವರಿ ಕಲ್ಯಾಣ ಮಂಟಪದ ಶ್ರೀನಿವಾಸ್, ರಾಜರಾಜೇಶ್ವರಿ ಕಲ್ಯಾಣ ಮಂಟಪದ ಅಧ್ಯಕ್ಷ ಮಂಜುನಾಥ್, ನಿರಂಜನ ರವಿ, ಯುವ ಮುಖಂಡ ಎನ್.ಗಿರೀಶ್ ಬಾಬು, ಕಿರಣ್, ರೋಹಿತ್, ಓಕೆ ನಾಗೇಂದ್ರ, ಜಿ.ಎಸ್.ನಾಗೇಂದ್ರ, ಷಣ್ಮುಗ ಸಜ್ಜಾ, ಭಾಸ್ಕರ್, ಕಾರ್ತಿಕ್ ಇದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

AL-KABIR ENGLISH SCHOOL
S.S. Nagar, Bannimantap, Mysore-570015
TEACHERS REQUIRED
1) NST / Montessori Trained
2) PUC, D.Ed.
3) B.A., B.Ed. (English, Social and Hindi)
4) B.Sc., B.Ed. (PSM and CBZ)
MOB: 9972166786
(Timings: 10 am to 1 pm)

ಭೂಮಿ ಮಾರಾಟಕ್ಕಿದೆ
3.3/4 ಗುಂಟೆ ಸರ್ವೆ ನಂ. 86/11 ಎಂ.ಶೆಟ್ಟಿಹಳ್ಳಿ ದಾಖಲೆ ಮೈಸೂರು–ತುಮಕೂರು ರಾಷ್ಟ್ರೀಯ ಹೆದ್ದಾರಿ ಹಾಗೂ ಮಾಣಿಕ್ಯನಹಳ್ಳಿ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಗೃಹ ಮತ್ತು ವಾಣಿಜ್ಯ ಕಟ್ಟಡದ ಬಳಕೆಗೆ ಉಪಯೋಗಿಸಬಹುದು.
ಸ್ಥಳ: ಮಾಣಿಕ್ಯನಹಳ್ಳಿ ಬಸ್ ನಿಲ್ದಾಣದ ಪಕ್ಕ ಮೇಲ್ಕೋಟೆ ಹೋಬಳಿ, ಪಾಂಡವಪುರ ತಾ. ಮಂಡ್ಯ ಜಿಲ್ಲೆ.
9740285064

HOUSE FOR SALE
ಮನೆ ಮಾರಾಟಕ್ಕಿದೆ
30x40 ಅಳತೆಯಲ್ಲಿ ನಿರ್ಮಿಸಿರುವ ಸುಂದರವಾದ ಮನೆ ಚಾಮುಂಡೇಶ್ವರಿ ರೈಲ್ವೆ ಲೇಔಟ್ ಕೆ.ಆರ್.ಎಸ್. ಮುಖ್ಯರಸ್ತೆ (GSSS Engg. College ಹತ್ತಿರ) ಮಾರಾಟಕ್ಕಿದೆ
9482746287
9845199932

ಮೂಡಾ ಅಪ್ರೂವ್ಡ್
30X40
ಸೈಟ್ ಮಾರಾಟಕ್ಕಿದೆ
ನಿತ್ಯಾನಂದಸಾಗರ ಹುಯಿಲಾಳು ಮೈಸೂರು
8217851695

ಉತ್ತಮ ಗುಣಮಟ್ಟದ ರೇಷ್ಮೆ V1 ಹಿಪ್ಪುನೇರಳೆ ಸಸಿಗಳು ಮಾರಾಟಕ್ಕಿದೆ.
ಸಂಪರ್ಕಿಸಿ: ಗಿರೀಶ್
Mob: 9743221782
ತುಂಬಲ ಗ್ರಾಮ, ಟಿ.ನರಸೀಪುರ ತಾ||

RENT
3 BHK house is available for rent in 4th Cross, 1st Floor, Krishnamurthypuram main Road all the facilities are available.
Commercial space 30x50 around 15 sq.feet available for rent in Kuvempunagar near RMP Quarters for tuition, office purpose, call centre. Kindly call
8951012006, 9880216955

ಮನೆ ಭೋಗ್ಯಕ್ಕಿದೆ
209, Ist Floor
Single BED ROOM
50 Feet Road
17ನೇ ಕ್ರಾಸ್, 4ನೇ ಮುಖ್ಯರಸ್ತೆ, ವಿದ್ಯಾರಣ್ಯಪುರಂ, ಮೈಸೂರು
8317318563

ಸೈಟು ಮಾರಾಟಕ್ಕಿದೆ
30x40 ದಟ್ಟಗಳ್ಳಿ ಕಮರ್ಷಿಯಲ್ ಸೈಟು
20x30
ಯುನಿವರ್ಸಿಟಿ ಬಡಾವಣೆ
9901676619
9741076619

MUDA APPROVED
30X40 ಸೈಟು
@ Rs. 18 ಲಕ್ಷ
ಬ್ಯಾಂಕ್ ಲೋನ್ ಲಭ್ಯ
ರಿಂಗ್ ರೋಡ್ ನಿಂದ 5 KMS
ಚಾಮುಂಡಿಬೆಟ್ಟದ ಹಿಂಭಾಗ
9538583377

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ Full Time/Part time ಹೆಸರಾಂತ MNC ಕಂಪನಿ ಆಫೀಸ್ ಕೆಲಸಕ್ಕೆ (Receptionist, Data Entry account ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ
Salary + OT (Food and Room Free) 18800/- 68000/-
7353049700
7795704282

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿ ಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿ, ವೈದ್ಯಕೀಯ ಸೌಲಭ್ಯದೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297 | 9591557126

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಬೇಕಾಗಿದ್ದಾರೆ
ರಾಮಕೃಷ್ಣನಗರ 'ಹೆಚ್' ಬ್ಲಾಕ್‌ನ ಮನೆಯೊಂದಕ್ಕೆ ಅಡುಗೆ ಮಾಡುವ (Veg-Non Veg) ಗಂಡಸರು ಬೇಕಾಗಿದ್ದಾರೆ.
9986782353/7795214655

WANTED
COMPUTER TYPIST (Male / Female) FOR ADVOCATE OFFICE
Qualification: Typing - English & Kannada (Kan - Nudi / Baraha) in M.S. Word & Excel / Page Maker 9.30 am to 2 pm. Sunday: 10.30 to 3 pm. Salary: 10,000/- per month. For evening: (Male only). 6.30 pm to 11.30 pm. Salary: Rs. 10,000/- per month.
7349337469, 9448525072

ನಿವೇಶನಗಳು ಮಾರಾಟಕ್ಕಿವೆ
Govt. ಹೈಸ್ಕೂಲ್ ಮತ್ತು ಕಾಲೇಜು ಹತ್ತಿರ ಇಲವಾಲ ನಂತರ. ಅಳತೆಗಳು (30x40) ಬ್ಯಾಂಕ್ ಲೋನ್ ದೊರೆಯುತ್ತದೆ.
9880774395

ಪ್ರಣತಿ ವಿದ್ಯಾಸಂಸ್ಥೆ
ಕ್ಯಾತನಹಳ್ಳಿ ಹೆಚ್.ಡಿ.ಕೋಟೆ ತಾಲ್ಲೂಕು
ಶಿಕ್ಷಕರು ಬೇಕಾಗಿದ್ದಾರೆ
NST, NTT, PUC, DEd ಹಾಗೂ BA, BSc, B.Ed
9113269611
9964253209

ಬೇಕಾಗಿದ್ದಾರೆ
ಕರ್ಟನ್ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವಿ ಕೆಲಸಗಾರರು ಬೇಕಾಗಿದ್ದಾರೆ.
ಸ್ಥಳ: ವಿ. ವಿ. ಮೊಹಲ್ಲಾ, ಮೈಸೂರು
9448750455

ಬೇಕಾಗಿದ್ದಾರೆ
ಸಪ್ಲೈಯರ್, ಕೌಂಟರ್ ಮತ್ತು ಕ್ಯಾಪ್ಟನ್ ಕೆಲಸಗಳಿಗೆ ಬೇಕಾಗಿದ್ದಾರೆ. ಆಸಕ್ತರು ನೇರವಾಗಿ ಆಧಾರ್ ಪ್ರತಿಯೊಡನೆ ಸಂಪರ್ಕಿಸಿ: ಗೋಪಾಲಕೃಷ್ಣ / ಜಗದೀಶ್ ಹೋಟೆಲ್ ವಿಷ್ಣು ಭವನ್ ಭೀಮಾ ಜ್ಯುವೆಲ್ಸ್ ಕೆಳಗೆ ಬಿ.ಎನ್. ರಸ್ತೆ ಬಸ್ ನಿಲ್ದಾಣದ ಎದುರು, ಮೈಸೂರು

House for Sale
Sirrampura
40x50
Owner meeting
Call: Ravi Ramesh
Mob: 98861 83629

Sites for Sale
'Balaji Siri'
30X40, 30X50
Premium plots at T. Narasipura Main Road, attached to National Highway
Ready for Registration
Call : 8123647464

DTCP SITES FOR SALE
DTCP Sites
With RERA
Near Jayapura, H.D. Kote Road, Mysore.
9590491194, 9606783264

ಕೆಲಸಕ್ಕೆ ಬೇಕಾಗಿದ್ದಾರೆ
ಘನತ್ಯಾಜ್ಯ ನಿರ್ವಹಣಾ ಘಟಕದಲ್ಲಿ ಕಾರ್ಯನಿರ್ವಹಿಸಲು ಕೆಲಸಗಾರರು ಬೇಕಾಗಿದ್ದಾರೆ. ವೇತನದೊಂದಿಗೆ ಇ.ಎಸ್.ಐ ಮತ್ತು ಪಿ.ಎಫ್ ಸೌಲಭ್ಯ ನೀಡಲಾಗುವುದು.
ಸ್ಥಳ: ಶೂನ್ಯ ಘನತ್ಯಾಜ್ಯ ನಿರ್ವಹಣಾ ಘಟಕ, ಹಳೆ ಕೆಸರೆ, ಮೈಸೂರು
9743233073
7899255200

ಮುಡಾ ಅಪ್ರೂವ್ಡ್ ಸೈಟ್ ಮಾರಾಟಕ್ಕಿದೆ
ಬ್ರಾಹ್ಮಿನ್ ಲೇಔಟ್ A ಬ್ಲಾಕ್ 60 ಅಡಿ ರಸ್ತೆಗೆ ಒಂದೇ ಸೈಟ್‌ನಲ್ಲಿ 30x40, 30x24 ಹಾಗೂ 10x10- 5 ಅಂಗಡಿ ಮಳಿಗೆಗೆ ಸ್ಥಳಾವಕಾಶವುಳ್ಳ ಸೈಟ್ ಮಾರಾಟಕ್ಕಿದೆ. ಒಟ್ಟು ವಿಸ್ತೀರ್ಣ 2900 ಸ್ಕ್ವೇರ್ ಫೀಟ್ ಚ.ಅ.ಗೆ 1850
8618644886
9880280299

ಬೋಳು ತಲೆಯ ಸಮಸ್ಯೆಯೇ?



ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8861401315

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 7204494854

ಬಿಲ್ಡಿಂಗ್ ಮೆಟೀರಿಯಲ್ಸ್
ನಮ್ಮಲ್ಲಿ ಉತ್ತಮವಾದ ಮಣ್ಣಿನ ಇಟ್ಟಿಗೆ ಮತ್ತು ಸಿಮೆಂಟ್ ಇಟ್ಟಿಗೆ ಹಾಗೂ ಎಲ್ಲಾ ರೀತಿಯ ಬಿಲ್ಡಿಂಗ್ ಮೆಟೀರಿಯಲ್ಸ್ ಸರಬರಾಜು ಮಾಡಲಾಗುವುದು.
ಕೆ.ಎಸ್.ಸಿಮೆಂಟ್ ಬ್ರಿಕ್ಸ್
9620365456
9141454258

NEW HOUSE FOR SALE
30x40 North Face
Vijayanagar 4th Stage, Mysore
9900501309
9742791967

HOUSE SALE
Srirampura
4 BHK New House, 33x40, East Facing with Borewell, MUDA App
Price - 1.65 Cr,
Near Crystal City, Within Ring Road
8660105902



Solar Water Heater
SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

SITES for SALE
JP Nagar Ring Road
30 x 40 - 33 Lakhs, Near Gurur Bus Stop, Ramabainagar, Mysore.
DTCP approved (Corporation limits)
1.5 Kms from J.P Nagar Ring Road
8660105902

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

REQUIRED
SALES ENGINEER
For Industrial Oils
Experience : 1- year / Fresher.
Qualification : ITI, Diploma, B.Com., B.Sc
Salary - Negotiable.
Vehicle - 2 Wheeler is a Must.
Place - Mysore.
99720 29007

ಬೇಕಾಗಿದ್ದಾರೆ
ಮೈಸೂರು ಹೆಬ್ಬಾಳಿನ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಹೆಲ್ಪರ್‌ಗಳು, ಟೈಲರ್‌ಗಳು, ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ.
7795285485
8105249880

ಬೇಕಾಗಿದ್ದಾರೆ
ಮೈಸೂರು ಹಾಗೂ ನಗುನಹಳ್ಳಿ ಸಿದ್ದಲಿಂಗಪುರ, ಸುತ್ತ ಮುತ್ತ ಕಾರ್ಯ ನಿರ್ವಹಿಸಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ESI & PF ಸೌಲಭ್ಯ ಇರುತ್ತದೆ.
380/ಎ, 2ನೇ ಮಹಡಿ, ಕೃಷ್ಣವಿಲಾಸ ರಸ್ತೆ, ಮೈಸೂರು
9606023464

Star Solar
Renewable Energy



JUST Easy EMI
19,499/-
200 Ltr
Limited Period Offer
Old system Exchange offer available
Manufacturing : Belawadi Industrial Sub, Mysore
9945616293 / 9449966293

ನಿವೇಶನಗಳು ಮಾರಾಟಕ್ಕಿದೆ
ಸಾತಗಳ್ಳಿ 30X40 & 20X30
ವಾಣಿವಿಲಾಸ 30X40
ಮಾನಸಿ ನಗರ
40X60 & 30X50
9448447035

WANTED
1) SUPERVISOR - Male / Female
2) STOREKEEPER - Male candidate
Education: SSLC & above. part time / full time. Contact:
Mob: 8884488181

ಅಮರನಾಥ ಯಾತ್ರೆ
28–06–2024 ರಿಂದ 12 ದಿನಗಳು. ಊಟ, ತಿಂಡಿ, ಎಸಿ ವಸತಿ, ಎಸಿ ಬಸ್ 1 ಸೀಟಿಗೆ 58,000/-. ಸ್ಥಳಗಳು: ದೆಹಲಿ, ಅಮೃತಸರ, ಜಮ್ಮು, ವೈಷ್ಣೋದೇವಿ, ಶ್ರೀನಗರ, ಸೋನಾಮಾರ್ಗ್, ಬಲ್‌ತಾಳ್, ಅಮರ್‌ನಾಥ್, ಇತ್ಯಾದಿ.
ಮಾರ್ವೆಲ್ ಟ್ರಾವೆಲ್ಸ್ ನಜರ್‌ಬಾದ್, ಮೈಸೂರು
9342118682, 9449128682

ಚಾರ್‌ಧಾಮ್ ಯಾತ್ರ
ಕರ್ನಾಟಕ ಸರ್ಕಾರ ಧಾರ್ಮಿಕ ದತ್ತಿ ಇಲಾಖೆ ಇಂದ ರೂ. 20,000 ಸಹಾಯ ಧನ ದೊರೆಯುತ್ತದೆ. 20–6–2024 – 12 ದಿನಗಳು, ವಿರೋಪ್ಲೇನ್ ಟಿಕೆಟ್, ಊಟ, ತಿಂಡಿ, ಎಸಿ ವಸತಿ, ಎಸಿ ಬಸ್. 1 ಸೀಟಿಗೆ ರೂ. 55,000. ಸ್ಥಳಗಳು: ಹರಿದ್ವಾರ್, ಋಷಿಕೇಶ್, ಯಮುನೋತ್ರಿ, ಗಂಗೋತ್ರಿ, ಉತ್ತರಕಾಶಿ, ರುದ್ರಪ್ರಯಾಗ್, ಕೇದಾರನಾಥ್, ಗುಪ್ತಕಾಶಿ, ಮಾನ ಗ್ರಾಮ, ಬದ್ರಿನಾಥ್ ಇತ್ಯಾದಿ.
ಮಾರ್ವೆಲ್ ಟ್ರಾವೆಲ್ಸ್, ನಜರ್‌ಬಾದ್, ಮೈಸೂರು
9342118682, 9449128682

ಹೊಸ ಮನೆ ಮಾರಾಟಕ್ಕಿದೆ Duplex
30x40 N/F
ಶ್ರೀನಗರ ಹತ್ತಿರ ಆರಾಧ್ಯ, ಬಡಾವಣೆ
1.15 Cr
9379056972

ನೈಪುಣ್ಯ ಸ್ಕೂಲ್ ಆಫ್ ಎಕ್ಸ್‌ಲೆನ್ಸ್
ದಟ್ಟಗಳ್ಳಿ, ಮೈಸೂರು
ಬೇಕಾಗಿದ್ದಾರೆ
1. ಮಹಿಳಾ ಆಯಾ/ಅಟೆಂಡರ್ಸ್ (Part Time/Full TIme)
2. ಡ್ರೈವರ್ಸ್
9110851597

House for Rent
(1st Floor)
1) Two bedrooms, (2) Solar facility attached. Vegetarians only. Address: #877, 4th Main, 26th Cross, Vidyaranyapuram, Mysore-570 008
9740294759, 9742741952

SUMP & TANK SOLAR & CLEANING WATER LEVEL CONTROLLER SERVICE
Mob: 8861612486

Flat for Sale
New apartment, 2 BHK, North face, Kuvempunagar, Mysore.
9448324232, 9480606154

ವಧು–ವರಾನ್ವೇಷಣೆ
ಒಕ್ಕಲಿಗ / ಕುರುಬ / ಲಿಂಗಾಯತ / ನಾಯಕ / SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ:
(2nd Marriages also)
Mob: 9343175000

ಬೇಕಾಗಿದ್ದಾರೆ
ಆಫೀಸ್ ಕೆಲಸಕ್ಕೆ ಮಹಿಳಾ ಸ್ಟಾಫ್‌ಗಳು ಬೇಕಾಗಿದ್ದಾರೆ ಕಂಪ್ಯೂಟರ್ ಜ್ಞಾನ ಹಾಗೂ ಅನುಭವವುಳ್ಳವರು (ಜಿ.ಎಸ್.ಟಿ ಫೈಲ್ & ಟ್ಯಾಲಿ) ಹೊಂದಿರುವವರು – 01
ಕಂಪ್ಯೂಟರ್ ಜ್ಞಾನವುಳ್ಳವರು – 02
ಯಶ್ಮಿತಾ ಬಿಗ್ ಪ್ರಿಂಟ್
ಫೋನ್ : 88841 40303

ಕೆಲಸಕ್ಕೆ ಬೇಕಾಗಿದ್ದಾರೆ
ಉನ್ನತ ಕಂಪನಿ ಹಾಗೂ ಕಾರ್ಖಾನೆ, ಹಾಸ್ಪಿಟಲ್ (ಕೂರ್ಗಳ್ಳಿ, ಹೆಬ್ಬಾಳ ಮೇಟಗಳ್ಳಿ, ಕುವೆಂಪುನಗರ ಇಲ್ಲಿ ಕೆಲಸ ಮಾಡಲು Helper, Electrical work, ಹೌಸ್ ಕೀಪಿಂಗ್ ಸೆಕ್ಯೂರಿಟಿಗಳು ಬೇಕಾಗಿದ್ದಾರೆ. ವಿದ್ಯಾಭ್ಯಾಸ: 7th, 10th, PUC, Any Degree & ITI, Diploma, ESI, PF ಸೌಲಭ್ಯ ವಿರುತ್ತದೆ. ಫೀಲ್ಡ್ ಆಫೀಸರ್ & ಪಿಗ್ಮಿ ಕಲೆಕ್ಟರ್ ಬೇಕಾಗಿದ್ದಾರೆ.
9611208553, 9632351123
9036461347

ಸಪ್ತಸ್ವರ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ, ಬಿ.ಎಂ.ಶ್ರೀನಗರ, ಮೈಸೂರು
ಶಿಕ್ಷಕರು ಬೇಕಾಗಿದ್ದಾರೆ
1. Maths B.Sc/M.Sc, BEd- 1 Post- (English Mediem)
2. Science B.,Sc/M.Sc B.Ed - 1 Post English Medium , 1 Post - (ಕನ್ನಡ ಮಾಧ್ಯಮ)
3. Physical Education Teacher B.A/B.Sc, BPEd
1 Post (Kan & Eng Medium)
9916195956

ಆಫೀಸ್ ಬಾಯ್ ಬೇಕಾಗಿದ್ದಾರೆ
ವಯೋಮಿತಿ 20 ರಿಂದ 30 ವರ್ಷದೊಳಗೆ.
North East Properties
Gangothri Layout
9538583377

ವಸತಿ ಹಾಗೂ ವಾಣಿಜ್ಯ ಆಸ್ತಿ ಮಾರಾಟಕ್ಕಿದೆ (ಒಂಟಿಕೊಪ್ಪಲ್)
980 sq.ft. + 300 sq.ft. C.A.
#2798, 11ನೇ ಕ್ರಾಸ್, ವಿ.ವಿ. ಮೊಹಲ್ಲಾ.
9731782853

ಹೊಸ ಮನೆ ಮಾರಾಟಕ್ಕಿದೆ
20x30 ಉತ್ತರ ದಿಕ್ಕು
1) GF - 2 BHK
2) F.F. - 2 BHK
ರೈಲ್ವೆ ಲೇಔಟ್, ಜೆ.ಪಿ. ನಗರ, ಮೈಸೂರು
9538956060, 8660108796

ಬ್ಯುಸಿನೆಸ್ ಪ್ಲ್ಯಾನ್
ಬ್ಯುಸಿನೆಸ್ ಪ್ಲ್ಯಾನ್ ನಿಮ್ಮದು. ಬಂಡವಾಳ ನಮ್ಮದು, ಬಂದ ಆದಾಯದಲ್ಲಿ 50–50, ಈ ರೀತಿ ಬ್ಯುಸಿನೆಸ್ ಪ್ಲ್ಯಾನ್ ಇರುವವರು ಕೂಡಲೇ ಸಂಪರ್ಕಿಸಿ:
9901080314

ಸೈಟು ಬೇಕಾಗಿದೆ
ಲಾಲ್‌ಬಹದ್ದೂರ್ ಶಾಸ್ತ್ರಿನಗರ, ವಸಂತನಗರ, ಶಾಂತವೇರಿ ಗೋಪಾಲಗೌಡ ನಗರ, ಸಪ್ತಮಾತೃಕ ಲೇಔಟ್, ಪೊಲೀಸ್ ಲೇಔಟ್, ಜೆ.ಎಸ್.ಎಸ್. ಲೇಔಟ್.
9844436672

MUDA APPROVED 30X40 SITE FOR SALE
NITYANANDASAGARA
HUILALU MYSORE
8217851695

20x30 ಮನೆ ಮಾರಾಟಕ್ಕಿದೆ
20x30 ಎರಡು ವರ್ಷದ ಟ್ರಿಪ್ಲೆಕ್ಸ್ ಫುಲ್ ಟೀಕ್, 3 ಬೆಡ್ ರೂಂ, 3 ಹಾಲ್, ಯುಟಿಲಿಟಿ ಸಿಟಿಔಟ್ ಎಲ್ಲಾ ಇರುವ ಉತ್ತಮವಾದ ಮನೆ ಆಂದೋಲನ ಸರ್ಕಲ್ ಹತ್ತಿರ ಮಾರಾಟಕ್ಕಿದೆ. ಸಂಪರ್ಕಿಸಿ
9945245946

HOUSE / SITE / LAND / SALE
30x40, 3 BHK Architect & furnished house @ SBM Layout, Bogadi. 40x60, 53 sq. house furnsihed @ Vijayanagar 3rd Stage. 50x80 Commercial site 80 feet road @ Vijayanagar 3rd Stage. 30x40 W/F site @ 4th Stage. 20x30 Commercial complex building @ Hebbal Main Road. 2 1/2 acre fully developed farm house @ Jaipura, H.D. Kote Road.
98440 56971

HOUSE FOR SALE
20x30 G+Duplex house, 87 Lakhs, slightly negotiable. S/F site E/D near Marimallappa Compound, Vijayanagar 4th Stage, 2nd Phase, Mysore. Contact:
8073723223

HOUSE FOR RENT
2 BHK, solar, Furnished #1516/B, 3rd Main, 6th Cross, 2nd Stage, Vijayanagar, Mysore.
9900565053

NEW HOUSE FOR SALE
30x40 North Face
Ground Floor, First Floor, Second Floor with single room, fully furnished, all teak house at Hebbal 1st Stage, 6th Main Road, Near Shreyas Medicals, Mysore-17.
Contact:
9448840397, 9739297774

ಮನೆ ಬಾಡಿಗೆಗೆ ಇದೆ
ಕೆ.ಜಿ.ಕೊಪ್ಪಲ್, 3ನೇ ಕ್ರಾಸ್
1 BHK with Solar
ಮನೆ ಬಾಡಿಗೆಗೆ ಇದೆ
8904903144

ಸೈಟುಗಳು ಮಾರಾಟಕ್ಕಿದೆ
30x40 S/F, 52/A2E/F Corner, 58/60 N/E Corner, 50x80 E/F
ರಿಂಗ್ ರೋಡ್ ಹತ್ತಿರ ಯೂನಿವರ್ಸಿಟಿ ಲೇಔಟ್ ಎದುರು 30x40
30x50 ವರಕೂಡು ಹತ್ತಿರ,
30x40 ಶ್ರೀನಗರಹತ್ತಿರ
9900372792

SITE FOR SALE
Niveditha Nagar 40x60 W/F
Bapuji Layout 40x60 N/F
J.P.Nagar 40x60 W/F
Near Sharadadevinagar Circle
30x40, 30x50
9945148025
6360047632

ಮೈಸೂರು ಸಿಟಿ, ವಿಜಯನಗರ 4ನೇ ಹಂತ, ಕಲ್ಯಾಣಿ ನಗರದಲ್ಲಿರುವ ಮುಡಾ ಅಪ್ರೂವ್ಡ್ ನಾರ್ತ್ ಈಸ್ಟ್ ಕಾರ್ನರ್ 30x40 ನಿವೇಶನ (ಕ್ಲಿಯರ್
9449992940

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಸುತ್ತಮುತ್ತ ಸೆಕ್ಯೂರಿಟಿ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ.
Novel Security Service
9019500503
9620551151

ಬೇಕಾಗಿದ್ದಾರೆ
ಫೀಲ್ಡ್ ಆಫೀಸರ್ – 2 ಮಂದಿ
ವಿದ್ಯಾವಂತ ಸೆಕ್ಯೂರಿಟಿ ಗಾರ್ಡುಗಳು – 10 ಮಂದಿ
ಉಚಿತ ವಸತಿ ESI / PF ಹಾಗೂ ಊಟದ ವ್ಯವಸ್ಥೆಯಿದೆ.
9686422400
9242406261

ಮಾರಾಟಕ್ಕಿದೆ
$22\frac{1}{2}$x36 ಮನೆ ನಂಬರ್ 3/a ವಿನಾಯಕ ನಗರ ಪಡುವಾರಹಳ್ಳಿ 1ನೇ ಮುಖ್ಯ ರಸ್ತೆ, ಮೈಸೂರು, 25x35 ಅಳತೆಯ ಸೈಟ್ ಮಾರಾಟಕ್ಕಿದೆ. ವಿಜಯನಗರ 4ನೇ ಹಂತ ಮೈಸೂರು
9343666777

ನಿವೇಶನಗಳು ಮಾರಾಟಕ್ಕಿವೆ
ಬನ್ನೂರು ರಸ್ತೆಯಲ್ಲಿ ರಿಂಗ್ ರಸ್ತೆಯಿಂದ 2.5 ಕಿ.ಮೀ. ವ್ಯಾಪ್ತಿಯಲ್ಲಿ 30x40, 30x50 ಮತ್ತು 40x60 ಎಲ್ಲಾ ಅಳತೆಯ ನೋಂದಣಿಗೆ ಸಿದ್ಧವಾದ ಮೂಡ ಅನುಮೋದಿತ ನಿವೇಶನಗಳು ಮಾರಾಟಕ್ಕಿವೆ. ಬ್ಯಾಂಕ್‌ಗಳಿಂದ ಸಾಲ ಸೌಲಭ್ಯಗಳು ದೊರೆಯುತ್ತವೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಮೈಸೂರು ಈಸ್ಟ್ ಪ್ರಾಪರ್ಟೀಸ್
9916766389, 6363400519

ಹೋಟೆಲ್ ಬೇಕಾಗಿದ್ದಾರೆ
ಅಸಿಸ್ಟೆಂಟ್ ಅಡುಗೆಯವರು –2
ತೊಳೆಯುವ ಮಹಿಳೆಯರು –1
9886756555
8050502132
9902058063

ಮನೆ ಬಾಡಿಗೆಗೆ
ರಾಮಕೃಷ್ಣನಗರ H. Block ನಲ್ಲಿ 30x40 ಅಳತೆಯುಳ್ಳ 3 Room Attached Bath Room ಡ್ಯೂಪ್ಲೆಕ್ಸ್ ಇಂಡಿಪೆಂಡೆಂಟ್ ಮನೆ ಹಾಗೂ Parking ವ್ಯವಸ್ಥೆ ಮತ್ತು ಸೋಲಾರ್‌ನ್ನು ಒಳಗೊಂಡಿರುತ್ತದೆ. ಪೂರ್ವಕ್ಕೆ ಬಾಗಿಲು
9380681006

ಬೇಕಾಗಿದ್ದಾರೆ
ಕಾವೇರಿ ಲಾ ಅಸೋಸಿಯೇಟ್ ಕುಶಾಲನಗರ ಶಾಖೆಯಲ್ಲಿ ಆಫೀಸ್ ಅಸಿಸ್ಟೆಂಟ್ ಆಗಿ ಕೆಲಸ ಮಾಡಲು ಯಾವುದೇ ಪದವಿ ಪಡೆದಿರುವ ಸ್ಪಷ್ಟವಾಗಿ ಕನ್ನಡ ಮಾತನಾಡಲು ಬರುವ ಮಹಿಳೆಯರು ಅತಿ ಜರೂರಾಗಿ ಬೇಕಾಗಿದ್ದಾರೆ. ಕೆಲಸದ ಸಮಯ ಬೆಳಿಗ್ಗೆ 9.30 ಗಂಟೆಯಿಂದ ಸಾಯಂಕಾಲ 6.00 ರ ತನಕ ಸಂಪರ್ಕ ಮಾಡಬೇಕಾದ ಕಛೇರಿ ವಿಳಾಸ: ಕಾವೇರಿ ಲಾ ಅಸೋಸಿಯೇಟ್
9480238019

SITE FOR SALE
In Muda Approved Layout Bogadi Near Deepa School Srirampura Near H.D.Kote Ring Road, Very Good Location and Fully Developed
9483358399
6381779015

ಅನುಬಂಧ ಮ್ಯಾರೇಜಸ್
ವಧುವರರನ್ನು ಹುಡುಕಲು ಸಹಾಯ ಬೇಕೇ? ನಮಗೆ ಕರೆ ಮಾಡಿ ಪ್ರತಿದಿನ ವಧುವರರ ನೇರ ಸಂದರ್ಶನ ಇರುತ್ತದೆ.
6361740552

ಮೈಸೂರು ಮಿತ್ರ 45 — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ


ವಿದ್ಯೆ ಮನುಷ್ಯನ ಜನ್ಮವನ್ನು ಸಾರ್ಥಕಗೊಳಿಸುವ ಸಂಸ್ಕಾರ

ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನಲ್ಲಿ ಶ್ರೀ ಶಂಕರ ಭಾರತೀ ಸ್ವಾಮೀಜಿ ಆಶೀರ್ವಚನ

ಮೈಸೂರು, ಮೇ 24(ಎಂಕೆ)– ಜ್ಞಾನ ಮಾರ್ಗದಲ್ಲಿ ಪರಿಪೂರ್ಣತೆ ಹೊಂದಲು 'ವಿದ್ಯಾ ನೈಪುಣ್ಯತೆ' ಪಡೆಯುವ ಸಂಕಲ್ಪ ಮಾಡುವಂತೆ ಯಡತೊರೆ ಶ್ರೀ ಯೋಗಾನಂದೇಶ್ವರ ಮಠದ ಶ್ರೀ ಶಂಕರ ಭಾರತೀ ಸ್ವಾಮೀಜಿ, ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.


ಮೈಸೂರಿನ ಕನಕದಾಸನಗರ(ದಟ್ಟಗಳ್ಳಿ)ದಲ್ಲಿರುವ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನ ನೂತನ ಶಾಲಾ ಕ್ಯಾಂಪಸ್‌ನಲ್ಲಿ ಆಯೋಜಿಸಲಾಗಿದ್ದ ಆಶೀರ್ವಚನ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಶ್ರೀಗಳು ವಿದ್ಯೆಯೆಂದರೆ ಕೇವಲ ಅಕ್ಷರ ಕಲಿಕೆಯಲ್ಲ. ಮನುಷ್ಯ ಜನ್ಮವನ್ನು ಸಾರ್ಥಕಗೊಳಿ ಸುವ ಸಂಸ್ಕಾರ ಪಡೆಯುವುದೇ ಆಗಿದೆ ಎಂದರು.

ವಿದ್ಯೆಯಲ್ಲಿ ವಿವಿಧ ವಿಷಯಗಳ ಅಧ್ಯಯನಕ್ಕೆ ಅವಕಾಶವಿದೆ. ಜೀವ ಜಗತ್ತಿನ ಕಲ್ಯಾಣಕ್ಕಾಗಿ ಸಮರ್ಪಣಾ ಮನೋಭಾವದಿಂದ ಕಾರ್ಯ ನಿರ್ವಹಿಸುವ ಮಾರ್ಗ ತಿಳಿಯಲು ಶಿಕ್ಷಣ ಅವಶ್ಯವೆಂಬುದನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ಅರಿಯಬೇಕು. ಈ ನಿಟ್ಟಿನಲ್ಲಿ ಭಾರತೀಯ ಶಿಕ್ಷಣ ಪರಂಪರೆಯ ಅತ್ಯಂತ ಶ್ರೇಷ್ಠವಾದದ್ದು, ಭಾರತೀಯ ಶಿಕ್ಷಣವು ಮಾನವೀಯ ಮೌಲ್ಯವನ್ನು ತಿಳಿಸಿ, ಸಾಧಿಸುವ ಮಾರ್ಗ ತೋರುವ ಪದ್ಧತಿಯಾಗಿದೆ ಎಂದು ಹೇಳಿದರು.



ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನ ನೂತನ ಶಾಲಾ ಕ್ಯಾಂಪಸ್‌ನಲ್ಲಿ ಯಡತೊರೆ ಶ್ರೀ ಯೋಗಾನಂದೇಶ್ವರ ಮಠದ ಶ್ರೀ ಶಂಕರ ಭಾರತೀ ಸ್ವಾಮೀಜಿ ಆಶೀರ್ವಚನ ನೀಡಿದರು

ನೈಪುಣ್ಯ ವಿದ್ಯಾ ಸಂಸ್ಥೆಯು ಕೇವಲ ಎರಡು ವರ್ಷ ಪೂರೈಸುವುದರೊಳಗಾಗಿ ನಗರದಲ್ಲಿ ಎರಡು ಸಂಸ್ಥೆಗಳನ್ನು ಸಮಾಜಕ್ಕೆ ಸಮರ್ಪಣೆ ಮಾಡಿರುವುದು ಅತ್ಯಂತ ಸಂತೋಷದ ವಿಚಾರವಾಗಿದ್ದು, ಸಂಸ್ಥೆಯ ಆಡಳಿತ ಮಂಡಳಿತ ಶಿಕ್ಷಣ ಶ್ರದ್ಧೆ ನಿಜಕ್ಕೂ ಪ್ರಶಂಸನೀಯ



ಕಾರ್ಯವಾಗಿದೆ. 'ನೈಪುಣ್ಯ' ಎಂಬ ಹೆಸರೇ ವಿದ್ಯೆಯ ಪರ್ಯಾಯ ಅರ್ಥವಾಗಿದ್ದು, ನೈಪುಣ್ಯ ಹೆಸರನ್ನೊತ್ತ ಸಂಸ್ಥೆಯು ಭಾರತೀಯ ಪರಂಪರೆಯ ಶಿಕ್ಷಣದ ಜೊತೆಗೆ ಜಾಗತಿಕ ಮಟ್ಟದಲ್ಲಿ ವಿದ್ಯಾರ್ಥಿಗಳು ಪೈಪೋಟಿ ನಡೆಸುವಂತಾಗಲು ಉತ್ತಮ ಶಿಕ್ಷಣವನ್ನು ಕೊಡಮಾಡುವುದರ ಜೊತೆಗೆ ದೇಶ ಕಟ್ಟುವ ಸತ್ಪ್ರಜೆಗಳನ್ನು ರೂಪಿಸಲಿ ಎಂದು ಕರೆ ನೀಡಿದರು. ಯಾವ ಮಗುವಿನಲ್ಲಿ ಎಂತಹ ಸಾಧಕ ಅಡಗಿ ಕುಳಿತಿರುತ್ತಾನೋ ಯಾರು ಬಲ್ಲವರು? ಈ ನಿಟ್ಟಿನಲ್ಲಿ ಪ್ರತಿಯೊಬ್ಬ ಮಗುವನ್ನು ಭವಿಷ್ಯದ ಮಹಾನ್ ಸಾಧಕನೆಂದೇ ಪರಿಗಣಿಸಿ ಉತ್ತಮ ಶಿಕ್ಷಣ ನೀಡುವ ಸಂಕಲ್ಪ ತೊಡಬೇಕೆಂದು ಶಿಕ್ಷಕರು ತೊಡಬೇಕಿದೆ ಎಂದು ಶಿಕ್ಷಕವೃಂದಕ್ಕೆ ಸಲಹೆ ನೀಡಿದರು.

'ಸ್ಟಾರ್ ಆಫ್ ಮೈಸೂರ್', 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ, ಸಂಸ್ಥೆಯ ಅಧ್ಯಕ್ಷ ಆರ್.ರಘು, ಕಾರ್ಯದರ್ಶಿ ಕೌಟಿಲ್ಯ, ಟ್ರಸ್ಟಿ ವರ್ಣಿಕ, ಡೀನ್ ವಿಜಯಾ ಅಯ್ಯರ್ ಹಾಗೂ ನೂರಾರು ಪೋಷಕರು, ಅಧ್ಯಾಪಕ ವರ್ಗದವರು ಉಪಸ್ಥಿತರಿದ್ದರು.

ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 24–ಮೈಸೂರಿನ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ವಿವಿಧ ವೃತ್ತಿಗಳಿಗೆ ಪಿಪಿಪಿ ಯೋಜನೆಯಡಿಯಲ್ಲಿ ಮೆರಿಟ್ ಆಧಾರಿತ ಪ್ರವೇಶಗಳಿಗಾಗಿ ಆಫ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಂಸ್ಥೆಯಲ್ಲಿ ಎಲೆಕ್ಟ್ರಿಷಿಯನ್ (2 ವರ್ಷ), ಎಲೆಕ್ಟ್ರಾನಿಕ್ಸ್ ಮಷಿನಿಕ್ (2 ವರ್ಷ), ಫಿಟ್ಟರ್ (2 ವರ್ಷ), ಟರ್ನರ್(2 ವರ್ಷ), ಕಂಪ್ಯೂಟರ್ ಆಪರೇಟರ್ ಅಂಡ್ ಪ್ರೋಗ್ರಾಮಿಂಗ್ ಅಸಿಸ್ಟೆಂಟ್ (2 ವರ್ಷ) ವೃತ್ತಿ ಕೋರ್ಸ್‌ಗಳನ್ನು ಒಳಗೊಂಡಿದೆ.

ಆಸಕ್ತರು ಜೂ. 3 ರೊಳಗೆ ಆಫ್‌ಲೈನ್ ಮೂಲಕ ಅರ್ಜಿಗಳನ್ನು ಬೆಳವಾಡಿಯ ಕೈಗಾರಿಕ ತರಬೇತಿ ಮತ್ತು ಉದ್ಯೋಗ ಇಲಾಖೆಯಲ್ಲಿ ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ಇಲಾಖೆಯ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯನ್ನು ನೇರವಾಗಿ ಭೇಟಿ ಮಾಡಬಹುದು ಅಥವಾ ದೂ.ಸಂ:0821– 2950951 ಅಥವಾ 9980289219 ಅನ್ನು ಸಂಪರ್ಕಿಸಬಹುದು ಎಂದು ಮೈಸೂರಿನ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಬಿಜೆಪಿ ದುರಾಡಳಿತದಿಂದ ಉದ್ಯಮಿಗಳು ನಮ್ಮ ದೇಶವನ್ನು ಬಿಟ್ಟು ಹೋಗಿದ್ದಾರೆ

- ಡಿಸಿಎಂ ಡಿ.ಕೆ. ಶಿವಕುಮಾರ್ ಗಂಭೀರ ಆರೋಪ
- ಲೋಕಸಭಾ ಚುನಾವಣೆ ಬಳಿಕ ಹೂಡಿಕೆದಾರರ ದಾಖಲೆ ಬಿಡುಗಡೆ

ಬೆಂಗಳೂರು, ಮೇ 24(ಕೆಎಂಶಿ)–ಬಿಜೆಪಿಯ ದುರಾಡಳಿತ, ಕಿರುಕುಳಕ್ಕೆ ಬೇಸತ್ತು ಲಕ್ಷಾಂತರ ಉದ್ದಿಮೆದಾರರು, ವ್ಯಾಪಾರಿಗಳು ದೇಶ ಬಿಟ್ಟು ಹೋಗಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಕಿಡಿಕಾರಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಬಂಡವಾಳ ಹೂಡಿಕೆದಾರರು ಆಸಕ್ತಿ ತೋರಿದ್ದು, ಚುನಾವಣೆ ಬಳಿಕ ದಾಖಲೆ ಸಮೇತ ಬಿಜೆಪಿ ನಾಯಕರಿಗೆ ಉತ್ತರ ನೀಡುತ್ತೇವೆ ಎಂದರು. ಬಂಡವಾಳ ಹೂಡಿಕೆ ವಿಚಾರದಲ್ಲಿ ರಾಜ್ಯದ ಬಗ್ಗೆ ಅಪಪ್ರಚಾರ ಮಾಡುತ್ತಿರುವ ಬಿಜೆಪಿ ನಾಯಕರಿಗೆ ನಾಚಿಕೆಯಾಗಬೇಕು, ದಾಖಲೆಗಳನ್ನು ಪರಿಶೀಲಿಸಿ ಮಾತನಾಡಬೇಕು ಎಂದರು.

ಕೈಗಾರಿಕಾ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕರ್ನಾಟಕ ಪ್ರಗತಿ, ಅಭಿವೃದ್ಧಿ ಹಾಗೂ ಶಾಂತಿಯ ನಾಡು ಎಂದು ದೇಶಕ್ಕೇ ಗೊತ್ತಿದೆ. ರಾಜ್ಯ ಹಾಗೂ ಬೆಂಗಳೂರನ್ನು ಇಡೀ ವಿಶ್ವವೇ ನೋಡುತ್ತಿದೆ ಎಂದರು. ಪ್ರಜ್ವಲ್ ರೇವಣ್ಣ ಬಗ್ಗೆ ದೇವೇಗೌಡರ ಪತ್ರ ಅವರ ಕುಟುಂಬದ ವಿಚಾರ. ಇದರ ಬಗ್ಗೆ ಪ್ರತಿಕ್ರಿಯೆ ನೀಡುವುದಿಲ್ಲ. ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಬೆಂಗಳೂರು ನಗರ ಪ್ರದಕ್ಷಿಣೆ ಬಗ್ಗೆ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಏನು ಬೇಕಾದರೂ ಟೀಕೆ ಮಾಡಲಿ, ನಾವು ಜನರಿಗಾಗಿ ಕೆಲಸ ಮಾಡುತ್ತೇವೆ, ಜನರಿಗಾಗಿ ಇದ್ದೇವೆ, ಜನ ನಮ್ಮ ಪರವಾಗಿ ಇರುತ್ತಾರೆ ಎಂದರು.

ಮತದಾನ, ಮತ ಎಣಿಕೆ ಹಿನ್ನೆಲೆ ಮದ್ಯ ಮಾರಾಟ ನಿಷೇಧ

ಮೈಸೂರು, ಮೇ 24–ಕರ್ನಾಟಕ ವಿಧಾನಪರಿಷತ್ತಿಗೆ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯ ಮತದಾನ ಮತ್ತು ಮತ ಎಣಿಕೆಯ ಕಾರ್ಯವನ್ನು ಸುಸೂತ್ರವಾಗಿ ನಡೆಸಲು ಹಾಗೂ ಶಾಂತಿಯುತವಾಗಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಜೂ.3 ರಂದು ಮತದಾನ ನಡೆಯಲಿರುವುದ ರಿಂದ ಜಿಲ್ಲೆಯಾದ್ಯಂತ ಜೂ.1ರ ಸಂಜೆ 4 ಗಂಟೆಯಿಂದ ಜೂ.3ರ ಮಧ್ಯರಾತ್ರಿ 12 ಗಂಟೆಯವರೆಗೆ ಮತ್ತು ಮತ ಎಣಿಕೆ ಕಾರ್ಯವು ಜೂ.6ರಂದು ನಡೆಯಲಿರುವು ದರಿಂದ ನಗರ ಮತ್ತು ನಗರ ವ್ಯಾಪ್ತಿಯಿಂದ 5 ಕಿ.ಮೀ ವ್ಯಾಪ್ತಿಯವರೆಗೆ ಜೂ.5ರಂದು ಮಧ್ಯರಾತ್ರಿ 12 ಗಂಟೆಯಿಂದ ಜೂ.6ರಂದು ಮಧ್ಯರಾತ್ರಿ 12 ರವರೆಗೆ ಮದ್ಯ ಮಾರಾಟವನ್ನು ನಿಷೇಧಿಸಲಾಗಿದೆ. ಎಲ್ಲಾ ರೀತಿಯ ಮದ್ಯದ ಅಂಗಡಿಗಳನ್ನು ಮತ್ತು ಮದ್ಯ ತಯಾರಿಕಾ ಘಟಕ ಗಳನ್ನು ಮಾಲೀಕರು, ಅಧಿ ಭೋಗದಾರರು ಮತ್ತು ವ್ಯವಸ್ಥಾಪಕರು ಅಂಗಡಿ ಮುಚ್ಚಲು ಹಾಗೂ ಮೊಹರು ಮಾಡಿ ಅದರ ಕೀಯನ್ನು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರಿಗೆ ಒಪ್ಪಿಸುವಂತೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇನ್ ಫಿಲ್ಮ್ ಫೆಸ್ಟಿವಲ್ 2024: ಅತ್ಯುತ್ತಮ ಕಿರುಚಿತ್ರ ಪ್ರಶಸ್ತಿ ಪಡೆದ 'ಸನ್ ಫ್ಲವರ್ಸ್ ವರ್ ದಿ ಫರ್ಸ್ಟ್ ಒನ್ಸ್ ಟು ನೋ'



ಫ್ರಾನ್ಸ್, ಮೇ 24– ಕೇನ್ಸ್ ಫಿಲ್ಮ್ ಫೆಸ್ಟಿವಲ್ 2024ರಲ್ಲಿ ಮೈಸೂರು ಮೂಲದ ಫಿಲ್ಮ್ ಮೇಕರ್ ಚಿದಾನಂದ ಎಸ್ ನಾಯಕ್ ಅವರ 'ಸನ್ ಫ್ಲವರ್ಸ್ ವರ್ ದಿ ಫರ್ಸ್ಟ್ ಒನ್ಸ್ ಟು ನೋ' ಅತ್ಯುತ್ತಮ ಕಿರುಚಿತ್ರ ಪ್ರಶಸ್ತಿಯನ್ನು ಗೆದ್ದುಕೊಂಡಿದೆ.

ಲಾ ಸಿನೆಫ್ ಪ್ರಶಸ್ತಿಗಳನ್ನು ಮೇ 23 ರಂದು ಘೋಷಿಸಿದ್ದು, ಮಾನ್ಸಿ ಮಹೇಶ್ವರಿ ಅವರ 'ಬನ್ನಿಹುಡ್' ಅದೇ ವಿಭಾಗದಲ್ಲಿ ಮೂರನೇ ಬಹುಮಾನವನ್ನು ಗೆದ್ದುಕೊಂಡಿದೆ. 'ಬನ್ನಿಹುಡ್' ಯುಕೆ ಚಿತ್ರವಾಗಿದ್ದರೆ, ಇದನ್ನು ಮೀರತ್‌ನ ಭಾರತೀಯರು ನಿರ್ಮಿಸಿದ್ದಾರೆ.

ಕೇನ್ಸ್ ಮೊದಲ ಬಹುಮಾನಕ್ಕಾಗಿ 15,000 ಯೂರೋಗಳನ್ನು ಮತ್ತು ಎರಡನೇ ಮತ್ತು ಮೂರನೇ ಬಹುಮಾನಗಳಿಗೆ ಕ್ರಮವಾಗಿ 11,250 ಯುರೋಗಳು ಮತ್ತು 7,500 ಯುರೋಗಳ ಬಹುಮಾನ ನೀಡುತ್ತದೆ.

ಮೈಸೂರಿನ ವೈದ್ಯ–ಫಿಲ್ಮ್ ಮೇಕರ್ ಪುಣೆಯ ಫಿಲ್ಮ್ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ದೂರದರ್ಶನ ವಿಭಾಗದಲ್ಲಿ ತಮ್ಮ ಒಂದು ವರ್ಷದ ಕೋರ್ಸ್‌ನ ಕೊನೆಯಲ್ಲಿ ಈ ಕಿರುಚಿತ್ರ ನಿರ್ಮಿಸಿದ್ದಾರೆ.

ಎಫ್‌ಟಿಐಐ ವಿದ್ಯಾರ್ಥಿ ಚಿದಾನಂದ ಎಸ್ ನಾಯಕ್ ಅವರ ಈ ಕಿರುಚಿತ್ರವು 17 ಇತರ ಚಲನಚಿತ್ರಗಳಲ್ಲಿ ಮೊದಲ ಬಹುಮಾನವನ್ನು ಗಳಿಸಿತು.

ಪ್ರಶಸ್ತಿ ಪಡೆದ ಚಲನಚಿತ್ರಗಳನ್ನು ಜೂನ್ 3 ರಂದು ಸಿನಿಮಾ ಡು ಪ್ಯಾಂಥಿಯಾನ್‌ನಲ್ಲಿ ಮತ್ತು ಜೂನ್ 4 ರಂದು MK2 ಕ್ವಾಯ್ ಡಿ ಸೀನ್‌ನಲ್ಲಿ ಪ್ರದರ್ಶಿಸಲಾಗುತ್ತದೆ.

ಕೇನ್ಸ್‌ನಲ್ಲಿ ಮೊದಲ ಬಹುಮಾನ ಪಡೆದ ಭಾರತೀಯರಲ್ಲಿ 5 ವರ್ಷಗಳಲ್ಲಿ ಚಿದಾನಂದ ಅವರು ಎರಡನೆಯವರು. 2020 ರಲ್ಲಿ, ಎಫ್‌ಟಿಐಐನ ಅಶ್ಮಿತಾ ಗುಹಾ ನಿಯೋಗಿ ಅವರ "ಕ್ಯಾಟ್‌ಡಾಗ್" ಚಿತ್ರಕ್ಕಾಗಿ ಪ್ರಶಸ್ತಿಯನ್ನು ಗೆದ್ದಿದ್ದಾರೆ. ಸನ್ ಫ್ಲವರ್ಸ್ ವರ್ ದಿ ಫರ್ಸ್ಟ್ ಒನ್ಸ್ ಟು ನೋ 16 ನಿಮಿಷಗಳ ಕಿರುಚಿತ್ರವಾಗಿದ್ದು, ಈ ಕಿರುಚಿತ್ರವು ಹುಂಜವನ್ನು ಕದಿಯುವ ಮುದುಕಿಯ ಕುರಿತಾದ ಕನ್ನಡ ಜಾನಪದ ಕಥೆಯನ್ನು ಆಧರಿಸಿದೆ.

ಶಾಲೆಯ ದುಸ್ಥಿತಿಯ ನಡುವೆ ಮಕ್ಕಳು ಪಾಠ ಕಲಿಯುವ ಸ್ಥಿತಿ!

- ಶಾಲಾ ಆವರಣ ಮಳೆ ನೀರಿನ ಮಿನಿಕೆರೆ!
- ಮಕ್ಕಳಿಗೆ ಸಾಂಕ್ರಾಮಿಕ ರೋಗದ ಭೀತಿ



ನಮ್ಮ ಶಾಲೆ, ನಮ್ಮೂರ ಶಾಲೆ ಉಳಿಸಿ...



ಇದು ನಮ್ಮ ಶಾಲೆ. ನಾವು ಓದಿ ವಿದ್ಯಾವಂತರಾದ ಶಾಲೆ. ದಯಮಾಡಿ ನಮ್ಮ ಶಾಲೆಯನ್ನು ಉಳಿಸಿ. ಹಾಗೆಯೇ ನೂರಾರು ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅವರ ಭವಿಷ್ಯಕ್ಕೆ ಕಲ್ಲಾಕಬೇಡಿ. ಈ ಸರ್ಕಾರಿ ಶಾಲೆಯನ್ನು ಮುಚ್ಚಿಸಬೇಡಿ ಎಂದು ಇದೇ ಶಾಲೆಯಲ್ಲಿ ಓದಿದ ಹಳೇ ವಿದ್ಯಾರ್ಥಿಗಳು ಶಾಲೆಯ ಆವರಣದಲ್ಲಿ ನಿಂತಿರುವ ಮಳೆ ನೀರಿನ ನಡುವೆ ನಿಂತು ಮನವಿ ಮಾಡಿದರು.

ಮೋಹನ್ ಕಾಯಕ

ಮೈಸೂರು, ಮೇ 24– ಯರಗನಹಳ್ಳಿ ಸರ್ಕಾರಿ ಶಾಲೆ ಆವರಣದಲ್ಲಿ ಜಲಮಯ... ಮಕ್ಕಳ ಭವಿಷ್ಯದೊಂದಿಗೆ ಇಲಾಖೆಯ ಚೆಲ್ಲಾಟ... ಅಭಿವೃದ್ಧಿಯ ಅನುದಾನ ಹದ್ದು–ಕಾಗೆಗಳ ಪಾಲು...!

ಮೈಸೂರಿನ ವಾರ್ಡ್ ನಂ.36ರ ವ್ಯಾಪ್ತಿಯ ಯರಗನಹಳ್ಳಿಯಲ್ಲಿರುವ ಸುಮಾರು 30 ವರ್ಷಗಳ ಹಳೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣ ಮಳೆ ನೀರಿನಿಂದ ಜಲಾವೃತ್ತವಾಗುತ್ತಿದೆ. ಶಾಲಾ ಕಟ್ಟಡದ ಗೋಡೆಗಳು ಸೋರುತ್ತಿದ್ದು, ಸಿಮೆಂಟ್ ಪ್ಲಾಸ್ಟಿಂಗ್ ಕಿತ್ತು ಬರುತ್ತಿದೆ. ಕಟ್ಟಡ ಯಾವಾಗ ಕುಸಿದು ಬೀಳುವುದೋ ಎಂಬ ಆತಂಕದ ಜೊತೆಗೆ ಏನೂ ಅರಿಯದ ಮುಗ್ಧ ಮಕ್ಕಳು ಸಾಂಕ್ರಾಮಿಕ ರೋಗಕ್ಕೆ ತುತ್ತಾಗುವ ಅನಿವಾರ್ಯತೆ ಗೋಚರವಾಗಿದೆ.

ಸ್ಥಳೀಯ ಜನಪ್ರತಿನಿಧಿಗಳ ಹಣದಾಸೆಗೆ ಅಭಿವೃದ್ಧಿಯಾಗಿದ್ದರೂ ಇಂದೋ–ನಾಳೆ ಕುಸಿಯುವಂತೆ ಕಾಣುತ್ತಿರುವ ಸರ್ಕಾರಿ ಶಾಲೆ ಕಟ್ಟಡದ ಅಭಿವೃದ್ಧಿಗೆ ನೀಡಿರುವ ಅನುದಾನ ಹದ್ದು–ಕಾಗೆಗಳ ಪಾಲಾಗಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಮಳೆ ಬಂದರೆ ಇಡೀ ಶಾಲಾ ಆವರಣ ನೀರಿನಿಂದ ಆವೃತ್ತವಾಗಿ ಕೆರೆಯಾಗಿ ಮಾರ್ಪಾಡಾಗುತ್ತಿದೆ. ರಸ್ತೆಗೆ ಹೊಂದಿಕೊಂಡಂತೆ ಕಾಂಪೌಂಡ್ ಒಂದು ಬದಿಯಾದರೆ ಉಳಿದ ಮೂರು ದಿಕ್ಕುಗಳಲ್ಲಿಯೂ ಶಾಲಾ ಕಟ್ಟಡವೇ ಇದೆ. ಬಿದ್ದ ಮಳೆ ನೀರು ಯಾವ ಕಡೆಯೂ ಹರಿದು ಹೋಗಲು ತಾವಿಲ್ಲದೆ ಕೆಮ್ಮಣ್ಣಿನ ನೀರಿನೊಳಗೆ ಶಾಲಾ ಮಕ್ಕಳು ಕಾಲ ಕಳೆಯುವಂತಾಗಿದೆ.

ಈಗಾಗಲೇ ಹಲವಾರು ಸರ್ಕಾರಿ ಶಾಲೆಗಳು ಅಭಿವೃದ್ಧಿ ಇಲ್ಲದೆ, ವಿದ್ಯಾರ್ಥಿಗಳಿಲ್ಲದೆ ಬಿಕೋ ಎನ್ನುತ್ತಿವೆ. ಯರಗನಹಳ್ಳಿ ಸರ್ಕಾರಿ ಶಾಲೆಯನ್ನು ಅಂತಹ ಶಾಲೆಗಳ ಪಟ್ಟಿಗೆ ಸೇರಿಸಲು ಶಿಕ್ಷಣ ಇಲಾಖೆಯೇ ಮುಂದಾಗಿರುವಂತಿದೆ. 1 ರಿಂದ 7ನೇ ತರಗತಿ ವರೆಗೆ ಸುಮಾರು 200ಕ್ಕೂ ಹೆಚ್ಚು ಮಕ್ಕಳು ಈ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, ಕಾಯಿಲೆಗಳಿಗೆ ತುತ್ತಾಗುವ ಭೀತಿ ಹೆಚ್ಚಾಗಿದೆ.

ರಸ್ತೆಗಿಂತ ಕೆಳಗಿರುವ ಶಾಲಾ ಕಟ್ಟಡ ಆವರಣಕ್ಕೆ ಚರಂಡಿ ನೀರು, ರಸ್ತೆಯಲ್ಲಿ ಹರಿಯುವ ಹಾಗೂ ಶಾಲಾ ಕಟ್ಟಡ ಮೇಲೆ ಬಿದ್ದ ಮಳೆ ನೀರು ಸೇರಿ ಎಲ್ಲವೂ ಹೊಂಡದಂತೆ ನಿಲ್ಲಲಿದೆ. ಶಾಲೆ ಸುತ್ತಲೂ ಕಸದ ರಾಶಿ ಬಿದ್ದಿದೆ. ಮದ್ಯದ ಬಾಟಲ್‌ಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದು, ಶಾಲೆ ಆವರಣ ಪುಂಡರ ಮೋಜು ತಾಣವಾಗಿದೆ. ಶಾಲೆಯಲ್ಲಿ ಓದುತ್ತಿರುವ ಮಕ್ಕಳ ಭವಿಷ್ಯಕ್ಕೆ ಕುತ್ತು ಬಂದಿದೆ ಎಂದು ಶಾಲೆಯ ಹಳೇ ವಿದ್ಯಾರ್ಥಿಗಳಾದ ಯೋಗರಾಜ್, ಅರುಣ್‌ಕುಮಾರ್, ವಿ.ಮಹದೇವ್, ಚಂದನ್‌ಕುಮಾರ್, ಕಾರ್ತಿಕ್, ಜಗದೀಶ್ ಇನ್ನಿತರರು 'ಮೈಸೂರು ಮಿತ್ರ'ನಲ್ಲಿ ತಾವು ಓದಿದ ಶಾಲೆಯ ದುಸ್ಥಿತಿಯನ್ನು ವಿವರಿಸಿದರು.

ಸೋರುತ್ತಿದೆ: ಹಳೇ ಕಟ್ಟಡದ ಜೊತೆಗೆ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಕಳೆದ 5 ವರ್ಷದ ಹಿಂದೆಯಷ್ಟೇ 29 ಲಕ್ಷ ರೂ ವೆಚ್ಚದಲ್ಲಿ ಹೊಸ ಕಟ್ಟಡವನ್ನು ನಿರ್ಮಿಸಲಾಗಿದೆ. ಕಂಪ್ಯೂಟರ್ ಕೊಠಡಿಗಳನ್ನು ಮಾಡಲಾಗಿದೆ. ಆದರೆ, ಮಳೆ ಬಂದರೆ ಹಳೇ ಕಟ್ಟಡ ಜೊತೆಗೆ ಹೊಸ ಕಟ್ಟಡವೂ ಸೋರುತ್ತಿದೆ. ಗೋಡೆಗಳ ನಡುವೆ ಬಿರುಕು ಬಿಟ್ಟಿದೆ. ಸಿಮೆಂಟ್ ಪ್ಲಾಸ್ಟಿಂಗ್ ಕಿತ್ತು ಬರುತ್ತಿದೆ. ಮಳೆ ನೀರು ಸರಾಗವಾಗಿ ಹೊರಗೆ ಹೋಗಲು ಎಲ್ಲಿಯೂ ಜಾಗ ಮಾಡಿಲ್ಲ. ಜೋರು ಮಳೆ ಬಂದರೆ ಅದೇ ಮಳೆ ನೀರು ಕುಡಿಯುವ ನೀರಿನ ಸಂಪ್‌ಗೆ ಮತ್ತು ಅಡುಗೆ ಕೋಣೆಗೂ ನುಗ್ಗಲಿದೆ ಎಂದು ತಿಳಿಸಿದರು.

ಶಾಲೆಯ ಕುಡಿಯುವ ನೀರಿನ ಸಂಪ್‌ನಲ್ಲಿ ಬಾರೀ ಪ್ರಮಾಣದಲ್ಲಿ ಮಣ್ಣು, ಕಲ್ಲು–ಇಟ್ಟಿಗೆಗಳ ರಾಶಿ ಬಿದ್ದಿದೆ. ರಸ್ತೆ, ಚರಂಡಿಗಳಿಂದ ಹರಿದು ಬರುವ ಕೊಳಚೆ ನೀರು ಸಹ ಇದೇ ಸಂಪ್‌ಗೆ ಸೇರುತ್ತಿದೆ. ಶಾಲಾ ಮಕ್ಕಳಿಗೆ ಇದೇ ಕೊಳಚೆ ನೀರಿನಲ್ಲಿ ಅಡುಗೆ ಮಾಡಿ ಕೊಡಲಾಗುತ್ತಿದೆ. ಯಾರೊಬ್ಬ ಜನಪ್ರತಿನಿಧಿ, ಇಲಾಖೆ ಅಧಿಕಾರಿಗಳು ಕಂಡೂ ಕಾಣದಂತೆ ವರ್ತಿಸುತ್ತಿದ್ದಾರೆ ಎಂದು ದೂರಿದರು.

ನೀರು ಹೊರಹಾಕುವ ತರಾತುರಿ....



ಯರಗನಹಳ್ಳಿಯಲ್ಲಿ ಅಡುಗೆ ಅನಿಲ ಸೋರಿಕೆಯಿಂದ ಒಂದೇ ಕುಟುಂಬದ ನಾಲ್ವರು ಸಾವನ್ನಪ್ಪಿದ ಘಟನಾ ಸ್ಥಳಕ್ಕೆ ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬರುತ್ತಾರೆಂದು ತರಾತುರಿಯಲ್ಲಿ ಶಾಲೆ ಆವರಣದಲ್ಲಿ ನಿಂತಿದ್ದ ಮಳೆ ನೀರನ್ನು ಹೊರಹಾಕುವ ಪ್ರಯತ್ನಕ್ಕೆ ಅಧಿಕಾರಿಗಳು ಮುಂದಾಗಿದ್ದರು.

ಶಾಲೆಯ ಆವರಣದಲ್ಲೇ ಜೆಸಿಬಿಯಿಂದ ಗುಂಡಿ ತೆಗೆಸಿ, ಗುಂಡಿಯಲ್ಲಿ ನಿಂತ ನೀರನ್ನು ಮೋಟಾರ್ ಮೂಲಕ ಹೊರಹಾಕುವ ಕೆಲಸವನ್ನು ಮಾಡಲಾಯಿತು. ಆದರೆ, ಆ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಲಿಲ್ಲ. ಸರ್ಕಾರಿ ಶಾಲೆ ಎಂದರೆ ಇಷ್ಟೊಂದು ಅಸಡ್ಡೆ, ಸರ್ಕಾರಿ ಶಾಲೆಯಲ್ಲಿ ಓದುವ ಬಡ ಮಕ್ಕಳೆಂದರೆ ಇಷ್ಟೊಂದು ತಾತ್ಸಾರವೇ... ಅಧಿಕಾರಿಗಳಿಗೆ ಕಿಂಚಿತ್ತೂ ಜವಾಬ್ದಾರಿ ಎಂಬುದಿಲ್ಲವೇ ಎಂದು ಯರಗನಹಳ್ಳಿ ಗ್ರಾಮಸ್ಥರು, ಹಳೇ ವಿದ್ಯಾರ್ಥಿಗಳು ತೀವ್ರ ವಿಷಾದ ವ್ಯಕ್ತಪಡಿಸಿದರು.





ಮೈಸೂರು ಮಿತ್ರ

ಡಾ.ಯತೀಂದ್ರ ಎಂಎಲ್‌ಸಿ ಮಾಡದಿದ್ದರೆ ಸಾಮೂಹಿಕ ರಾಜೀನಾಮೆ

ಕಾಂಗ್ರೆಸ್ ಜಿಲ್ಲಾ ಗ್ರಾಮಾಂತರ ಪದವೀಧರ ಘಟಕದ ಅಧ್ಯಕ್ಷ ಎಂ.ರಮೇಶ್ ಎಚ್ಚರಿಕೆ

ತಿ.ನರಸೀಪುರ, ಮೇ 24- ಮಾಜಿ ಶಾಸಕ ಡಾ.ಯತೀಂದ್ರ ಅವರನ್ನು ಎಂಎಲ್‌ಸಿ ಮಾಡದಿದ್ದರೇ ನಾನು ಸೇರಿದಂತೆ ಕಾಂಗ್ರೆಸ್ ಪದವೀಧರ ಘಟಕದ ಎಲ್ಲಾ ಸದಸ್ಯರು ಸಾಮೂಹಿಕವಾಗಿ ರಾಜೀನಾಮೆ ನೀಡಲು ಸಿದ್ಧ ಎಂದು ಕಾಂಗ್ರೆಸ್ ಜಿಲ್ಲಾ ಗ್ರಾಮಾಂತರ ಪದವೀಧರ ಘಟಕದ ಅಧ್ಯಕ್ಷ ಎಂ.ರಮೇಶ್ ಎಚ್ಚರಿಕೆ ನೀಡಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ಯತೀಂದ್ರ ಅವರು ವರುಣ ಕ್ಷೇತ್ರದ ಅಭಿವೃದ್ಧಿಗೆ ಶಕ್ತಿ ಮೀರಿ ಶ್ರಮಿಸಿದ್ದಾರೆ. ಕಾರ್ಯಕರ್ತರು, ಕ್ಷೇತ್ರದ ಜನರೊಂದಿಗೆ ಉತ್ತಮ ಒಡನಾಟ ಇಟ್ಟುಕೊಳ್ಳುವ ಮೂಲಕ ಪಕ್ಷ ಸಂಘಟಿಸಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ತಂದೆಗಾಗಿ ಕ್ಷೇತ್ರ ಬಿಟ್ಟುಕೊಟ್ಟು ಅವರ ಗೆಲುವಿಗಾಗಿ ಶ್ರಮಿಸಿದರು. ಸಿದ್ದರಾಮಯ್ಯ ಅವರನ್ನು ಸೋಲಿಸಬೇಕೆಂಬ ಹುನ್ನಾರ ನಡೆಸಲಾಗಿತ್ತು. ಅಂತಹ ಸಂದರ್ಭದಲ್ಲಿ ಕಾರ್ಯಕರ್ತರು, ಮತದಾರರನ್ನು ವಿಶ್ವಾಸಕ್ಕೆ ತೆಗೆಕೊಂಡು ಕ್ಷೇತ್ರದ್ಯಂತ ಪ್ರವಾಸ ಮಾಡಿ ಸಿದ್ದರಾಮಯ್ಯ ಅವರನ್ನು ಅತ್ಯಧಿಕ ಬಹುಮತದಿಂದ ಗೆಲ್ಲಿಸಿದ್ದರು. ತಂದೆ ಗೆಲುವಿನಲ್ಲಿ ಯತೀಂದ್ರ ಪಾತ್ರ ಹೆಚ್ಚಾಗಿತ್ತು. ಜೊತೆಗೆ ಕೊರೊನಾ ಸಂದರ್ಭ ಬಡವರಿಗೆ ಆಹಾರದ ಕಿಟ್, ಔಷಧ ಹಾಗೂ ಆಂಬುಲೆನ್ಸ್ ನೀಡುವ ಮೂಲಕ ಜನರ ಸಂಕಷ್ಟಕ್ಕೆ ಸ್ಪಂದಿಸಿದ್ದರು. ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಯಲ್ಲಿ ಪಕ್ಷದ ಪರವಾಗಿ ತಾವೇ ಚುನಾವಣೆಗೆ ನಿಂತಿರುವುದಾಗಿ ಭಾವಿಸಿ ಪ್ರಚಾರ ನಡೆಸಿದರು. ಪರಿಣಾಮ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ತಂದೆಯವರು ಮುಖ್ಯಮಂತ್ರಿ ಆಗಿ ಉಪಯುಕ್ತ ಯೋಜನೆಗಳನ್ನು ಜಾರಿಗೆ ತರುವಂತಾಯಿತು. ಇಂತಹವರು ವಿಧಾನ ಪರಿಷತ್ ಸದಸ್ಯರಾದರೇ ಯುವಕರಿಗೆ ಶಕ್ತಿ, ನ್ಯಾಯ ಸಿಗುತ್ತದೆ. ಅಲ್ಲದೇ ಪಕ್ಷ ಬಲವರ್ಧನೆ ಆಗಲಿದೆ. ಕ್ಷೇತ್ರ ಅಭಿವೃದ್ಧಿ ಹೊಂದುವುದರಲ್ಲಿ ಯಾವುದೇ ಸಂಶಯವಿಲ್ಲ. ಒಂದು ವೇಳೆ ಯತೀಂದ್ರ ಅವರಿಗೆ ವಿಧಾನ ಪರಿಷತ್ ಟಿಕೆಟ್ ತಪ್ಪಿದರೆ ನಮ್ಮ ಘಟಕ ಸಾಮೂಹಿಕ ರಾಜೀನಾಮೆ ಕೊಡಲು ಸಿದ್ಧವಾಗಿದೆ ಎಂದರು.



ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಜಿಲ್ಲಾ ಗ್ರಾಮಾಂತರ ಪದವೀಧರ ಘಟಕದ ಅಧ್ಯಕ್ಷ ಎಂ.ರಮೇಶ್ ಮಾತನಾಡಿದರು.

ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಸ್ಪರ್ಧಿಸಲು ಪಕ್ಷ ಮರಿತಿಬ್ಬೇಗೌಡರಿಗೆ ಟಿಕೆಟ್ ನೀಡಿದೆ. ಅವರು ನಮಗೆ ಸ್ಪಂದಿಸಲಿ, ಸ್ಪಂದಿಸದಿರಲಿ ಅವರ ಪರವಾಗಿ ನಮ್ಮ ಘಟಕ ಪ್ರಾಮಾಣಿಕವಾಗಿ ಕೆಲಸ ಮಾಡಲಿದೆ. ಪಕ್ಷದ ಪ್ರಾಮಾಣಿಕ ಕಾರ್ಯಕರ್ತರಾದ ನಾವು ಮರಿತಿಬ್ಬೇಗೌಡರ ಪರ ಕೆಲಸ ಮಾಡಲಿದ್ದೇವೆ ಎಂದರು.

18 ಸ್ಥಾನಗಳಲ್ಲಿ ಗೆಲುವು: ಲೋಕಸಭಾ ಚುನಾವಣೆಯಲ್ಲಿ ರಾಜ್ಯದ 18 ಸ್ಥಾನಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಿ ಲೋಕಸಭೆ ಪ್ರವೇಶ ಮಾಡಲಿದ್ದಾರೆ. ಸಿದ್ದರಾಮಯ್ಯ ಸರ್ಕಾರದ ಯೋಜನೆಗಳು ಈ ಬಾರಿ ಪಕ್ಷದ ಅಭ್ಯರ್ಥಿಗಳ ಕೈ ಹಿಡಿಯಲಿವೆ ಎಂದರು.

ವರುಣ ಕ್ಷೇತ್ರಾಧ್ಯಕ್ಷ ಉಮೇಶ್ ಮಾತನಾಡಿ, ಸರಳ ಸಜ್ಜನಿಕೆಯ ಡಾ.ಯತೀಂದ್ರ ಅವರಿಗೆ ಮೇಲ್ಮನೆಗೆ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್ ನೀಡಬೇಕು. ನಂತರ ಪಕ್ಷವು ಅವರಿಗೆ ಸಚಿವ ಸ್ಥಾನ ನೀಡಬೇಕು. ಆ ಮೂಲಕ ಮೈಸೂರು ಜಿಲ್ಲೆ ಅಭಿವೃದ್ಧಿಗೆ ಮುಂದಾಗಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ಕಾರ್ಮಿಕ ಘಟಕದ ಅಧ್ಯಕ್ಷ ಬಣ್ಣ ಬಸವರಾಜು, ಯುವ ಘಟಕದ ಅಧ್ಯಕ್ಷ ಲಿಂಗರಾಜು(ಅಮಾಸೆ), ಯೋಗೀಶ್ ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಲಿಯೋ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಟರ್ಬೋ (ಮ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಮ್ಯಾಟ್ನಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ)	4 ಪ್ರದರ್ಶನಗಳು
ಸಂಗಂ	
3ನೇ ಕೃಷ್ಣಪ್ಪ (ಕ)	4 ಪ್ರದರ್ಶನಗಳು
ಲಿಡೋ	
ಅಂಜನೀಪುತ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ತ್ರಿಭುಜ (ಕ)	ಬೆಳಗಿನ ಪ್ರದರ್ಶನ
ಕೃಷ್ಣ ನೀ ಬೇಗನೆ ಬಾರೋ (ಕ)	3 ಪ್ರದರ್ಶನಗಳು
ಪ್ರಭಾ	
ಕೃಷ್ಣಾ ನೀ ಬೇಗನೆ ಬಾರೋ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಬೆ.10.15ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.55ಕ್ಕೆ, **3ನೇ ಕೃಷ್ಣಪ್ಪ (ಕ)**: ಮ.1.10ಕ್ಕೆ.
ಸ್ಕ್ರೀನ್ 2	ರಾಮನ ಅವತಾರ (ಕ): ಬೆ.10.30ಕ್ಕೆ, ಬಯ್ಯಾ ಜಿ (ಹಿಂ): ಮ.1.35ಕ್ಕೆ, ಸಂ.4.25ಕ್ಕೆ, ಥಾಲವನ್ (ಮ): ರಾ.7.15ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ದಿ ಜಡ್ಜ್‌ಮೆಂಟ್ (ಕ): ಬೆ.10.20ಕ್ಕೆ, ಸಂ.4.05ಕ್ಕೆ, ರಾ.7.05ಕ್ಕೆ, ಪಿಟಿ ಸರ್ (ತ): ಮ.1.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10.05ಕ್ಕೆ.
ಸ್ಕ್ರೀನ್ 4	ಟರ್ಬೋ (ಮ): ಬೆ.10.10ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಗಾರ್ಫೀಲ್ಡ್ ಮೂವಿ (3ಡಿ)(ಇಂ): ಮ.1.50ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಗಾರ್ಫೀಲ್ಡ್ ಮೂವಿ (3ಡಿ)(ಇಂ): ಬೆ.10.40ಕ್ಕೆ, ಮ.1ಕ್ಕೆ, ಸಂ.6.10ಕ್ಕೆ, ರಾ.8.30ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಮ.3.20ಕ್ಕೆ.
ಸ್ಕ್ರೀನ್ 2	ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ರಾ.7.05ಕ್ಕೆ, ಶ್ರೀಕಾಂತ್ (ಹಿಂ): ಮ.1.05ಕ್ಕೆ, ರಾ.10.10ಕ್ಕೆ,
ಸ್ಕ್ರೀನ್ 3	ಇಂಗ ನಾನ್ ಥಾನ್ ಕಿಂಗು (ತ): ಬೆ.11.05ಕ್ಕೆ, ಇಫ್ 2024 (ಇಂ): ಮ.1.55ಕ್ಕೆ, ರಾ.7.35ಕ್ಕೆ, A (ಕ): ಸಂ.4.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10ಕ್ಕೆ.
ಸ್ಕ್ರೀನ್ 4	ರಾಮನ ಅವತಾರ (ಕ): ಮ.12.45ಕ್ಕೆ, ಕೃಷ್ಣ ನೀ ಬೇಗನೇ ಬಾರೋ (ಕ): ಮ.3.40ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಸಂ.6.55ಕ್ಕೆ, ಅರಮನೈ 4 (ತ): ರಾ.9.45ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821-2973519

ಸ್ಕ್ರೀನ್ 1	ಎವಿಡೆನ್ಸ್ (ಕ): ಬೆ.11.15ಕ್ಕೆ, ಅರನ್‌ಮನೈ 4 (ತ): ಮ.1.15ಕ್ಕೆ, ಟರ್ಬೋ (ಮ): ಸಂ.4ಕ್ಕೆ, ಮೂರನೇ ಕೃಷ್ಣಪ್ಪ (ಕ): ಸಂ.6.40ಕ್ಕೆ, ದಿ ಜಡ್ಜ್‌ಮೆಂಟ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಬೆ.10.20ಕ್ಕೆ, ಸಂ.4.05ಕ್ಕೆ, ಟರ್ಬೋ (ಮ): ಮ.1.05ಕ್ಕೆ, ಸಂ.6.50ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ದಿ ಜಡ್ಜ್‌ಮೆಂಟ್ (ಕ): ಬೆ.10.40ಕ್ಕೆ, ಮ.3.55ಕ್ಕೆ, 3ದೇವಿ (ಕ): ಮ.1.30ಕ್ಕೆ, ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, **4N6 (ಕ)**: ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಹುಣಸೂರು, ಮೇ 24- ವಿಶ್ವಮಾನವ ವಿದ್ಯಾರ್ಥಿ ಯುವ ವೇದಿಕೆ ಹಾಗೂ ಕರ್ನಾಟಕ ಮತದಾರರ ಜಾಗೃತಿ ವೇದಿಕೆಯಿಂದ 2023-24ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ.80ರಷ್ಟು ಅಂಕ ಪಡೆದ ರಾಜ್ಯದ ಎಲ್ಲಾ ಶಾಲಾ-ಕಾಲೇಜು ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಂದ ರಾಜ್ಯ ಮಟ್ಟದ ವಿಶ್ವಮಾನವ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ರಾಷ್ಟ್ರಕವಿ ಕುವೆಂಪು ಅವರ ವಿಶ್ವಮಾನವ ಸಂದೇಶವನ್ನು ಯುವಜನರಿಗೆ ತಿಳಿಸುವುದು ಹಾಗೂ ವಿಶ್ವಮಾನವ ಪ್ರತಿಭಾ ಪುರಸ್ಕಾರ ನೀಡುವ ಮೂಲಕ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ ಪ್ರೋತ್ಸಾಹಿಸುವ ಸಲುವಾಗಿ 1996ರಿಂದ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ. ರಾಜ್ಯದ ಯಾವುದೇ ಜಾತಿ ಮತ್ತು ಧರ್ಮದ ಪ್ರತಿಭಾವಂತ ವಿದ್ಯಾರ್ಥಿಗಳು ಪುರಸ್ಕಾರ ಪಡೆಯಲು ಅರ್ಜಿ ಸಲ್ಲಿಸಬಹುದಾಗಿದೆ ಎಂದು ವೇದಿಕೆ ರಾಜ್ಯಾಧ್ಯಕ್ಷ ಎಂ.ಜೆ. ಸುರೇಶ್‌ಗೌಡ ತಿಳಿಸಿದ್ದಾರೆ.

ಆಸಕ್ತ ವಿದ್ಯಾರ್ಥಿಗಳು ಅಂಕಪಟ್ಟಿ, ಎರಡು ಭಾವಚಿತ್ರಗಳು, ಆಧಾರ್ ಪ್ರತಿಯೊಂದಿಗೆ, ವಿಳಾಸ, ಮೊಬೈಲ್ ಸಂಖ್ಯೆ ಸೇರಿದಂತೆ ಸಂಪೂರ್ಣ ವಿವರಗಳ ಸಹಿತ ಅರ್ಜಿಯನ್ನು ಶಾಲಾ-ಕಾಲೇಜಿನ ವಿವರಗಳೊಂದಿಗೆ ಎಂ.ಜೆ.ಸುರೇಶ್‌ಗೌಡ ಸಂಸ್ಥಾಪಕ ಅಧ್ಯಕ್ಷರು ವಿಶ್ವಮಾನವ ವಿದ್ಯಾರ್ಥಿ ಯುವ ವೇದಿಕೆ #2618, ವಾಲ್ಮೀಕಿ ರಸ್ತೆ ಒಂಟಿಕೊಪ್ಪಲ್, ಮೈಸೂರು 570002 ಈ ವಿಳಾಸಕ್ಕೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಮೊ.9844027885 ಅನ್ನು ಸಂಪರ್ಕಿಸಿ ಎಂದು ಕುವೆಂಪು ವಿದ್ಯಾರ್ಥಿ ಯುವ ವೇದಿಕೆ ಕಾರ್ಯದರ್ಶಿ ಕೆ. ಮೋಹಿತ್ ತಿಳಿಸಿದ್ದಾರೆ.

ಹೊಸಅಗ್ರಹಾರ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಹೊಸಅಗ್ರಹಾರ ಪಿಎಸಿಎಸ್ ಅಧ್ಯಕ್ಷರಾಗಿ ರಾಮೇಗೌಡ, ಉಪಾಧ್ಯಕ್ಷೆಯಾಗಿ ನಾಗಮ್ಮ ಆಯ್ಕೆಯಾದರು.

ಭೇರ್ಯ, ಮೇ 24- ತಾಲೂಕಿನ ಹೊಸಅಗ್ರಹಾರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ರಾಮೇಗೌಡ, ಉಪಾಧ್ಯಕ್ಷೆಯಾಗಿ ನಾಗಮ್ಮ ಅವಿರೊಧವಾಗಿ ಆಯ್ಕೆಯಾಗಿದ್ದಾರೆ.

ಹಿಂದಿನ ಅಧ್ಯಕ್ಷ ಗೋಪಾಲೇ ಗೌಡ, ಉಪಾಧ್ಯಕ್ಷ ಚಂದ್ರಶೇಖರ್ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ರಾಮೇಗೌಡ, ಉಪಾಧ್ಯಕ್ಷ ಸ್ಥಾನಕ್ಕೆ ನಾಗಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಹಕಾರ ಇಲಾಖೆ ಅಭಿವೃದ್ಧಿ ಅಧಿಕಾರಿ ಎಸ್.ರವಿ ಘೋಷಿಸಿದರು. ಅವರಿಗೆ ಸಂಘದ ಸಿಇಓ ರವಿ ಸಹಕಾರ ನೀಡಿದರು.

ನೂತನ ಅಧ್ಯಕ್ಷ ರಾಮೇಗೌಡ ಮಾತನಾಡಿ, ಸಂಘದ ಸದಸ್ಯರು ತಾವು ಪಡೆದ ಸಾಲವನ್ನು ಸಕಾಲಕ್ಕೆ ಮರು ಪಾವತಿಸಿದರೇ ಸಂಘ ಅಭಿವೃದ್ಧಿ ಹೊಂದಲು ಸಾಧ್ಯ. ಸಂಘದ ಷೇರುದಾರರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುತ್ತಿರುವುದು ಸಹಕಾರ ಸಂಘ ಮಾತ್ರ. ಐದು ಲಕ್ಷದವರೆಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡಲಾಗುತ್ತಿದ್ದು, ಅರ್ಹ ಸದಸ್ಯರು ಪಹಣಿ, ಮತ್ತಿತರ ದಾಖಲೆ ಹಾಗೂ ವಿವಿಧ ಬ್ಯಾಂಕ್‌ಗಳಿಂದ ನಿರಪೇಕ್ಷಣಾ ಪತ್ರ ಪಡೆದು ನೀಡಿದರೇ ಸಾಲ ನೀಡಲಾಗುವುದು ಎಂದರು.

ಈ ವೇಳೆ ನಿರ್ದೇಶಕರಾದ ಚಂದ್ರೇಗೌಡ, ಡಿ.ಎಸ್.ಯೋಗೇಶ್, ಗೋಪಾಲೇಗೌಡ, ಎಂ.ಜೆ.ಮಂಜೇಗೌಡ, ಚಂದ್ರಶೇಖರ್, ಹೆಚ್.ಎಸ್, ಗೋಪಾಲ್, ಶಾರದಮ್ಮ, ಓಬೇಗೌಡ, ಸೋಮನಾಯಕ, ಸ್ವಾಮೀಗೌಡ, ಎಂಡಿಸಿಸಿ ಬ್ಯಾಂಕ್ ಮೇಲ್ವಿಚಾರಣೆ ಬಸವರಾಜು ಸೇರಿದಂತೆ ಅನೇಕರಿದ್ದರು.

ಹುಣಸೂರಲ್ಲಿ ಬುದ್ಧ ಪೂರ್ಣಿಮೆ ಆಚರಣೆ



ಹುಣಸೂರು, ಮೇ 24- ನಗರದ ದಲಿತ ಮುಖಂಡ ವರದರಾಜು ಅವರ ಮನೆಯಲ್ಲಿ ಬುದ್ಧ ಪೂರ್ಣಿಮೆ ಆಚರಿಸಲಾಯಿತು.

ಹಿರಿಯ ಸಾಹಿತಿ ನಂಜರಾಜೇ ಅರಸ್ ಮಾತನಾಡಿ, ಬುದ್ಧ ಪೂರ್ಣಿಮೆ ಒಂದು ಪವಿತ್ರವಾದ ದಿನ. ಧ್ಯಾನ ಹೆಚ್ಚಾದಂತೆ ಜ್ಞಾನ ಹೆಚ್ಚಾಗುವುದು, ಜ್ಞಾನ ಹೆಚ್ಚಾದಂತೆ ಮೌನ ಹೆಚ್ಚಾಗುವುದು ಎಂದು ಹತ್ತು ಹಲವು ವಿಷಯಗಳನ್ನು ಸಾರಿ ವಿಶ್ವಕ್ಕೆ ಶಾಂತಿ ಬೋಧಿಸಿದ ಜಗದ ಬೆಳಕು ಭಗವಾನ್ ಬುದ್ಧ ಅವರ ಬೋಧನೆಗಳು ಹಲವು ಮಂದಿಗೆ ದಾರಿದೀಪವಾಗಿದೆ. ಈ ದಿನ ಅತ್ಯಂತ ಮಹತ್ವಪೂರ್ಣವಾಗಿದ್ದು, ಭಗವಾನ್ ಬುದ್ಧನ ಬೋಧನೆಗಳನ್ನು ಅನುಸರಿಸಿದಲ್ಲಿ ಜಗತ್ತಿನಲ್ಲಿ ಶಾಂತಿ ನೆಲೆಸಲಿದೆ ಎಂದರು. ಈ ಸಂದರ್ಭ ಮುಖಂಡ ಸತ್ಯಪ್ಪ, ಪುಟ್ಟನಂಜಪ್ಪ, ನಿವೃತ್ತ ಡಿಡಿಪಿಐ ಪುಟ್ಟನಂಜಯ್ಯ, ಜೆ.ಮಹದೇವ್, ಕೊಳಗಟ್ಟ ಕೃಷ್ಣ, ವಕೀಲರಾದ ಅಶೋಕ್ ಮತ್ತು ವರದರಾಜು ಇನ್ನಿತರರಿದ್ದರು.

ಮೇ 27, ಸಂದರ್ಶನ

ಹೆಚ್.ಡಿ.ಕೋಟೆ, ಮೇ 24- ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮೇ 27ರಂದು ಬೆಳಗ್ಗೆ 10ಕ್ಕೆ ಉದ್ಯೋಗ ಸಂದರ್ಶನ ನಡೆಯಲಿದೆ. ಸಂದರ್ಶನದಲ್ಲಿ ಬೆಂಗಳೂರಿನ ಪ್ರತಿಷ್ಠಿತ ಕಾಲ್ ಮ್ಯಾನ್ ಸರ್ವಿಸಸ್ ಕಂಪನಿ ಭಾಗವಹಿಸುತ್ತಿದ್ದು, ಪದವಿ ವಿದ್ಯಾರ್ಹತೆಯುಳ್ಳ ಆಸಕ್ತರು ಮೂಲ ದಾಖಲಾತಿಗಳೊಂದಿಗೆ ಹಾಜರಾಗಬಹುದು ಎಂದು ಪ್ರಾಂಶುಪಾಲ ಡಾ.ಜೆಎನ್.ವೆಂಕಟೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮೊ.ಸಂ: 9845669983, 9743762047 ಅನ್ನು ಸಂಪರ್ಕಿಸಿ.

ದಾಯಾದಿ ಕಲಹ: ಮಹಿಳೆ ಕೊಲೆ

ನಂಜನಗೂಡು, ಮೇ 24- ದನ ಕಟ್ಟುವ ಕೊಟ್ಟಿಗೆ ವಿಚಾರಕ್ಕೆ ದಾಯಾದಿಗಳ ನಡುವೆ ನಡೆದ ಕಲಹದಲ್ಲಿ ಮಹಿಳೆ ಕೊಲೆಯಾಗಿರುವ ಘಟನೆ ತಾಲೂಕಿನ ತಗಡೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ನಿಂಗಣ್ಣ ಅವರ ಪತ್ನಿ ವಿನೋದಾ (45) ಸಾವನ್ನಪ್ಪಿದವರು. ಸಹೋದರರಾದ ನಿಂಗಣ್ಣ ಹಾಗೂ ಸ್ವಾಮಿ ಕುಟುಂಬದವರ ನಡುವೆ ದನದ ಕೊಟ್ಟಿಗೆ ವಿಚಾರವಾಗಿ ಗುರುವಾರ ಸಂಜೆ ಗಲಾಟೆ ನಡೆದಿದೆ. ಶುಕ್ರವಾರ ಬೆಳಗ್ಗೆ ಇದೇ ವಿಚಾರವಾಗಿ ಸ್ವಾಮಿ ಪುತ್ರ ಅಭಿಷೇಕ್ ಎಂಬಾತ ನಿಂಗಣ್ಣ ಪತ್ನಿ ವಿನೋದಾ ಅವರೊಂದಿಗೆ ಮತ್ತೆ ಕ್ಯಾತೆ ತೆಗೆದು ಆಕೆ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದಾನೆ. ಇದರಿಂದ ತೀವ್ರ ನಿತ್ರಾಣಗೊಂಡಿದ್ದ ವಿನೋದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ ಎನ್ನಲಾಗಿದೆ. ಈಕೆ ಸಾವನ್ನಪ್ಪಿದ ವಿಚಾರ ತಿಳಿಯುತ್ತಿದ್ದಂತೆ ಆರೋಪಿ ಅಭಿಷೇಕ್ ತಲೆಮರೆಸಿಕೊಂಡಿದ್ದು, ಈ ಸಂಬಂಧ ಕವಲಂದೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಟ್ಟದಪುರ ಹೋಟೆಲ್‌ಗಳಲ್ಲಿ ಸ್ವಚ್ಛತೆ ಬಗ್ಗೆ ಜಾಗೃತಿ

ಬೆಟ್ಟದಪುರ, ಮೇ 24- ಆರೋಗ್ಯ ಇಲಾಖೆ ಮತ್ತು ಬೆಟ್ಟದಪುರ ಗ್ರಾಪಂ ವತಿಯಿಂದ ಹೋಟೆಲ್‌ಗಳಲ್ಲಿ ಸ್ವಚ್ಛತೆ ಬಗ್ಗೆ ಅರಿವು ಮೂಡಿಸಲಾಯಿತು.

ಗ್ರಾಪಂ ವ್ಯಾಪ್ತಿಯ ಹೋಟೆಲ್‌ಗಳಿಗೆ ಭೇಟಿ ನೀಡಿದ ಅಧಿಕಾರಿಗಳು ಕರಪತ್ರ ಹಂಚಿ, ಹೋಟೆಲ್ ಅನ್ನು ಸ್ವಚ್ಛವಾಗಿಟ್ಟುಕೊಳ್ಳುವ ಮೂಲಕ ಸಾಂಕ್ರಾಮಿಕ ರೋಗ ಹರಡದಂತೆ ಮುನ್ನೆಚ್ಚರಿಕೆ ವಹಿಸಬೇಕು. ನಿತ್ಯ ಸಾರ್ವಜನಿಕರಿಗೆ ಕುಡಿಯಲು ಬಿಸಿನೀರು ಕೊಡಬೇಕು. ಅಲ್ಲದೇ ಪಾತ್ರೆಗಗಳನ್ನು ಸ್ವಚ್ಛವಾಗಿ ತೊಳೆದು ಆಹಾರ ತಯಾರಿಸಬೇಕು. ಹೋಟೆಲ್‌ನಲ್ಲಿ ಯಾವುದೇ ಗಲೀಜು ಇದ್ದಲ್ಲಿ ಅದನ್ನು ತೆರವು ಗೊಳಿಸಬೇಕು. ಅಲ್ಲದೇ ಹೋಟೆಲ್ ಮುಂದೆ ಸೊಳ್ಳೆಗಳು ಬಾರದಂತೆ ಔಷಧ ಸಿಂಪಡಿಸಬೇಕು ಎಂದು ಮಾಲೀಕರಿಗೆ ಅರಿವು ಮೂಡಿಸಲಾಯಿತು. ಹೋಟೆಲ್‌ನಲ್ಲಿ ಸ್ವಚ್ಛತೆ ಕಾಪಾಡದಿದ್ದರೇ ಕಠಿಣ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.



ಈ ವೇಳೆ ಪಿಡಿಓ ಮಂಜುನಾಥ್, ಬೆಟ್ಟದಪುರ ವೈದ್ಯಾಧಿಕಾರಿ ಡಾ.ಪೂಜಾ, ಆರೋಗ್ಯ ನಿರೀಕ್ಷಕ ಕುಮಾರ್, ಕಾರ್ಯದರ್ಶಿ ಪಾಂಡು, ನೌಕರರಾದ ದೇವರಾಜ್, ದೀಪು ಇತರರಿದ್ದರು.

ಸೆಪಕ್‌ಟಕ್ರಾ ಪಂದ್ಯಾವಳಿಯಲ್ಲಿ ರನ್ನರ್ ಅಪ್

ಹುಣಸೂರು, ಮೇ 24- ಮಲೇಷಿಯಾದ ಕೌಲಲಾಂಪುರದಲ್ಲಿ ನಡೆದ ಇಂಡೋ ಮಲೇಷಿಯಾ ಇಂಟರ್‌ನ್ಯಾಷನಲ್ ಸೆಪಕ್‌ಟಕ್ರಾ ಚಾಂಪಿಯನ್‌ಶಿಪ್‌ನಲ್ಲಿ ತಾಲೂಕಿನ ತಟ್ಟೆಕೆರೆ ಗ್ರಾಮದ ನಿವಾಸಿ ಲಕ್ಷ್ಮಣ ಹಾಗೂ ಮಂಜುಳ ದಂಪತಿ ಪುತ್ರಿ ಧನುಷ ಭಾರತವನ್ನು ಪ್ರತಿನಿಧಿಸಿ ರನ್ನರ್ ಅಪ್ ಪ್ರಶಸ್ತಿ ಪಡೆದಿದ್ದಾರೆ.



2 ಲಕ್ಷ ದೋಚಿದ ಖದೀಮರು

ನಂಜನಗೂಡು, ಮೇ 24- ವ್ಯಕ್ತಿಯೊಬ್ಬರ ಗಮನ ಬೇರೆಡೆ ಸೆಳೆದು ದುಷ್ಕರ್ಮಿಗಳು 2 ಲಕ್ಷ ರೂ. ದೋಚಿರುವ ಘಟನೆ ಶುಕ್ರವಾರ ನಗರದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಬಳಿ ನಡೆದಿದೆ.

ತಾಲೂಕಿನ ಚಿಲಕಹಳ್ಳಿ ಗ್ರಾಮದ ಜಿ.ಶಿವಯ್ಯ ಹಣ ಕಳೆದುಕೊಂಡವರು. ಈತ ಶುಕ್ರವಾರ ಬೆಳಗ್ಗೆ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಲ್ಲಿರುವ ತಮ್ಮ ಖಾತೆಯಿಂದ ಎರಡು ಲಕ್ಷ ರೂ. ಡ್ರಾ ಮಾಡಿ ಹೊರಗೆ ಬಂದು ಬೈಕ್ ಮೇಲೆ ಕುಳಿತಿದ್ದ ವೇಳೆ ಅಲ್ಲಿಗೆ ಬಂದ ದುಷ್ಕರ್ಮಿಗಳು ರಸ್ತೆಯಲ್ಲಿ ಹಣವಿಟ್ಟು ನಿಮ್ಮ ಹಣ ಕೆಳಗೆ ಬಿದ್ದಿದೆ ನೋಡಿ ಎಂದು ಶಿವಯ್ಯ ಅವರ ಗಮನವನ್ನು ಬೇರೆಡೆಗೆ ಸೆಳೆದು ಹಣ ದೋಚಿ ಪರಾರಿಯಾಗಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪಟ್ಟಣ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಪತ್ತೆಗಾಗಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕೆ.ವಿವೇಕಾನಂದ ಪರ ಜೆಡಿಎಸ್, ಬಿಜೆಪಿ ಮುಖಂಡರ ಮತಯಾಚನೆ



ದಕ್ಷಿಣ ಶಿಕ್ಷಕರ ಕ್ಷೇತ್ರದ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಪರ ಜೆಡಿಎಸ್, ಬಿಜೆಪಿ ಮುಖಂಡರು ಮತ ಯಾಚಿಸಿದರು.

ಕೆ.ಆರ್.ನಗರ, ಮೇ 24- ತಾಲೂಕಿನ ಜೆಡಿಎಸ್ ಮತ್ತು ಬಿಜೆಪಿ ಮುಖಂಡರು ದಕ್ಷಿಣ ಶಿಕ್ಷಕರ ಕ್ಷೇತ್ರದ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದ ಪರ ಪಟ್ಟಣದಲ್ಲಿ ಮತಯಾಚಿಸಿದರು.

ಪಟ್ಟಣದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿಗೆ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಹೊಸಳ್ಳಿ ವೆಂಕಟೇಶ್, ಜಿಪಂ ಮಾಜಿ ಸದಸ್ಯ ಅಮಿತ್ ವಿ.ದೇವರಹಟ್ಟಿ ನೇತೃತ್ವದಲ್ಲಿ ಭೇಟಿ ನೀಡಿ ವಿವೇಕಾನಂದ ಅವರಿಗೆ ಮತ ನೀಡುವಂತೆ ಉಪನ್ಯಾಸಕರಲ್ಲಿ ಮತ ಯಾಚಿಸಿದರು. ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಹೊಸಳ್ಳಿ ವೆಂಕಟೇಶ್ ಮಾತನಾಡಿ, ರಾಜ್ಯದ ಅಭಿವೃದ್ಧಿಗಾಗಿ ಸೌಮ್ಯ ಸ್ವಭಾವದ ಎರಡೂ ಪಕ್ಷಗಳ ಒಮ್ಮತದ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಕೆ.ವಿವೇಕಾನಂದ ಅವರ ಗೆಲುವು ನಿಶ್ಚಿತವಾಗಿದ್ದು, ಅವರಿಗೆ ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ಶಿಕ್ಷಕ ಬಂಧುಗಳು ಅತಿ ಹೆಚ್ಚು ಮತ ನೀಡಿ ಗೆಲ್ಲಿಸುವಂತೆ ಮನವಿ ಮಾಡಿದರು.


ಲಂಚಗುಳಿತನ, ಭ್ರಷ್ಟಾಚಾರ, ವರ್ಗಾವಣೆ ಸೇರಿದಂತೆ ದ್ವೇಷ ರಾಜಕಾರಣ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರಕ್ಕೆ ಬುದ್ಧಿ ಕಲಿಸಲು ಮೈತ್ರಿ ಅಭ್ಯರ್ಥಿ ಗೆಲ್ಲಿಸುವಂತೆ ಮನವಿ ಮಾಡಿದರು.

ಕಾಂಗ್ರೆಸ್ ಅಭ್ಯರ್ಥಿ ತಮ್ಮ ಅಧಿಕಾರಾವಧಿಯಲ್ಲಿ ಶಿಕ್ಷಕರ ಪರ ಕೆಲಸ ಮಾಡದೆ ಕೇವಲ ಜೆಡಿಎಸ್ ಮತ್ತು ಬಿಜೆಪಿ ಮುಖಂಡರನ್ನು ಟೀಕಿಸುವ ಮೂಲಕ ಕಾಲ ಕಳೆದಿದ್ದು, ಇದೀಗ ಶಿಕ್ಷಕರ ಪರ ಹೋರಾಡುವ ಭರವಸೆ ನೀಡುತ್ತಿರುವ ಅವರು ಜೆಡಿಎಸ್ ಪಕ್ಷಕ್ಕೆ ಮೋಸ ಮಾಡಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿರುವ ಮರಿತಿಬ್ಬೇಗೌಡರಿಗೆ ಬುದ್ಧಿ ಕಲಿಸಲು ಎರಡೂ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಪಣತೊಟ್ಟಿದ್ದು ಈ ಚುನಾವಣೆಯಲ್ಲಿ ಅವರ ಸೋಲು ಖಚಿತ ಎಂದರು.

ಲೋಕಸಭಾ ಚುನಾವಣೆಯಲ್ಲಿ ಗೆದ್ದು ಸ್ಪಷ್ಟ ಬಹುಮತದೊಂದಿಗೆ ಎನ್‌ಡಿಎ ಮೈತ್ರಿಕೂಟ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಬಗ್ಗೆ ಸಮೀಕ್ಷೆಗಳು ಹೇಳುತ್ತಿದ್ದು, ಮತ್ತೊಮ್ಮೆ ಮೋದಿ ಅವರು ಪ್ರಧಾನಿಯಾಗುತ್ತಿರುವ ವೇಳೆ ಎನ್‌ಡಿಎ ಮೈತ್ರಿಕೂಟ ಬಲಪಡಿಸಲು ಕೆ.ವಿವೇಕಾನಂದ್ ಅವರನ್ನು ಗೆಲ್ಲಿಸುವಂತೆ ಮನವಿ ಮಾಡಿದರು.

ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಗ್ಯಾರಂಟಿಗಳ ಘೋಷಣೆ ಮಾಡಿರುವುದೇ ವರ್ಷದ ಸಾಧನೆ ಎನ್ನುತ್ತಿದ್ದು, ರಾಜ್ಯದ ಅಭಿವೃದ್ಧಿ, ಬರಗಾಲ ನಿರ್ವಹಣೆ ಬಗ್ಗೆ ಕ್ರಮ ಕೈಗೊಳ್ಳದೇ ಕಾಲ ಕಳೆಯುತ್ತಿರುವ ಸರ್ಕಾರವನ್ನು ಎಚ್ಚರಿಸಲು ಈ ಚುನಾವಣೆಯಲ್ಲಿ ಮೈತ್ರಿ ಅಭ್ಯರ್ಥಿ ಗೆಲ್ಲಿಸುವಂತೆ ತಿಳಿಸಿದರು. ಈ ವೇಳೆ ರಾಜ್ಯ ಜೆಡಿಎಸ್ ಕಾರ್ಯದರ್ಶಿ ಚಂದ್ರಶೇಖರ್, ತಾಲೂಕು ಜೆಡಿಎಸ್ ಅಧ್ಯಕ್ಷ ಎಚ್.ಸಿ.ಕುಮಾರ್, ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ಪುರಸಭಾ ಸದಸ್ಯ ಉಮೇಶ್, ಮಹಿಳಾ ಜಿಲ್ಲಾಧ್ಯಕ್ಷ ದಾಕ್ಷಾಯಿಣಿ, ಮುಖಂಡರಾದ ಮಿರ್ಲೆ ಧನಂಜಯ, ಧರ್ಮ ಸಾ.ರಾ.ತಿಲಕ್, ಮಾರ್ಕಂಡಯ್ಯ, ಉಮಾಕಾಂತ್, ರುದ್ರೇಶ್, ಮಂಜುನಾಥ್, ಪ್ರಭಾಕರ್ ಜೈನ್, ಪ್ರಾಂಶುಪಾಲ ಪ್ರೊ.ವಿಜಯ್, ಉಪನ್ಯಾಸಕರಾದ ಪ್ರಶಾಂತ್, ಗಣೇಶ್, ಶಂಕರ್, ಕಿರಣ್, ತ್ರಿವೇಣಿ ಸೇರಿದಂತೆ ಇನ್ನಿತರರಿದ್ದರು.

ಛಾಯಾಗ್ರಾಹಕನ ಮೇಲೆ ಹಲ್ಲೆ ಖಂಡಿಸಿ ಪ್ರತಿಭಟನೆ



ಹೆಚ್.ಡಿ.ಕೋಟೆ, ಮೇ 24- ಕ್ಷುಲ್ಲಕ ಕಾರಣಕ್ಕೆ ಬೆಂಗಳೂರಿನಲ್ಲಿ ಛಾಯಾಗ್ರಾಹಕನ ಮೇಲೆ ಹಲ್ಲೆ ಖಂಡಿಸಿ ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕು ಛಾಯಾಗ್ರಾಹಕರ ಸಂಘದಿಂದ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ತಾಲೂಕು ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು ಕೆಲಕಾಲ ಪ್ರತಿಭಟನೆ ನಡೆಸಿ ತಹಸೀಲ್ದಾರ್ ಶ್ರೀನಿವಾಸ್ ಅವರಿಗೆ ಮನವಿ ಸಲ್ಲಿಸಿದರು.

ಸಂಘದ ಮಾಜಿ ಅಧ್ಯಕ್ಷ ಕನ್ನಡ ಪ್ರಮೋದ್ ಮಾತನಾಡಿ, ಖಾಸಗಿ ಕಾರ್ಯಕ್ರಮವೊಂದರಲ್ಲಿ ಕ್ಷುಲ್ಲಕ ಕಾರಣಕ್ಕೆ ಕಿಡಿಗೇಡಿಗಳು ಛಾಯಾಗ್ರಾಹಕನ ಮೇಲೆ ಹಲ್ಲೆ ನಡೆಸಿದ್ದಾರೆ. ಇದನ್ನು ಪ್ರಶ್ನಿಸಿದವರ ಜೊತೆಗೂ ಅಸಭ್ಯವಾಗಿ ನಡೆದುಕೊಂಡಿದ್ದಾರೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಈ ಸಂಬಂಧ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಮನವಿ ಸ್ವೀಕರಿಸಿ ಮಾತನಾಡಿದ ತಹಸೀಲ್ದಾರ್ ಶ್ರೀನಿವಾಸ್ ಛಾಯಾಗ್ರಾಹಕರ ಮೇಲೆ ಹಲ್ಲೆ ನಡೆಸಿರುವುದು ಖಂಡನೀಯ. ಈ ಕೃತ್ಯ ಎಸಗಿದವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಒತ್ತಾಯಿಸಲಾಗುವುದು ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷ ಬಾಲಸುಬ್ರಹ್ಮಣ್ಯ, ಮಾಜಿ ಅಧ್ಯಕ್ಷರಾದ ಮನೋಜ್, ರಘುರಾಮ್, ಪ್ರಕಾಶ್, ಹೊನ್ನೇಗೌಡ, ನಾಗೇಂದ್ರ, ಸ್ವಾಮಿ, ವೆಂಕಿ, ರವಿಆರಾಧ್ಯ, ಕುಮಾರ್, ಸೋಮೇಶ್, ಪ್ರತಾಪ, ನಂಜುಂಡ, ಗುರು, ಸಂತೋಷ್ ಇದ್ದರು.

ಹುರ ಕಿತ್ತೂರು ರಾಣಿ ಚೆನ್ನಮ್ಮ ಶಾಲೆಗೆ 100ರಷ್ಟು ಫಲಿತಾಂಶ

ಮಲ್ಕುಂಡಿ, ಮೇ 24- ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹುರ ಗ್ರಾಮದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ ಶೇ.100ರಷ್ಟು ಫಲಿತಾಂಶ ಬಂದಿದ್ದು, ವಿದ್ಯಾರ್ಥಿ ಗೀತಾಂಜಲಿ 601 ಅಂಕ ಪಡೆದು ಶಾಲೆಗೆ ಕೀರ್ತಿ ತಂದಿದ್ದಾಳೆ ಎಂದು ಪ್ರಾಂಶುಪಾಲ ಮಂಜುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

